ದಕ್ಷಿಣಕನ್ನಡ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ–ಸಾಮಾಜಿಕ ಸಬಲೀಕರಣ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪಿಎಚ್.ಡಿ (ಅಭಿವೃದ್ಧಿ ಅಧ್ಯಯನ) ಪದವಿಗಾಗಿ ಅರ್ಪಿಸುವ ನಿಬಂಧ

ಸಂಶೋಧಕರು

ವಾಣಿಶ್ರೀ ವೈ

ನೋಂದಣಿ ಸಂಖ್ಯೆ ೧೬೧೧೧೧೦೩೦೦೫೦

ಮಾರ್ಗದರ್ಶಕರು

ಡಾ|| ಸುಧಾ.ಕೆ

ಸಹಾಯಕ ಪ್ರಾಧ್ಯಾಪಕರು

ವಾಣಿಜ್ಯ ಶಾಸ್ತ್ರ ವಿಭಾಗ

ಬೆಸೆಂಟ್ ಮಹಿಳಾ ಕಾಲೇಜು ಕೊಡಿಯಾಲ್‌ಬೈಲ್ ಮಂಗಳೂರು

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು –575001

2017

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ –ಸಾಮಾಜಿಕ ಸಬಲೀಕರಣ

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್(ಅಭಿವೃದ್ಧಿ ಅಧ್ಯಯನ) ಪದವಿಗಾಗಿ ಅರ್ಪಿಸುವ ನಿಬಂಧ

ಸಂಶೋಧಕರು

ವಾಣಿಶ್ರೀ ವೈ

ನೊಂದಣಿ ಸಂಖ್ಯೆ ೧೬೧೧೧೧೦೩೦೦೫೧

ಮಾರ್ಗದರ್ಶಕರು

ಡಾ॥ ಸುಧಾ.ಕೆ

ಸಹಾಯಕ ಪ್ರಾಧ್ಯಾಪಕರು

ವಾಣಿಜ್ಯ ಶಾಸ್ತ್ರ ವಿಭಾಗ

ಬೆಸೆಂಟ್ ಮಹಿಳಾ ಕಾಲೇಜು ಕೊಡಿಯಾಲ್‌ಬೈಲ್ ಮಂಗಳೂರು

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು –575001

2017

ದೃಢೀಕರಣ ಪತ್ರ

ವಾಣಿಶ್ರೀ ವೈ ಯವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ದಕ್ಷಿಣಕನ್ನಡ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ – ಸಾಮಾಜಿಕ ಸಬಲೀಕರಣ"** ಎಂಬ ಶೀರ್ಷಿಕೆಯ ಈ ನಿಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿರುತ್ತಾರೆ. ಈ ನಿಬಂಧವು ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಈ ನಿಬಂಧವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ಸ್ಥಳ:ಮಂಗಳೂರು

ದಿನಾಂಕ: 18· 08· 2017

ಡಾ॥ ಸುಧಾ.ಕೆ

ಸಂಶೋಧನಾ ಮಾರ್ಗದರ್ಶಕರು

Dr. SUDHA K. Ph.D.,
Dept. of Commerce
Besant Women's College
MANGALORE - 575 003.

ಪ್ರಮಾಣ ಪತ್ರ

ಕನ್ನಡ ವಿಶ್ವ ವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **"ದಕ್ಷಿಣಕನ್ನಡ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ – ಸಾಮಾಜಿಕ ಸಬಲೀಕರಣ"** ಎಂಬ ಈ ನಿಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ಥೀಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ॥ ಸುಧಾ.ಕೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ನಿಬಂಧವನ್ನು ಬೇರಾವುದೇ ಪದವಿ ಅಥವಾ ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಲಾಭಕ್ಕಾಗಿ ಆರ್ಥಿಕ ಲಾಭಕ್ಕಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

Vaneshree

ವಾಣಿಶ್ರೀ ವೈ

ಸಂಶೋಧಕರು

ಪರಿವಿಡಿ

ಕೋಷ್ಠಕಗಳ ಪಟ್ಟಿ

ನಕ್ಷೆಗಳ ಪಟ್ಟಿ

ಅಧ್ಯಾಯ ೦೧

ಅಧ್ಯಯನದ ಪೀಠಿಕೆ, ಸಮಸ್ಯೀಕರಣ, ಉದ್ದೇಶ, ವಿಧಾನ, ಇತಿಮಿತಿಗಳು, ರೂಪುರೇಷೆ ಮತ್ತು ಗ್ರಂಥ ಪರಾಮರ್ಶೆ

ಅಧ್ಯಾಯ –೧

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ, ಸಾಮಾಜಿಕ ಸಬಲೀಕರಣ

ಅಧ್ಯಾಯ ೧: ಈ ಅಧ್ಯಾಯವು ಮಹಿಳಾ ಸಬಲೀಕರಣದ ಅಗತ್ಯದ ಬಗ್ಗೆ, ಮಹಿಳಾ ಸಬಲೀಕರಣದ ಕಾರ್ಯದಲ್ಲಿ ಡೈರಿ ಸಹಕಾರ ಸಂಘಗಳ ಪಾತ್ರದ ಬಗ್ಗೆ, ಡೈರಿ ಸಹಕಾರ ಸಂಘಗಳಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಕೈಗೊಳ್ಳುವ ಚಟುವಟಿಕೆಗಳು ಹಾಗೂ ಉಪಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಇವಲ್ಲದೆ ಈ ಅಧ್ಯಾಯವು ಸಂಶೋಧನಾ ವಿಷಯದ ಸಮಸ್ಯೀಕರಣ, ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವ್ಯಾಪ್ತಿ, ಅಧ್ಯಯನದ ವಿಧಾನಗಳು, ಅಧ್ಯಯನದ ಮಾದರಿ ಗಾತ್ರ ಮತ್ತು ವಿನ್ಯಾಸ, ಅಧ್ಯಯನ ವಿಷಯದ ಮೂಲಗಳು ಹಾಗೂ ಅಧ್ಯಾಯಗಳ ವಿವರಣೆಯನ್ನೊಳಗೊಂಡಿದೆ.

ಪೀಠಿಕೆ

"ಒಂದು ಹಕ್ಕಿಯು ಕೇವಲ ತನ್ನ ಒಂದು ರೆಕ್ಕೆಯೊಂದಿಗೆ ಹಾರಲು ಹೇಗೆ ಸಾಧ್ಯವಿಲ್ಲವೋ ಮಹಿಳೆಯರನ್ನು ಹೊರತು ಪಡಿಸಿದ ರಾಷ್ಟ್ರ ಕೂಡಾ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ". ಹೀಗೆ ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಇತ್ತೀಚಿನ ದಶಕಗಳಲ್ಲಿ ನಮ್ಮ ದೇಶದಲ್ಲಿ ಮಹಿಳಾ ಸಬಲೀಕರಣವು ಪ್ರಮುಖ ಬೆಳವಣಿಗೆಯ ಅಂಶವಾಗಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ದೀರ್ಘಾವಧಿಯ ಬಡತನ ನಿವಾರಿಸಲು ಅದರಲ್ಲೂ ಬಡಜನರ, ವಿಶೇಷವಾಗಿ ಬಡ ಮಹಿಳೆಯರ ಸ್ವಾವಲಂಬನೆಯನ್ನು ಹೆಚ್ಚಿಸಲು ಸಶಸ್ತ್ರೀಕರಣವು ತುಂಬಾ ಅಗತ್ಯವಾಗಿದೆ (ಮೀರಾ ಮತ್ತು ಗೌಡ, ೨೦೧೩).

ಸಬಲೀಕರಣ :

ಸಬಲೀಕರಣವೆಂದರೆ, ಜನರಲ್ಲಿ ಸ್ವಾಯತ್ತತೆ ಮತ್ತು ಸ್ವಯಂ ನಿರ್ಧಾರಗಳನ್ನು ತೆಗೆದುಕೊಳ್ಳುವ ಮಟ್ಟವನ್ನು ಹೆಚ್ಚಿಸಿ, ಅವರು ತಮ್ಮದೇ ಆದ ಹಿತಾಸಕ್ತಿಗಳನ್ನು ಜವಾಬ್ದಾರಿಯುತವಾಗಿ ಹಾಗೂ ಸ್ವಯಂ ನಿರ್ಧರಿತರಾಗಿ ಪ್ರತಿನಿಧಿಸಲು ವಿನ್ಯಾಸಗೊಳಿಸಿದ ಒಂದು ಕ್ರಮವಾಗಿದೆ. ಇದು ಒಂದು ಸ್ವಯಂ ಸಬಲೀಕರಣದ ಪ್ರಕ್ರಿಯೆಯಾಗಿದ್ದು ಜನರಲ್ಲಿ, ತಮ್ಮಲ್ಲಿದ್ದ ದುರ್ಬಲತೆಯಿಂದ ಹೊರಬಂದು, ತಮ್ಮಲ್ಲಿ ಅಡಗಿರುವ ಸಂಪನ್ಮೂಲಗಳನ್ನು ಗುರುತಿಸಿ ಅವುಗಳನ್ನು ಚೆನ್ನಾಗಿ ಬಳಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

ರಾಬರ್ಟ್ ಆಡಮ್ಸ್(2008, ಪು.ಸಂ. XVI) ರ ಪ್ರಕಾರ ಸಬಲೀಕರಣವೆಂದರೆ "ವ್ಯಕ್ತಿಗಳು, ಗುಂಪುಗಳು ಮತ್ತು /ಅಥವಾ ಸಮುದಾಯಗಳು ತಮ್ಮೆದುರಲ್ಲಿರುವ ಸನ್ನಿವೇಶಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಅಧಿಕಾರವನ್ನು ಚಲಾಯಿಸುವುದು ಮತ್ತು ತಮ್ಮದೇ ಆದ ಗುರಿಗಳನ್ನು ಸಾಧಿಸುವ ಸಾಮರ್ಥ್ಯವಾಗಿದೆ ಮತ್ತು ಇದು ಜನರು ತಮ್ಮ ಜೀವನದ ಗುಣಮಟ್ಟವನ್ನು ಗರಿಷ್ಠಗೊಳಿಸಲು ಪ್ರತ್ಯೇಕವಾಗಿ ಮತ್ತು ಒಟ್ಟಾರೆಯಾಗಿ ಇತರರಿಗೆ ಸಹಾಯ ಮಾಡುವ ಒಂದು ಪ್ರಕ್ರಿಯೆಯಾಗಿದೆ. ಇದು ಅಂಚಿನಲ್ಲಿರುವ ಜನರು ನೇರವಾಗಿ ತಮ್ಮ ಮೂಲಕ ಅಥವಾ ಅಂಚಿನಲ್ಲಿರದ ಜನರ ಸಹಾಯದ ಮೂಲಕ ತಮಗೆ ಬೇಕಾದ ಮೂಲಭೂತ ಅವಕಾಶಗಳನ್ನು ಪಡೆಯುವ ಹಾಗೂ ತಮ್ಮೊಳಗೆ ಹಂಚಿಕೊಳ್ಳುವ ಒಂದು ಪ್ರಕ್ರಿಯೆ ಹಾಗೂ ಜನರಲ್ಲಿ ಸ್ವಯಂ ಪೂರ್ಣತೆಯನ್ನು ಸಾಧಿಸಲು ಅವರ ಕೌಶಲ್ಯಗಳನ್ನು ವೃದ್ಧಿಸುವ ಮತ್ತು ಪ್ರೋತ್ಸಾಹಿಸುವ ಪ್ರಕ್ರಿಯೆಯೂ ಆಗಿರುತ್ತದೆ".

ಮಹಿಳಾ ಸಬಲೀಕರಣ :

ಮಹಿಳೆಯರನ್ನು ಆರ್ಥಿಕ, ಸಾಮಾಜಿಕ ಅವಲಂಬನೆಯ ಸಂಕೋಲೆಗಳಿಂದ, ವಂಚನೆಗಳಿಂದ, ವಿಮೋಚನೆಗೊಳಿಸುವುದು – ಮಹಿಳಾ ಸಬಲೀಕರಣ. ಸಬಲೀಕರಣದ ಪರಿಕಲ್ಪನೆ ಹುಟ್ಟಿಕೊಳ್ಳುವುದು "ಶಕ್ತಿ" ಎಂಬ ಪದದಿಂದ. ಮಹಿಳಾ ಸಬಲೀಕರಣವೆಂದರೆ ಮಹಿಳೆಯರನ್ನು ಸ್ವಯಂ ಅವಲಂಬಿತರಾಗಲು ಪ್ರೋತ್ಸಾಹಿಸುವುದು, ಮಹಿಳೆಯರು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದುವುದು, ಧನಾತ್ಮಕ ಸ್ವಾಭಿಮಾನ, ಯಾವುದೇ ಕಷ್ಟಕರವಾದ ಪರಿಸ್ಥಿತಿಯನ್ನು ಆತ್ಮ ವಿಶ್ವಾಸದಿಂದ ಎದುರಿಸುವುದು ಮತ್ತು ವಿವಿಧ ಸಾಮಾಜಿಕ ರಾಜಕೀಯ ಅಭಿವೃದ್ಧಿ ಕಾರ್ಯಗಳಲ್ಲಿ ಸಕ್ರೀಯ ಪಾತ್ರ ವಹಿಸುವುದು.

ಮಹಿಳಾ ಸಬಲೀಕರಣದ ಪರಿಣಾಮಗಳೇನೆಂದರೆ – ಮಹಿಳೆಯರು ತಮ್ಮ ಜೀವನದ ಬಗ್ಗೆ ಅಥವಾ ಸಮಾಜದ ಬಗ್ಗೆ ತರ್ಕಬದ್ಧ ಮತ್ತು ಬುದ್ಧಿವಂತ ನಿರ್ಧಾರಗಳನ್ನು ತೆಗೆದುಕೊಳ್ಳುವಂತಾಗುವುದು, ತಮ್ಮ ಆರ್ಥಿಕ-ರಾಜಕೀಯ, ಸಾಮಾಜಿಕ ಶಕ್ತಿಯನ್ನು ವೃದ್ಧಿಗೊಳಿಸುವುದು, ಪುರುಷರ ಜತೆ ಸಮಾನ ಹಕ್ಕನ್ನು ಖಚಿತ ಪಡಿಸಿಕೊಳ್ಳುವುದು, ತಮ್ಮ ಅಭಿವೃದ್ಧಿಗಾಗಿ ಅಂತರಾಷ್ಟ್ರೀಯ ಮಟ್ಟದ ಗುರಿಗಳನ್ನು ಸಾಧಿಸುವುದು ಮತ್ತು ತಮ್ಮ ಕುಟುಂಬಗಳ ಮತ್ತು ಸಮುದಾಯಗಳ ಜೀವನದ ಗುಣಮಟ್ಟವನ್ನು ಸುಧಾರಿಸುವುದು. ಮಹಿಳಾ ಸಬಲೀಕರಣದ ವಿವಿಧ ಮುಖಗಳು ಯಾವುವೆಂದರೆ:–

ಮಹಿಳೆಯರ ಸಾಮಾಜಿಕ ಸಬಲೀಕರಣ :-

ಮಹಿಳಾ ಸಾಮಾಜಿಕ ಸಬಲೀಕರಣದ ಅತ್ಯಂತ ನಿರ್ಣಾಯಕ ಅಂಶವೆಂದರೆ ಲಿಂಗ ಸಮಾನತೆಯ ಉತ್ತೇಜನ. ಲಿಂಗ ಸಮಾನತೆ ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳು, ಹಕ್ಕುಗಳು ಮತ್ತು ಕಟ್ಟುಪಾಡುಗಳನ್ನು ಹೊಂದಬೇಕು ಎಂಬುವುದನ್ನು ಸೂಚಿಸುತ್ತದೆ.

ಮಹಿಳಾ ಶೈಕ್ಷಣಿಕ ಸಬಲೀಕರಣ :

ಮಹಿಳೆಯರು ಅಭಿವೃದ್ಧಿ ಕಾರ್ಯಗಳಲ್ಲಿ ಸಂಪೂರ್ಣವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲು ಅವರ ಜ್ಞಾನ, ಕೌಶಲ್ಯ ಮತ್ತು ಆತ್ಮಸ್ಥೈರ್ಯವನ್ನು ವೃದ್ಧಿಸುವುದು, ಹೆಣ್ಣುಮಗುವಿಗೆ ಶೈಕ್ಷಣಿಕ ಅವಕಾಶಗಳಲ್ಲಿ ಆದ್ಯತೆ ನೀಡುವುದು – ಮಹಿಳೆಯರ ಶೈಕ್ಷಣಿಕ ಸಬಲೀಕರಣ.

ಮಹಿಳೆಯರ ರಾಜಕೀಯ ಸಬಲೀಕರಣ :

ರಾಜಕೀಯ ನಿರ್ಧಾರದ ಪ್ರಕ್ರಿಯೆಯಲ್ಲಿ ಮತ್ತು ಆಡಳಿತದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.

ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ವ್ಯವಹಾರಿಕ ಸ್ವಾತಂತ್ರ್ಯ :

ಮಹಿಳೆಯರನ್ನು ಮಾನವ ಸಂಪನ್ಮೂಲದ ಮಹತ್ವದ ಭಾಗವಾಗಿ ರೂಪಿಸುವ ಮೂಲಕ ಪುರುಷರ ಮೇಲಿನ ಅವರ ಆರ್ಥಿಕ ಅವಲಂಬನೆಯನ್ನು ಕಡಿಮೆ ಮಾಡುವುದು ಮಹಿಳೆಯರ ಆರ್ಥಿಕ ಸಬಲೀಕರಣವಾಗಿದೆ.

ಕಾನೂನು ಜ್ಞಾನದ ಮೂಲಕ ಮಹಿಳಾ ಸಬಲೀಕರಣ :

ಮಹಿಳಾ ಸಬಲೀಕರಣಕ್ಕೆ ಬೆಂಬಲ ನೀಡುವ ಪರಿಣಾಮಕಾರಿ ಕಾನೂನು ರಚನೆಯ ಅವಕಾಶವನ್ನು ಕಲ್ಪಿಸುವುದು ಮತ್ತು ಅವರ ಶೋಷಣೆಯನ್ನು ತಡೆಯುವ ಕಾನೂನು ಹಕ್ಕುಗಳು ಮತ್ತು ಕಾನೂನುಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು.

೧.೧ **ಮಹಿಳಾ ಸಬಲೀಕರಣದ ಅಗತ್ಯ**

ರಾಷ್ಟ್ರದ ಜನಸಂಖ್ಯೆಯಲ್ಲಿ ಸರಿಸುಮಾರಾಗಿ ಶೇ.೫೦ ರಷ್ಟು ಮಹಿಳೆಯರು ಇದ್ದಾರೆ. ಅದರಲ್ಲಿ ಬಹುಪಾಲು ಮಹಿಳೆಯರು ಉದ್ಯೋಗವಿಲ್ಲದೆ ಆರ್ಥಿಕವಾಗಿ ಬೇರೆಯವರ

ಮೇಲೆ ಅವಲಂಬಿತರಾಗಿದ್ದಾರೆ. ಸಮಾಜದಲ್ಲಿ ಪುರುಷರಿಗೆ ದೊರೆಯುವ ಅವಕಾಶಗಳಿಗೆ ತಾವು ಕೂಡಾ ಸಮಾನ ಅರ್ಹರು ಎಂಬ ವಿಷಯ ಅನೇಕ ಮಹಿಳೆಯರಿಗೆ ತಿಳಿದಿಲ್ಲ. ಲಭ್ಯವಿರುವ ಮಾನವ ಸಂಪನ್ಮೂಲಗಳ ಅಸಮರ್ಪಕ ಬಳಕೆಯಿಂದ ದೇಶದ ಆರ್ಥಿಕತೆ ಕುಂಠಿತವಾಗಿದೆ. ಪುರುಷರಿಗೆ ಹೋಲಿಸಿದಾಗ ಮಹಿಳೆಯರು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ಕಡಿಮೆ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಇದರ ಪರಿಣಾಮವಾಗಿ ಮಹಿಳೆಯರ ಸಾಮರ್ಥ್ಯದ ವಾಸ್ತವಿಕ ಮೌಲ್ಯಮಾಪನವಿಲ್ಲದೆಯೇ ಅವಕಾಶಗಳನ್ನು ಪಕ್ಷಪಾತೀಯವಾಗಿ ಪುರುಷರಿಗೆ ವಿಸ್ತರಿಸಲಾಯಿತು. ವೈಜ್ಞಾನಿಕ ಮಾಹಿತಿಯು ಪುರುಷರಿಗಿಂತ ಮಹಿಳೆಯರು ಬಹುಕಾರ್ಯಕತ್ವದಲ್ಲಿ ಹೆಚ್ಚು ಪ್ರವೀಣರಾಗಿದ್ದಾರೆಂದು ಘೋಷಿಸಿದರೂ ಮಹಿಳೆಯರು ಇನ್ನೂ ದೇಶದಲ್ಲಿ ಉದ್ಯೋಗದಾತರಿಗೆ ಎರಡನೇ ಆಯ್ಕೆಯಾಗಿಯೇ ಉಳಿದಿದ್ದಾರೆ (ವಿಮೆನ್ ಎಂಪವರ್‌ಮೆಂಟ್, ೨೦೧೫).

ಭಾರತ ಮತ್ತು ಪ್ರಪಂಚದ ಪ್ರಮುಖ ಭಾಗಗಳಲ್ಲಿ ಮಹಿಳೆಯರಿಗೆ ಇನ್ನೂ ಮೂಲಭೂತ ಶಿಕ್ಷಣ ದೊರೆಯುತ್ತಿಲ್ಲ ಮತ್ತು ಉನ್ನತ ಶಿಕ್ಷಣವನ್ನು ಪಡೆಯುವ ಅವಕಾಶ ಕೊಡುತ್ತಿಲ್ಲ. ಆದರೆ ವಾಸ್ತವತೆಯಲ್ಲಿ ಮಹಿಳಾ ಸಬಲೀಕರಣವೆಂದರೆ ಸಮಾಜದ ಸಂಪೂರ್ಣ ಅಭಿವೃದ್ಧಿ ಎಂದರ್ಥ (ಐ.ಎಲ್.ಒ, ೨೦೧೨). ವಿದ್ಯಾವಂತ ಮಹಿಳೆಯು ಆರೋಗ್ಯ, ನೈರ್ಮಲ್ಯ, ಶುಚಿತ್ವ ಕುರಿತು ತನಗಿರುವ ಜ್ಞಾನದಿಂದ ತನ್ನ ಕುಟುಂಬಕ್ಕೆ ಉತ್ತಮ ರೋಗ-ಮುಕ್ತ ಪರಿಸರವನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿರುತ್ತಾಳೆ. ಸ್ವಯಂ ಉದ್ಯೋಗಿ ಮಹಿಳೆ ತನ್ನ ಕುಟುಂಬದ ಆರ್ಥಿಕತೆಗೆ ಮಾತ್ರವಲ್ಲದೆ ದೇಶದ ಒಟ್ಟಾರೆ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಹೆಚ್ಚಳಕ್ಕೆ ಸಹಕರಿಸುತ್ತಾಳೆ. ಒಂದು ಕುಟುಂಬದಲ್ಲಿ ಒಬ್ಬರ ಆದಾಯಕ್ಕಿಂತಲೂ ಇಬ್ಬರ ಆದಾಯವು ಕುಟುಂಬದ ಜನರ ಜೀವನದ ಗುಣಮಟ್ಟವನ್ನು ಉನ್ನತೀಕರಿಸುತ್ತದೆ. ಮಹಿಳೆಯರಿಗೆ ಅವರ ಕಾನೂನು ಹಕ್ಕುಗಳ ಬಗ್ಗೆ ಇರುವ ಮಾಹಿತಿಯು ಅವರನ್ನು ಶೋಷಣೆ ಮತ್ತು ಅತ್ಯಾಚಾರ ಮುಂತಾದುವುಗಳ ಬಲಿಪಶುಗಳಾಗದಂತೆ ತಡೆಯುತ್ತದೆ. ಮನೆಯ ಸಂಘಟನಾ ಶೀಲತೆ ಮತ್ತು ಉತ್ತಮ ನಿರ್ವಹಣೆಯು ಅವರನ್ನು ನಾಗರಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ನಾಯಕತ್ವದ ಪಾತ್ರವನ್ನು ವಹಿಸುವಲ್ಲಿ ಸಹಕರಿಸುತ್ತದೆ. ಭಾರತ ಸಂವಿಧಾನದ ೭೩ ಮತ್ತು ೭೪ ನೇ ತಿದ್ದುಪಡಿಗಳು (೧೯೯೩) ಮಹಿಳೆಯರನ್ನು ಕನಿಷ್ಠ ಹಳ್ಳಿ ಮಟ್ಟದಲ್ಲಿ ಸಬಲೀಕರಣಗೊಳಿಸಲು ಅವರಿಗೆ ಕೆಲವು ವಿಶೇಷ ಅಧಿಕಾರಗಳನ್ನು ಕೊಟ್ಟಿದೆ. ಅವು

ಯಾವುವೆಂದರೆ–೩೩% ಮಹಿಳಾ ಮೀಸಲಾತಿ ಸ್ಥಾನಗಳು ಮತ್ತು 'ಹೊಸ ಪಂಚಾಯತ್ ರಾಜ್'. ಸಾಮಾಜಿಕ ಮತ್ತು ರಾಜಕೀಯ ಅಧಿಕಾರ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಆ ಕ್ಷೇತ್ರಗಳಲ್ಲಿ ಭ್ರಷ್ಟಾಚಾರವನ್ನು ಕಡಿಮೆಗೊಳಿಸಿದೆ ಮತ್ತು ಮಹಿಳಾ ಸಬಲೀಕರಣಕ್ಕೆ ಕಾರಣವಾಗಿದೆ (ವಿಮೆನ್ ಎಂಪವರ್‌ಮೆಂಟ್, ೨೦೧೫).

೧.೨ ಮಹಿಳಾ ಸಬಲೀಕರಣದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಪಾತ್ರ

ಗ್ರಾಮೀಣ ಭಾರತದ ಜನರು ಜೀವನೋಪಾಯಕ್ಕಾಗಿ ಬಹಳಷ್ಟು ಕಷ್ಟಗಳನ್ನು ಎದುರಿಸುತ್ತಾರೆ. ಬಹುಪಾಲು ಜನರು ಕೃಷಿ, ಪಶು ಸಂಗೋಪನೆ ಮತ್ತು ಇತರ ಪೂರಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅನಿಯಮಿತ ಮಳೆಯಿಂದಾಗಿ ಕೃಷಿ ಚಟುವಟಿಕೆಗಳಿಂದ ಬರುವ ವರಮಾನವೂ ಅನಿಯಮಿತವಾಗಿದೆ. ಆದ್ದರಿಂದ ಗ್ರಾಮೀಣ ಜನರು ಹೆಚ್ಚುವರಿ ಆದಾಯವನ್ನು ಉತ್ಪಾದಿಸುವ ಪರ್ಯಾಯ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಈ ಜನರು ಕಡಿಮೆ ಸಾಕ್ಷರತೆ ಮತ್ತು ಸೀಮಿತ ಕೌಶಲಗಳನ್ನು ಹೊಂದಿರುವುದರಿಂದ ಆದಾಯದ ಪರ್ಯಾಯ ಮೂಲದ ಹುಡುಕಾಟವು ಕೆಲವು ಉದ್ಯೋಗಗಳಿಗೆ ಮಾತ್ರ ನಿರ್ಬಂಧಿತವಾಗಿದೆ. ಬಹುಪಾಲು ಜನರು ಹೈನುಗಾರಿಕೆ ಅಥವಾ ಪಶುಸಂಗೋಪನೆಯನ್ನು ತಮ್ಮ ದ್ವಿತೀಯ ಆದಾಯದ ಮೂಲವಾಗಿ ಆರಿಸಿದ್ದಾರೆ. ಜಾನುವಾರು ಸಾಕಣೆಯು ಈಗ ಅಸ್ತಿತ್ವದಲ್ಲಿರುವ ಕೃಷಿ ಚಟುವಟಿಕೆಗಳಿಗಿಂತ ಭಿನ್ನವಾಗಿದೆ. ಗ್ರಾಮೀಣ ಮಹಿಳೆಯರು ಹೆಚ್ಚಾಗಿ ಈ ಚಟುವಟಿಕೆಯಲ್ಲಿ ನಿರತರಾಗಿರುತ್ತಾರೆ. ಗ್ರಾಮೀಣ ಮಹಿಳೆಯರು ಕಷ್ಟಪಟ್ಟು ಮನೆಕೆಲಸ ಮಾಡುವುದರ ಜೊತೆಗೆ ಜಾನುವಾರುಗಳ ಸಾಕಣೆ ಕೆಲಸವನ್ನು ಸಹ ಕೈಗೊಳ್ಳುತ್ತಾರೆ.

ಭಾರತವು ಪ್ರಪಂಚದ ಒಟ್ಟು ಹಾಲು ಉತ್ಪಾದನೆಯ ಪ್ರಮಾಣದ ಶೇಕಡಾ 5% ರಷ್ಟು ಮಾತ್ರ ಹಾಲು ಉತ್ಪಾದನೆ ಮಾಡುತ್ತದೆ. ದೇಶದ ಬೇಡಿಕೆಯನ್ನು ಪೂರೈಸಲು ಈ ಮೊತ್ತವು ಅತ್ಯಂತ ಅಸಮರ್ಪಕವಾಗಿದೆ. ಇದರ ಪರಿಣಾಮವಾಗಿ ಸ್ಥಳೀಯ ಬೇಡಿಕೆಯನ್ನು ಪೂರೈಸಲು ಮತ್ತು ಹೈನುಗಾರಿಕೆಯನ್ನು ಬೆಳೆಸಲು ಅನೇಕ ಹಾಲು ಉತ್ಪಾದಕರ ಸಹಕಾರ ಸಂಘಗಳು ರೂಪುಗೊಂಡಿವೆ. ಸಣ್ಣ ರೈತ ಮಹಿಳೆಯರಿಗೆ ಪಶುಸಂಗೋಪನೆಯು ಕುಟುಂಬದ ಒಂದು ಕಾರ್ಯಾಚರಣೆಯಾಗಿದೆ ಮತ್ತು ಮನೆಗಳಲ್ಲಿ ಈ ಜಾನುವಾರುಗಳ ನಿರ್ವಹಣೆಯು ಹೆಚ್ಚಾಗಿ ಮಹಿಳೆಯರಿಂದ

ನಡೆಸಲಾಗುತ್ತದೆ ಎಂಬುದು ಇಲ್ಲಿ ಗಮನಾರ್ಹವಾದ ಅಂಶ. (ಶೀಲಾ ಮತ್ತು ರಾಮೇಗೌಡ, ೨೦೧೩).

ಹೈನುಗಾರಿಕಾ ಉದ್ಯಮವು ಮಹಿಳೆಯರ ಅದರಲ್ಲೂ ಹೆಚ್ಚಾಗಿ ಗ್ರಾಮೀಣ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುತ್ತದೆ. ಮಾತ್ರವಲ್ಲದೆ ನಿರಂತರವಾದ ಮತ್ತು ಭರವಸೆ ನೀಡುವ ಆದಾಯವನ್ನು ಖಾತ್ರಿಗೊಳಿಸುತ್ತದೆ. ಮುಖ್ಯ ಉದ್ಯಮದ ಆದಾಯಕ್ಕೆ ಹೈನುಗಾರಿಕಾ ಉದ್ಯಮದ ಆದಾಯವು ಪೂರಕ ಆದಾಯವಾಗಿ ಸಹಕರಿಸುತ್ತದೆ. ಹೈನುಗಾರಿಕೆಯು ಮಹಿಳೆಯರಿಗೆ ಈ ಚಟುವಟಿಕೆಯನ್ನು ಒಂದು ಉದ್ಯಮವನ್ನಾಗಿ ಅಭಿವೃದ್ಧಿ ಪಡಿಸಲು ಮತ್ತು ವರ್ಷಪೂರ್ತಿ ಸ್ಥಿರವಾದ ನಗದು ಆದಾಯವನ್ನು ಖಾತರಿ ಪಡಿಸುವ ಉತ್ತಮ ಅವಕಾಶವನ್ನು ನೀಡುತ್ತದೆ (ಕುಮಾರಿ, ಕುಮಾರ್, ಲಾಲ್, ದಯಾಲ್ ಮತ್ತು ಡೇ ೨೦೧೪).

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣ

ಈ ಅಧ್ಯಯನದ ಉದ್ದೇಶಕ್ಕಾಗಿ ಡೈರಿ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣವೆಂದರೆ –

೧. ಮಹಿಳೆಯರು ತಮ್ಮ ಸಾಮಾನ್ಯ ಆರ್ಥಿಕ–ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸಲು ತಮ್ಮನ್ನು ಸಹಕಾರಿ ಸಂಘಗಳಲ್ಲಿ ಸಂಘಟಿಸುವ ಮೂಲಕ ಸಾಮರ್ಥ್ಯದ ಹೆಚ್ಚಳ.

೨. ಸಹಕಾರಿ ಸಂಘಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಪನ್ಮೂಲಗಳ ನಿಯಂತ್ರಣ ಮತ್ತು ಸದಸ್ಯರ ಒಳಿತಿಗಾಗಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವುದು.

೩. ಈ ಮೂಲಕ ಅಧೀನತೆಯನ್ನು ತೊಲಗಿಸಿ ಸ್ವಾವಲಂಬನೆಯನ್ನು ಹೆಚ್ಚಿಸುವುದು.

೧.೩ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಕೈಗೊಳ್ಳುವ ಚಟುವಟಿಕೆಗಳ ಹಾಗೂ ಉಪಕ್ರಮಗಳ ಮಹತ್ವ :

ಎನ್.ಡಿ.ಡಿ.ಬಿ. (೨೦೧೫) ರ ವರದಿಯ ಪ್ರಕಾರ ಮಹಿಳೆಯರು ಹಾಲು ಉತ್ಪಾದನಾ ಕ್ಷೇತ್ರದ ಸಂಯೋಜಿತ ಭಾಗವಾಗಿದ್ದಾರೆ. ಜಾನುವಾರುಗಳ ಮೇಲಿನ ಕಾಳಜಿ, ಅವುಗಳ ಆಹಾರ ನಿರ್ವಹಣೆ ಮತ್ತು ಹಾಲು ಕರೆಯುವುದು ಮುಂತಾದ

ಚಟುವಟಿಕೆಗಳನ್ನು ಮಹಿಳೆಯರೇ ನಿರ್ವಹಿಸುವುದನ್ನು ದೇಶದ ಬಹುತೇಕ ಭಾಗಗಳಲ್ಲಿ ನಾವು ಕಾಣಬಹುದು. ಡೈರಿ ಸಹಕಾರ ಚಳುವಳಿಯ ದೀರ್ಘಕಾಲೀನ ಶಕ್ತಿಗಾಗಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ಸುಧಾರಿಸಲು ಡೈರಿ ಬೋರ್ಡ್, ಮಹಿಳಾ ಸಬಲೀಕರಣವು ಅತ್ಯಂತ ಅವಶ್ಯಕ ಎಂಬುದನ್ನು ಮನಗಂಡು ಮಹಿಳಾ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿತು.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು (WDCs)

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಣಕಾಸು ಸಹಾಯವನ್ನು ಒದಗಿಸುತ್ತದೆ ಮತ್ತು ಇದು "ತರಬೇತಿ ಮತ್ತು ಉದ್ಯೋಗ ಯೋಜನೆಗೆ ಬೆಂಬಲ" (STEP) ಎಂಬ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಈ ಕಾರ್ಯಕ್ರಮದಡಿ ಡೈರಿ ಸಹಕಾರ ಸಂಘಗಳು ಮಹಿಳಾ ಸದಸ್ಯತ್ವದೊಂದಿಗೆ ರಚನೆಯಾಗುತ್ತವೆ ಮತ್ತು ಈ ಸಂಘಗಳ ನಿರ್ವಹಣೆಯು ಸಂಪೂರ್ಣವಾಗಿ ಮಹಿಳೆಯರಿಂದ ನಡೆಸಲ್ಪಡುತ್ತದೆ. 'ಎನ್‌ಡಿಡಿಬಿ'ಯು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಮಹಿಳೆಯರ ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು STEP ಒಂದು ಒಳ್ಳೆಯ ಕಾರ್ಯಕ್ರಮ ಎಂದು ಗುರುತಿಸಿದೆ. ಹಾಲು ಸಂಘಗಳು ಎಲ್ಲಾ ಮಹಿಳಾ ಸಹಕಾರ ಸಂಘಗಳನ್ನು, STEP ನಿಧಿಗೆ ಅರ್ಹರೋ, ಇಲ್ಲವೋ ಎಂಬುದನ್ನು ಲೆಕ್ಕಿಸದೆ ಪ್ರೋತ್ಸಾಹ ನೀಡಲಾಗುತ್ತದೆ. (ಎನ್‌ಡಿಡಿಬಿ ವರದಿ, ೨೦೧೫).

ಹಾಲು ಉತ್ಪಾದಕರ ಮಹಿಳಾ ಸಹಕಾರ ನಾಯಕತ್ವ ಕಾರ್ಯಕ್ರಮಗಳು (WDCLP)

೧೯೯೫ರಲ್ಲಿ ಹಾಲು ಉತ್ಪಾದನೆಯ ಸಹಕಾರ ಚಳುವಳಿಯನ್ನು ಬಲಪಡಿಸುವ ಉದ್ದೇಶದಿಂದ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳು, ಒಕ್ಕೂಟಗಳು ಮತ್ತು ಒಕ್ಕೂಟದ ಆಡಳಿತದಲ್ಲಿ ಮಹಿಳೆಯರು ಸಕ್ರಿಯ ಸದಸ್ಯರಾಗಿ ಹಾಗೂ ನಾಯಕಿಯರಾಗಿ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ "ಹಾಲು ಉತ್ಪಾದಕರ ಮಹಿಳಾ ಸಹಕಾರ ನಾಯಕತ್ವ" ಕಾರ್ಯಕ್ರಮ ಪ್ರಾರಂಭಗೊಂಡಿತು. ಈ ಕಾರ್ಯಕ್ರಮದ ಉದ್ದೇಶಗಳನ್ನು ಸಾಧಿಸಲು ಹಲವು ಚಟುವಟಿಕೆಗಳನ್ನು ನಡೆಸುವಲ್ಲಿ ಎನ್‌ಡಿಡಿಬಿಯು ಹಾಲಿನ ಸಂಘಗಳಿಗೆ ಸಹಾಯವನ್ನು ಒದಗಿಸಿದೆ. ಈ ಕಾರ್ಯಕ್ರಮದ ಅಂಗವಾಗಿ ಹಾಲು ಉತ್ಪಾದಕರ ಸಂಘಗಳು, ಮಹಿಳೆಯರ ಸಾಮರ್ಥ್ಯವನ್ನು ಬೆಳಸಲು ವಿನ್ಯಾಸಗೊಳಿಸಿದ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು

ಮಹಿಳಾ ಸದಸ್ಯರನ್ನು ಗುರುತಿಸಿ ಅವರಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಿವೆ. ಸ್ಥಳೀಯ ಮಹಿಳೆಗೆ ತರಬೇತಿ ನೀಡುವ ಮತ್ತು ಅವರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ಮಹಿಳಾ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಲು ಮತ್ತು ಬೆಂಬಲಿಸಲು ಒಬ್ಬ ಸಂಪನ್ಮೂಲ ವ್ಯಕ್ತಿಯನ್ನಾಗಿ ನೇಮಿಸುವ ಕೆಲಸ ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ (ಎನ್‌ಡಿಡಿಬಿ ವರದಿ, ೨೦೧೫).

ಮಹಿಳಾ ಮಿತವ್ಯಯ ಗುಂಪುಗಳು (WTG's)

ಎನ್‌ಡಿಡಿಬಿಯು ಕೆಲವು ಹಾಲಿನ ಸಹಕಾರ ಸಂಘಗಳಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ನಾಯಕತ್ವ ಕಾರ್ಯಕ್ರಮಗಳಲ್ಲಿ ಮಹಿಳಾ ಮಿತವ್ಯಯ ಗುಂಪುಗಳನ್ನು ಪ್ರಾರಂಭಿಸಿವೆ. ಈ ಗುಂಪುಗಳು ಸದಸ್ಯರ ಉಳಿತಾಯವನ್ನು ಸಜ್ಜುಗೊಳಿಸುತ್ತವೆ ಮತ್ತು ನೇರ ಋತುವಿನಲ್ಲಿ ಜಾನುವಾರುಗಳನ್ನು ಖರೀದಿಸುವುದಕ್ಕಾಗಿ ಮತ್ತು ಅವುಗಳನ್ನು ಸಾಕುವುದಕ್ಕೆ ಈ ಉಳಿತಾಯವನ್ನು ನೇರವಾಗಿ ಅಥವಾ ಸಾಲವಾಗಿ ಲಭ್ಯವಾಗುವಂತೆ ಮಾಡುತ್ತವೆ. ಇದು ಅವರ ಚಟುವಟಿಕೆಯ ಮಟ್ಟವನ್ನು ಹೆಚ್ಚಿಸಿ ಸಾಮಾಜಿಕ ಸಂವಹನಕ್ಕೆ ಅವಕಾಶವನ್ನು ಒದಗಿಸುತ್ತದೆ. ಈ ಗುಂಪುಗಳ ಇನ್ನೊಂದು ಪ್ರಯೋಜನವೇನೆಂದರೆ ತಮ್ಮದೇ ಆದ ಸಂಸ್ಥೆಗಳ ನಿರ್ವಹಣೆಯಲ್ಲಿ ಮಹಿಳೆಯರು ಗಳಿಸುವ ಹೆಚ್ಚಿನ ಅನುಭವ (ಎನ್‌ಡಿಡಿಬಿ ವರದಿ, ೨೦೧೫)

ಎನ್‌ಡಿಪಿ–ಹಂತ –೧

ಈ ಯೋಜನೆಯು ತನ್ನ ಎಲ್ಲಾ ಅನುಮೋದಿತ ಯೋಜನೆಗಳಲ್ಲಿ ಕನಿಷ್ಠ ೩೦% ರಷ್ಟು ಮಹಿಳಾ ಸದಸ್ಯರು ಭಾಗವಹಿಸುವ ಅವಕಾಶ ಕಲ್ಪಿಸುತ್ತದೆ. ಈ ಯೋಜನೆಯು ಹಾಲು ಉತ್ಪಾದಿಸುವ ಮಹಿಳಾ ಸಹಕಾರಿ ಸಂಸ್ಥೆಗಳನ್ನು ವಿವಿಧ ನಿರ್ಮಾಣ ಕಾರ್ಯಕ್ರಮಗಳ ಮೂಲಕ ಬೆಂಬಲಿಸುತ್ತದೆ (ಎನ್‌ಡಿಡಿಬಿ ವರದಿ, ೨೦೧೫).

ಸ್ಟೆಪ್ ಯೋಜನೆ (STEP)

ಸ್ಟೆಪ್ ಕಾರ್ಯಕ್ರಮವು ಕೌಶಲವನ್ನು ನವೀಕರಿಸುವ ಮೂಲಕ ಮತ್ತು ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುವ ಮೂಲಕ ಮಹಿಳೆಯರ ಕೌಶಲವನ್ನು ಸುಧಾರಿಸುವುದು, ಉತ್ಪಾದಕ ಆಸ್ತಿಗಳಿಗೆ ವ್ಯವಸ್ಥೆ ಮಾಡುವುದು, ಬೆಂಬಲ ಸೇವೆಗಳಿಗೆ ವ್ಯವಸ್ಥೆ ಮಾಡುವುದು, ಲಿಂಗ ಸಂವೇದನೆ, ಆಹಾರ ಪೋಷಣೆ, ಶಿಕ್ಷಣ, ಕಾನೂನು, ಸಾಕ್ಷರತೆ, ಮುಂತಾದವುಗಳ ಜಾಗೃತಿ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಒದಗಿಸುತ್ತದೆ.

ಈ ಯೋಜನೆಯ ಮುಖ್ಯ ಲಕ್ಷಣಗಳೇನೆಂದರೆ ತರಬೇತಿ ಕಾರ್ಯಕ್ರಮ, ಗ್ರಾಮ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಿರ್ವಹಿಸಲು ಅಂಚಿನ ಹಣವನ್ನು ಒದಗಿಸುವುದು ಮತ್ತು ಗುಜರಾತಿನ ಆನಂದ್‌ನಲ್ಲಿನ ಅಮೂಲ್ ಸಂಸ್ಥೆಗೆ ಭೇಟಿಕೊಡುವುದು. ಸ್ಟೆಪ್ ಯೋಜನೆಯ ಅಡಿಯಲ್ಲಿ ಹಾಲಿನ ಮಹಿಳಾ ಸಹಕಾರಿ ಸಂಘಗಳು ಗ್ರಾಮೀಣ ಮಹಿಳೆಯರ ಲಾಭಕ್ಕಾಗಿ ಮಹಿಳೆಯರಿಗೆ ಹಾಲು ಸಂಗ್ರಹಣೆ, ಹಾಲು ಮಾರುಕಟ್ಟೆ ಮುಂತಾದ ವಿಷಯಗಳಲ್ಲಿ ತರಬೇತಿ ಕಾರ್ಯಕ್ರಮಗಳ ಮೂಲಕ ಮಾಹಿತಿಯನ್ನು ಒದಗಿಸುವುದು.

ಕರ್ನಾಟಕ ಮಿಲ್ಕ್ ಫೆಡರೇಶನ್ (KMF), ಕರ್ನಾಟಕದಲ್ಲಿ ೧೯೯೭ ಒಕ್ಟೋಬರ್‌ನಲ್ಲಿ ಈ ಸ್ಟೆಪ್ ಕಾರ್ಯಕ್ರಮವನ್ನು ಆರಂಭಿಸಿತು. ಅಂದಿನಿಂದ ಕೆ.ಎಮ್.ಎಫ್ ೮೦೦ ಹಾಲು ಉತ್ಪಾದಕರ ಮಹಿಳಾ ಸಂಘಗಳನ್ನು ಮೂರು ಹಂತಗಳಲ್ಲಿ ಆಯೋಜಿಸಿತು ಮತ್ತು ನಾಲ್ಕನೇ ಹಂತದಲ್ಲಿ ಸ್ಟೆಪ್‌ನ ಆಗಮನದ ಮೊದಲು ಆಯೋಜಿಸಿದ ೨೫೦ ಮಹಿಳಾ ಸಹಕಾರಿ ಸಂಘಗಳನ್ನು ಸ್ಟೆಪ್‌ನ ಕಾರ್ಯಕ್ರಮದ ಅಡಿಯಲ್ಲಿ ಬರುವ ಮಹಿಳಾ ಸಹಕಾರಿ ಸಂಘಗಳಿಗೆ ಪರಿವರ್ತಿಸಲಾಯಿತು. ಇದಲ್ಲದೆ 2007ರಲ್ಲಿ ಭಾರತ ಸರಕಾರವು ಇನ್ನೂ ಎರಡು ಹಂತಗಳನ್ನು ಅನುಮೋದಿಸಿದೆ.

ಐದನೇ ಹಂತದಲ್ಲಿ ೨೦೦ ಹೊಸ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸ್ಥಾಪಿಸಲು ಮತ್ತು ಆರನೇ ಹಂತದಲ್ಲಿ ೨೦೦ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸ್ಟೆಪ್‌ನ ಯೋಜನೆಯ ಅಡಿಗೆ ತರುವಲ್ಲಿ ಸಹಕರಿಸಿದೆ. ಪ್ರತೀ ಹಾಲಿನ ಮಹಿಳಾ ಸಹಕಾರ ಸಂಘಗಳು, ಈ ಯೋಜನೆಯ ಅಡಿಯಲ್ಲಿ ಸಹಕಾರ ಸಂಘಗಳ ಸ್ಥಾಪನೆ, ನಿರ್ವಹಣೆ ಮತ್ತು ಹಾಲು ಕರೆಯುವ ಪ್ರಾಣಿಗಳನ್ನು ಖರೀದಿಸಲು ಸುಮಾರು ೨.೫ ಲಕ್ಷದಿಂದ ೩ ಲಕ್ಷದವರೆಗೆ ಬಡ್ಡಿ ರಹಿತ ಸಾಲವನ್ನು ಅನುದಾನವಾಗಿ ಪಡೆಯುತ್ತವೆ.

೧.೪ <u>ಅಧ್ಯಯನದ ಸಮುಸ್ಯೀಕರಣ</u>

ಸಹಕಾರ ಸಂಘಗಳ ಮೂಲಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದ ಪ್ರಯತ್ನಗಳು ನಡೆಯುತ್ತಿವೆ. ಆದರೆ ಗ್ರಾಮೀಣ ಭಾರತದ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ಅಭಿವ್ಯಕ್ತಿಯು ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದಿರುವುದು ಕಂಡು ಬರುತ್ತದೆ. ತ್ವರಿತಗತಿಯ ನಗರೀಕರಣ ಮತ್ತು ನಗರಗಳ ಸ್ಫೋಟದ ನಡುವೆಯೂ ಭಾರತದ ಗ್ರಾಮೀಣ ಮಹಿಳೆಯರು ಅನಕ್ಷರತೆ, ದಾರಿದ್ರ್ಯ, ಅಸುರಕ್ಷತೆ, ಅಲಕ್ಷ್ಯತೆಯಿಂದ ಜರ್ಜರಿತರಾಗಿರುವುದು ಕಳವಳದ ಸಂಗತಿಯಾಗಿದೆ.

ಮಹಿಳೆಯರು ಆರ್ಥಿಕ ಕ್ಷೇತ್ರದಲ್ಲಿ ಭಾಗವಹಿಸುವುದು ಅವರ ಸಬಲೀಕರಣಕ್ಕೆ ಅತೀ ಅಗತ್ಯ ಎಂದು, ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಏಳಿಗೆಗಾಗಿ ಶ್ರಮಿಸುತ್ತಿರುವ ವಿವಿಧ ಸಂಘ ಸಂಸ್ಥೆಗಳು ಅಭಿಪ್ರಾಯ ಪಡುತ್ತವೆ. ದುರದೃಷ್ಟವಶಾತ್ ವಿವಿಧ ಸಮುದಾಯಗಳಲ್ಲಿ ಈ ಮಹಿಳೆಯರು ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಅಭಿವೃದ್ಧಿ ಕ್ಷೇತ್ರದಲ್ಲಿ ನ್ಯಾಯ ಸಮ್ಮತ ಪಾಲ್ಗೊಳ್ಳುವಿಕೆ ಸಾಧ್ಯವಾಗದೆ ತಮ್ಮಲ್ಲಿ ಹುದುಗಿರುವ ಪ್ರತಿಭೆಯನ್ನು ತೋರ್ಪಡಿಸಲಾಗುತ್ತಿಲ್ಲ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮೂಲಕ ಮಹಿಳೆಯರ ಸಬಲಿಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ, ಅದಕ್ಕೆ ಮಹಿಳೆಯರ ಸಹಭಾಗಿತ್ವ ಮತ್ತು ಕೊಡುಗೆ ಸಾಕಷ್ಟು ಪ್ರಮಾಣದಲ್ಲಿ ನೀಡಬೇಕಾಗಿದೆ. ಹೈನುಗಾರಿಕೆ ಕಾರ್ಯಕ್ರಮಗಳಲ್ಲಿ ಹಾಲು ಉತ್ಪಾದನೆ ಮತ್ತು ಹಾಲಿಗೆ ಸಂಬಂಧಪಟ್ಟ ಇತರ ಉತ್ಪಾದನೆಗಳಿಗೆ ಮಾತ್ರ ಒತ್ತು ಕೊಡಲಾಗಿದ್ದು, ಇವುಗಳಲ್ಲಿ ಮಹಿಳೆಯರ ಪಾತ್ರವನ್ನು ಕಡೆಗಣಿಸಲಾಗಿದೆ. ಈ ಕ್ಷೇತ್ರದಲ್ಲಿ ಮಹಿಳೆಯರ ಸಕ್ರಿಯವಾದ ಕ್ರಿಯಾತ್ಮಕ ಪಾತ್ರಕ್ಕೆ ಯಾವುದೇ ಮಾನ್ಯತೆ ದೊರೆತಿಲ್ಲ.

೧.೫ ಅಧ್ಯಯನದ ಮಹತ್ವ

ಭಾರತದ ಡೈರಿ ವಲಯದಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಮಹಿಳಾ ಡೈರಿ ಸಹಕಾರ ಸಂಘಗಳು ಗ್ರಾಮೀಣ ಪ್ರದೇಶಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದಿವೆ. ಸಹಕಾರ ಚಟುವಟಿಕೆಗಳಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ, ತಮ್ಮ ಸಬಲೀಕರಣವನ್ನು ಮಾತ್ರವಲ್ಲದೆ, ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣವನ್ನೂ ಸೂಚಿಸುತ್ತದೆ. ಸಹಕಾರ ಚಟುವಟಿಕೆಗಳಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆ, ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ಸಹಕಾರಿ ಸಂಘಗಳು, ಸ್ವ-ಸಹಾಯ ಗುಂಪುಗಳು (SHGs) ಭಾರತದಲ್ಲಿ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಹೀಗಿದ್ದರೂ, ಮಹಿಳೆಯರ ಸಬಲೀಕರಣವನ್ನು ಪರಿಮಾಣಾತ್ಮಕ ಹಾಗೂ ಗುಣಾತ್ಮಕ ನೆಲೆಗಳಲ್ಲಿ ದಾಖಲಿಸಲಾಗಿಲ್ಲ ಅಥವಾ ಜಿ.ಡಿ. ಪಿ. ಲೆಕ್ಕಾಚಾರದಲ್ಲಿ ಲೆಕ್ಕ ಹಾಕಲಾಗಿಲ್ಲ.

ಹೈನುಗಾರಿಕಾ ಕ್ಷೇತ್ರದಡಿಯಲ್ಲಿ ಅಂಚಿನಲ್ಲಿರುವ ಮಹಿಳೆಯರ ಸಂಖ್ಯೆಯನ್ನು ಪರಿಗಣಿಸಿದಾಗ, ಮಹಿಳೆಯರ ಸಬಲೀಕರಣಕ್ಕೆ ಕೈಗೊಂಡ ಕಾರ್ಯವಿಧಾನಗಳು ಅಸಮರ್ಪಕ

ಎಂದು ತೋರುತ್ತದೆ. ಅದಲ್ಲದೆ, ಮಹಿಳಾ ಸಬಲೀಕರಣದ ಮೇಲೆ ಪ್ರಭಾವ ಬೀರುವ ಇನ್ನೂ ಹಲವಾರು ಅಂಶಗಳಿವೆ ಮತ್ತು ಈ ಅಂಶಗಳು ಸಹಕಾರಿ ಕ್ಷೇತ್ರದಲ್ಲಿ ದಾಖಲಾಗುವುದು ಅತ್ಯಗತ್ಯ. ಸಹಕಾರಿ ಕ್ಷೇತ್ರದಲ್ಲಿ ಹಲವಾರು ಸಬಲೀಕರಣ ಆಯಾಮಗಳು ಕಂಡು ಬಂದರೂ, ಪ್ರಸ್ತುತ ಅಧ್ಯಯನವು ಸಹಕಾರಿ ಕ್ಷೇತ್ರದ ಸಾಹಿತ್ಯ ನಿರಂತರತೆಗೆ ಸೇರ್ಪಡೆಯಾಗಿದೆ ಮತ್ತು ಮೌಲ್ಯವರ್ಧನೆಗೆ ಪೂರಕವಾಗುತ್ತದೆ.

೧.೬ ಅಧ್ಯಯನದ ಉದ್ದೇಶಗಳು

ದಕ್ಷಿಣ ಕನ್ನಡ ಜಿಲ್ಲೆಯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮೂಲಕ ಪ್ರಭಾವಿತವಾಗಿರುವ ಮಹಿಳೆಯರ ಸಬಲೀಕರಣದ ಸ್ಥಿತಿಯನ್ನು ಅವಲೋಕಿಸುವುದು ಈ ಅಧ್ಯಯನದ ಒಟ್ಟಾರೆ ಉದ್ದೇಶವಾಗಿದೆ.

ನಿರ್ದಿಷ್ಟ ಉದ್ದೇಶಗಳು

೧. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಕೈಗೊಂಡ ಚಟುವಟಿಕೆಗಳನ್ನು ವಿಶ್ಲೇಷಿಸುವುದು.

೨. ಮಹಿಳಾ ಸಬಲೀಕರಣದ ಮೇಲೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಕೈಗೊಂಡ ಚಟುವಟಿಕೆಗಳ ಪ್ರಭಾವವನ್ನು ಪರೀಕ್ಷಿಸುವುದು.

೩. ಸಹಕಾರ ಸಂಘಗಳ ಕಾರ್ಯವೈಖರಿಯ ಮೇಲೆ ಮಹಿಳಾ ಸಬಲೀಕರಣ ಚಟುವಟಿಕೆಗಳ ಪರಿಣಾಮಕಾರಿತ್ವವನ್ನು ನಿರ್ಧರಿಸುವುದು.

೪. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ತಮ್ಮ ಸಬಲೀಕರಣ ಪ್ರಕ್ರಿಯೆಯಲ್ಲಿ ಮಹಿಳಾ ಸದಸ್ಯರು ಎದುರಿಸುವ ಸವಾಲುಗಳನ್ನು ವಿವರಿಸುವುದು.

೫. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳಾ ಸದಸ್ಯರ ಸಬಲೀಕರಣಕ್ಕೆ ಪರಿಣಾಮಕಾರಿ ಕ್ರಮಗಳನ್ನು ಸೂಚಿಸುವುದು.

೧.೭ ಅಧ್ಯಯನದ ವ್ಯಾಪ್ತಿ

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ, ಸಾಮಾಜಿಕ, ಸಬಲೀಕರಣ" ಈ ಅಧ್ಯಯನವು ಭೌಗೋಳಿಕವಾಗಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಸೀಮಿತಗೊಂಡಿದೆ.

೧.೮. ಅಧ್ಯಯನದ ವಿಧಾನಗಳು

ಈ ಪ್ರಾಯೋಗಿಕ ಅಧ್ಯಯನವು ವಿವರಣಾತ್ಮಕ ಮತ್ತು ಪರಿಶೋಧನಾ ವಿಧಾನವನ್ನು ಹೊಂದಿದೆ. ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಅಧ್ಯಯನದಲ್ಲಿ ಬಳಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನದ ವೇಳೆಯಲ್ಲಿ ಮುಕ್ತ ಉತ್ತರಕ್ಕೆ ಅವಕಾಶ ನೀಡುವಂತಹ ಪ್ರಶ್ನಾವಳಿಗಳ ಮೂಲಕ ಗಮನ ಗುಂಪು ವಿಧಾನದಲ್ಲಿ ಸಂಗ್ರಹಿಸಲಾಗಿದೆ. ವಾರ್ಷಿಕ ವರದಿ, ಬೈಲಾ ಮತ್ತು ಅವಲೋಕನ ವಿಧಾನಗಳ ಮೂಲಕ ಪ್ರಾಥಮಿಕ ದತ್ತಾಂಶ ಅಥವಾ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ ಸಬಲೀಕರಣದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ನಿಯತಕಾಲಿಕಗಳು, ಪುಸ್ತಕಗಳು, ವರದಿಗಳು ಮತ್ತು ವೆಬ್‌ಸೈಟ್‌ಗಳ ಮೂಲಕ ಅನುಷಂಗಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಕ್ಷೇತ್ರದ ಆಳವಾದ ವಿಶ್ಲೇಷಣೆಗಾಗಿ ಅಧ್ಯಯನವು ಕೈಗೊಂಡ ಕಾರಣ, ಅಧ್ಯಯನದ ಉದ್ದೇಶಗಳನ್ನು ಆಧರಿಸಿ ಮಾದರಿ ಗಾತ್ರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೯ ಅಧ್ಯಯನದ ಮಾದರಿ ಗಾತ್ರ ಮತ್ತು ರಚನೆ :

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕು, ಬಂಟ್ವಾಳ ತಾಲೂಕು ಮತ್ತು ಬೆಳ್ತಂಗಡಿ ತಾಲೂಕಿನಲ್ಲಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳನ್ನು ಮಾದರಿ ಗಾತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಮಂಗಳೂರು ತಾಲೂಕಿನಿಂದ ನಾಲ್ಕು, ಬೆಳ್ತಂಗಡಿ ತಾಲೂಕಿನಿಂದ ಮೂರು ಮತ್ತು ಬಂಟ್ವಾಳ ತಾಲೂಕಿನಿಂದ ಮೂರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಆರಿಸಿ ಪ್ರತೀ ಸಂಘದಿಂದ ೧೦ ಮಹಿಳೆಯರನ್ನು ಒಟ್ಟಾರೆ ೧೦೦ ಮಹಿಳೆಯರನ್ನು ಪ್ರಸ್ತುತ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಮಾದರಿ ಗಾತ್ರವನ್ನು ಆಯ್ಕೆ ಮಾಡಲು ಶ್ರೇಣೀಕೃತ ಯಾದೃಚ್ಛಿಕ ಮಾದರಿ ತಂತ್ರವನ್ನು ಬಳಸಲಾಗಿದೆ.

೧.೧೦ ಅಧ್ಯಯನದ ಮಾಹಿತಿ ಸಂಗ್ರಹಣೆ ವಿಧಾನ :

ಈ ಅಧ್ಯಯನದಲ್ಲಿ ಮಾಹಿತಿಯನ್ನು ಪ್ರಾಥಮಿಕ ಮತ್ತು ಅನುಷಂಗಿಕ ವಿಧಾನಗಳಿಂದ ಕಲೆ ಹಾಕಲಾಗಿದೆ. ಅಧ್ಯಯನವನ್ನು ಹೆಚ್ಚು ವಿಶ್ವಾಸಾರ್ಹವಾಗಿ ನಡೆಸಲು, ಪ್ರಾಥಮಿಕ ಮೂಲಗಳಿಂದ ಹೆಚ್ಚಿನ ಮಾಹಿತಿಯನ್ನು ಈ ಅಧ್ಯಯನದಲ್ಲಿ ಕಲೆ ಹಾಕಲಾಗಿದೆ. ಈ ಕೆಳಗಿನ ಹಂತಗಳಲ್ಲಿ ಮಾಹಿತಿ ಸಂಗ್ರಹಣೆ ಮಾಡಲಾಗಿದೆ.

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ತಾಲೂಕುಗಳಲ್ಲಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮಾಹಿತಿಯನ್ನು ಕಲೆ ಹಾಕಲು ಮಂಗಳೂರಿನಲ್ಲಿರುವ "ದಕ್ಷಿಣ ಕನ್ನಡ ಹಾಲು ಉತ್ಪಾದಕರ ಸಹಕಾರಿ ಯೂನಿಯನ್" ಗೆ ಭೇಟಿ ನೀಡಿ, ಅಧಿಕಾರಿಗಳಿಂದ ಸಂಬಂಧಪಟ್ಟ ಮಾಹಿತಿಯನ್ನು ಕಲೆ ಹಾಕಲಾಗಿದೆ.

೨) ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸಂದರ್ಶಿಸಿ ಪ್ರಶ್ನಾವಳಿ ಮತ್ತು ಅನುಸೂಚಿಗಳ ಮೂಲಕ ಮಹಿಳೆಯರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿ ಸಂಗ್ರಹಣೆಯು ಗುಂಪು ಚರ್ಚೆಯನ್ನು ಕೂಡಾ ಒಳಗೊಂಡಿದೆ ಹಾಗೂ ಕ್ಷೇತ್ರ ವೀಕ್ಷಣೆಯನ್ನು ನಡೆಸಲಾಗಿದೆ.

೩) ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ವಾರ್ಷಿಕ ವರದಿ, ಬೈಲಾ ಮತ್ತು ಅವಲೋಕನ ವಿಧಾನಗಳ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹಲವು ಕಾರಣಾಂತರಗಳಿಂದ ಇನ್ನೂ ಕೆಲವು ಮಹಿಳಾ ಸಹಕಾರ ಸಂಘಗಳಿಗೆ ಭೇಟಿ ನೀಡಲು ಸಾಧ್ಯವಾಗದ ಕಾರಣ, ಕೆಲವು ಮಾಹಿತಿಗಳನ್ನು ದೂರವಾಣಿ ಮೂಲಕ ಸಂಗ್ರಹಿಸಲಾಗಿದೆ.

೪) ಅನುಷಂಗಿಕ ಮಾಹಿತಿಯನ್ನು ನಿಯತಕಾಲಿಕಗಳು, ಪುಸ್ತಕಗಳು, ವರದಿಗಳು ಮತ್ತು ವೆಬ್‌ಸೈಟ್‌ಗಳ ಮೂಲಕ ಸಂಗ್ರಹಿಸಲಾಗಿದೆ.

೫) ಸಂಗ್ರಹಿಸಿದ ಮಾಹಿತಿಯನ್ನು ವಿವರಣಾತ್ಮಕವಾಗಿ ಹಾಗೂ ಸಂಖ್ಯಾಶಾಸ್ತ್ರೀಯ ವಿಧಾನದಲ್ಲಿ ನಿರೂಪಿಸಲಾಗಿದೆ. ಸಾಂಪ್ರದಾಯಿಕ ತಂತ್ರಗಳಾದ ಶೇಕಡಾವಾರು ಕೋಷ್ಟಕಗಳು, ಸ್ತಂಬಲೇಖ ಮತ್ತು ಪೈಚಾರ್ಟ್‌ಗಳನ್ನು ಮಾಹಿತಿಯನ್ನು ನಿರೂಪಿಸಲು ಬಳಸಲಾಗಿದೆ.

೧.೧೧ ಅಧ್ಯಾಯಗಳ ರಚನೆ :

ಮೊದಲನೇ ಅಧ್ಯಾಯವು ಮಹಿಳಾ ಸಬಲೀಕರಣದ ಅಗತ್ಯ, ಮಹಿಳಾ ಸಬಲೀಕರಣದಲ್ಲಿ ಹಾಲಿನ ಸಹಕಾರ ಸಂಘಗಳ ಪಾತ್ರ, ಹಾಲಿನ ಸಹಕಾರ ಸಂಘಗಳಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಕೈಗೊಳ್ಳುವ ಚಟುವಟಿಕೆಗಳ ಹಾಗೂ ಉಪಕ್ರಮಗಳ ಮಹತ್ವ, ಅಧ್ಯಯನದ

ಸಮುಸ್ಯೀಕರಣ, ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವ್ಯಾಪ್ತಿ, ಅಧ್ಯಯನದ ವಿಧಾನಗಳು, ಅಧ್ಯಯನದ ಮಾದರಿ ಗಾತ್ರ ಮತ್ತು ರಚನೆ, ಅಧ್ಯಯನದ ಮಾಹಿತಿ ಸಂಗ್ರಹಣೆ ವಿಧಾನ, ಅಧ್ಯಾಯಗಳ ರಚನೆಯನ್ನು ಒಳಗೊಂಡಿದೆ.

ಎರಡನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳಿಗೆ ಪೂರಕವಾಗಿ 'ಸಾಹಿತ್ಯ ವಿಮರ್ಶೆ'ಯನ್ನು ಮಾಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಸಂಕ್ಷಿಪ್ತ ಚಿತ್ರಣ ಹಾಗೂ ಈ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಕಾರ್ಯಗತಗೊಳಿಸಿದ ಉಪಕ್ರಮಗಳ ಬಗ್ಗೆ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಮಹಿಳಾ ಸದಸ್ಯರ ವೈಯುಕ್ತಿಕ ಹಾಗೂ ವೃತ್ತಿಪರ ಚಿತ್ರಣದ ಜೊತೆಗೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಕಾರ್ಯಗತಗೊಳಿಸಿದ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಹಾಗೂ ಈ ಚಟುವಟಿಕೆಗಳಿಂದ ಮಹಿಳೆಯರಲ್ಲಿ ಸಬಲೀಕರಣದ ಪ್ರಕ್ರಿಯೆಯಲ್ಲಿ ಉಂಟಾದ ಮುನ್ನಡೆ, ಸಹಕಾರ ಸಂಘಗಳ ಕಾರ್ಯವೈಖರಿಯ ಮೇಲೆ ಮಹಿಳಾ ಸಬಲೀಕರಣ ಚಟುವಟಿಕೆಗಳ ಪರಿಣಾಮಕಾರಿತ್ವ ಮತ್ತು ಸಬಲೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು ಇವುಗಳ ಬಗ್ಗೆ ವಿವರಿಸಲಾಗಿದೆ.

ಐದನೇ ಅಧ್ಯಾಯವು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳಾ ಸದಸ್ಯೆಯರ ಸಬಲೀಕರಣಕ್ಕೆ ಪರಿಣಾಮಕಾರಿ ಕ್ರಮಗಳ ಸಲಹೆಗಳನ್ನು ಸೂಚಿಸುವುದನ್ನು ಒಳಗೊಂಡಿದೆ ಹಾಗೂ ಈ ಅಧ್ಯಾಯವು ಅಧ್ಯಯನದ ಒಟ್ಟು ಫಲಶ್ರುತಿಗಳನ್ನು ದಾಖಲಿಸುತ್ತದೆ.

ಅಧ್ಯಾಯ ೦೨

ಸಾಹಿತ್ಯ ಪರಿವೀಕ್ಷಣೆ

ಅಧ್ಯಾಯ –೨

ಸಾಹಿತ್ಯ ವಿಮರ್ಶೆ

ಈ ಅಧ್ಯಾಯದಲ್ಲಿ ಮಹಿಳಾ ಸಬಲೀಕರಣದ ಪ್ರಾಯೋಗಿಕ ಕೆಲಸ ಮತ್ತು ಪರಿಕಲ್ಪನೆಯ ಬಗ್ಗೆ ವಿಮರ್ಶಿಸಲಾಗಿದೆ. ಅಲ್ಲದೆ ಮಹಿಳಾ ಸಬಲೀಕರಣಕ್ಕಾಗಿ ಉಪಯೋಗಿಸುವ ಅನೇಕ ಉಪಕ್ರಮಗಳು ಹಾಗೂ ತಂತ್ರಗಳು, ಮಹಿಳೆಯರು ಅದರಿಂದ ಪಡೆದ ಪ್ರಯೋಜನಗಳು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯೂ ಸಾಹಿತ್ಯ ವಿಮರ್ಶೆ ನಡೆಸಲಾಗಿದೆ.
ದೊಡ್ಡ ಮಟ್ಟದಲ್ಲಿ ಹಾಲಿನ ಮಹಿಳಾ ಸಹಕಾರ ಸಂಘಗಳ ಪಾತ್ರದಲ್ಲಿ ಸಾಕಷ್ಟು ಸಂಶೋಧನಾ ಕಾರ್ಯಗಳು ನಡೆದಿವೆ. ಆದರೆ ಭಾರತ ಮತ್ತು ಕರ್ನಾಟಕ ಮಟ್ಟದಲ್ಲಿ ಹಾಲು ಉತ್ಪಾದಿಸುವ ಮಹಿಳೆಯರ ಸಹಕಾರ ಸಂಘಗಳ ಬಗ್ಗೆ ಕೆಲವೇ ಅಧ್ಯಯನಗಳಿವೆ. ಇದರ ಬಗ್ಗೆ ಕೆಲವು ಸಾಹಿತ್ಯ ವಿಮರ್ಶೆಗಳನ್ನು ಕೆಳಗೆ ನೀಡಲಾಗಿದೆ.

ಮಹಿಳಾ ಸಬಲೀಕರಣದ ಉದ್ದೇಶ :

ಕುಟುಂಬದ ಆದಾಯದ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಹೆಚ್ಚುತ್ತಿದ್ದರೂ ಕೂಡಾ, ಕೆಲಸಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವು ಅವರ ಆರ್ಥಿಕ ಸಬಲೀಕರಣವನ್ನು ಹೆಚ್ಚಿಸುವ ಸ್ಥಿತಿಯನ್ನು ಹೊಂದಿಲ್ಲ. ಮಹಿಳೆಯರು ತಮ್ಮ ಆದಾಯವನ್ನು ಖರ್ಚು ಮಾಡುವ ಪೂರ್ಣ ಸ್ವಾಯತ್ತತೆಯನ್ನು ಹೊಂದಿದಾಗ ಹಾಗೂ ತಮ್ಮಲ್ಲಿರುವ ಸಂಪನ್ಮೂಲಗಳ ನಿಯಂತ್ರಣ ಮಾಡಿದಾಗ ಮಾತ್ರ ಅವರ ಆರ್ಥಿಕ ಸಬಲೀಕರಣ ಸಾಧ್ಯ. ಮಹಿಳೆಯರು ಕೇವಲ ಕಾರ್ಮಿಕರಾಗಿರುವುದಕ್ಕಿಂತಲೂ ಉದ್ಯಮಿಗಳಾಗಿದ್ದಾಗ ಆರ್ಥಿಕವಾಗಿ ಹೆಚ್ಚು ಶಕ್ತಿಶಾಲಿಯಾಗಿರುತ್ತಾರೆ. ಏಕೆಂದರೆ ಸಮಾಜದಲ್ಲಿ ತಮ್ಮ ಸಾಮಾಜಿಕ ಸ್ಥಾನ ಮಾನವನ್ನು ಹೆಚ್ಚಿಸುವ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಅವರಿಗಿರುತ್ತದೆ (ರುದ್ರ ಸ್ವಾಮಿ, ೨೦೧೨).

ಮಹಿಳಾ ಸಬಲೀಕರಣದ ಆಯಾಮಗಳು – ಆರ್ಥಿಕ ಹಾಗೂ ಸಾಮಾಜಿಕ

ಹೈನುಗಾರಿಕೆಯಲ್ಲಿ ಸಹಕಾರ ಸಂಘಗಳ ಹೂಡಿಕೆಯು ಅಪೌಷ್ಠಿಕತೆ, ಶಕ್ತಿ ಹಾಗೂ ಇಂಧನದ ಕೊರತೆ ಮತ್ತು ಅರಣ್ಯ ನಾಶಗಳಂತಹ ಸಮಸ್ಯೆಗಳನ್ನು ಪರಿಹರಿಸಿದೆ ಎಂದು ಸುಧಾ, (೨೦೧೫) ರವರು ಹೇಳಿದ್ದಾರೆ. ಅಲ್ಲದೆ ಅವರು ತನ್ನ ಅಧ್ಯಯನದ ಮೂಲಕ ಈ ಅಭಿಪ್ರಾಯವನ್ನು ಮುಂದುವರೆಸುತ್ತರೆ. ಏನೆಂದರೆ "ಸಹಕಾರ ಸಂಘಗಳಿಂದಾಗಿ ಮಹಿಳೆಯರು

ಆರ್ಥಿಕವಾಗಿ ಸಬಲರಾಗಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುತ್ತಾರೆ. ಮಹಿಳೆಯರು ಯಾವಾಗ ಆರ್ಥಿಕವಾಗಿ ಸ್ವಾತಂತ್ರ್ಯರಾಗುತ್ತಾರೋ ಆವಾಗ ಸಾಮಾಜಿಕ ಸ್ಥಾನಮಾನವನ್ನೂ ಗಳಿಸುತ್ತಾರೆ ಮತ್ತು ಸಾಮಾಜಿಕ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಸ್ವ-ಸಹಾಯ ಸಂಘಗಳಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆಯು ಅವರು ಸಮಾಜದಲ್ಲಿ ಗುರುತಿಸುವಂತೆ ಮಾಡಿದೆ. ಕೌಟುಂಬಿಕ ಜವಾಬ್ದಾರಿಗಳನ್ನು ಒಳಗೊಂಡಂತೆ ಸಮಾನ ಆರ್ಥಿಕ ಪಾಲುದಾರರಾಗಿ ಕುಟುಂಬದ ಆದಾಯವನ್ನು ಮಹಿಳೆಯರು ಪೂರಕಗೊಳಿಸುತ್ತಾರೆ".

ಪಾಂಡೆ, ಉನ್ನಿ, ಮೋದಿ ಮತ್ತು ಶರ್ಮಾರವರು ಹೀಗೆ ಹೇಳುತ್ತಾರೆ. "ಹೈನುಗಾರಿಕೆಯು ಮಹಿಳೆಯರಿಗೆ ಆದಾಯದ ದ್ವಿತೀಯ ಮೂಲವೆಂದು ಪರಿಗಣಿಸಲ್ಪಟ್ಟರೂ, ಅದು ಆದಾಯದ ಪ್ರಮುಖ ಮೂಲವಾಗಿ ಹೊರಹೊಮ್ಮಿದೆ. ಸ್ವಂತ ಭೂಮಿಯನ್ನು ಹೊಂದದೆ ಜೀವನಾದಾಯಕ್ಕಾಗಿ ಕಾರ್ಮಿಕ ಕೆಲಸವನ್ನು ಅವಲಂಬಿಸಿರುವ ಕುಟುಂಬಗಳಿಗೆ ಹೈನುಗಾರಿಕೆ ಆದಾಯದ ಮುಖ್ಯ ಮೂಲವಾಗಿದೆ. ಮಹಿಳೆಯರು ಆರ್ಥಿಕ ಸಬಲೀಕರಣದಿಂದ ದಿನನಿತ್ಯದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸ್ವತಂತ್ರರಾಗಿದ್ದಾರೆ".

ಮಹದೇವ ಮತ್ತು ವೀಣಾ, (೨೦೧೨) ರವರು ಸರಕಾರವು ಮಹಿಳಾ ಉದ್ಯಮಿಗಳಿಗೆ ಸಬ್ಸಿಡಿ ಮತ್ತು ರಿಯಾಯಿತಿಗಳನ್ನು ನೀಡುವ ಮೂಲಕ ಮಹಿಳೆಯರ ಉದ್ಯಮಶೀಲತೆಯನ್ನು ಬಲಪಡಿಸಿಬಹುದು. ಸರಕಾರವು ತನ್ನ ಅಧೀನದಲ್ಲಿರುವ ಹಣಕಾಸು ಸಂಸ್ಥೆಗಳ ಮೂಲಕ ವಿಶೇಷ ಸಾಲ ನೀತಿಗಳನ್ನು ಜಾರಿಗೊಳಿಸುವುದು, ಸಾಲಗಳು ಅಪೇಕ್ಷಿತರಿಗೆ ಶೀಘ್ರವಾಗಿ ದೊರಕುವಂತೆ ಮಾಡುವುದು ಹಾಗೂ ಉದಾರ ಪಾವತಿ ನೀತಿಗಳನ್ನು ಜಾರಿಗೊಳಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಮಹಿಳೆಯರ ಉದ್ಯಮ ಶೀಲತೆ ಬಲಗೊಳ್ಳುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ರೆಡ್ಡಿ (೨೦೧೪) ಯವರ ಪ್ರಕಾರ, ಡೈರಿ ಸಹಕಾರ ಸಂಘಗಳ ಮೂಲಕ ಕುಟುಂಬದ ಸದಸ್ಯರಿಗೆ ವಿಶೇಷವಾಗಿ ಮಹಿಳೆಯರಿಗೆ ಲಾಭದಾಯಕ ಉದ್ಯೋಗಾವಕಾಶಗಳು ಗಣನೀಯವಾಗಿ ಹೆಚ್ಚಿವೆ. ಡೈರಿಂಗ್ (ಹೈನುಗಾರಿಕೆ) ಹೆಚ್ಚುವರಿ ಆದಾಯದ ಮೂಲವಾಗಿದ್ದು, ಮಹಿಳಾ ಸದಸ್ಯರನ್ನು ಆರ್ಥಿಕವಾಗಿ ಸಬಲರಾಗಿ ಆಸ್ತಿಪಾಸ್ತಿಗಳ ಸ್ಥಿತಿಯನ್ನು ಸುಧಾರಿಸುವಂತೆ ಮಾಡಿತು. ಸಾಮಾಜಿಕವಾಗಿ ಒಕ್ಕೂಟದಲ್ಲಿನ ಅವರ ಸದಸ್ಯತ್ವವು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನವನ್ನು ಸುಧಾರಿಸಿದೆ.

ಕೃಷ್ಣನ್ (೧೯೯೭), ತನ್ನ ಸಂಶೋಧನಾ ಲೇಖನದಲ್ಲಿ ಕೇರಳದ ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಂಡ ಸಮಗ್ರ ಗ್ರಾಮೀಣಾಭಿವೃದ್ಧಿ

ಯೋಜನೆಯಡಿಯಲ್ಲಿ ಡೈರಿ ಯೋಜನೆಯ ವಿಭಿನ್ನ ಅಂಶಗಳನ್ನು ಪರಿಶೀಲಿಸಿದ್ದಾರೆ ಹಾಗು ಡೈರಿ ಯೋಜನೆಯು ಹೆಚ್ಚುವರಿ ಉದ್ಯೋಗ ಮತ್ತು ಆದಾಯವನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಕಂಡು ಕೊಂಡಿದ್ದಾರೆ. ಡೈರಿಂಗ್ ಪ್ರಧಾನವಾಗಿ ಹೆಣ್ಣು ಮಕ್ಕಳ ಚಟುವಟಿಕೆಯಾಗಿದೆ ಎಂದು ಅವರು ಅರಿತುಕೊಂಡಿದ್ದಾರೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮೇಲೆ ಮಹಿಳಾ ಸಬಲೀಕರಣದ ಪರಿಣಾಮಗಳು :

ರಾವ್ (೨೦೦೩) ರವರು ಮಹಿಳಾ ಸಬಲೀಕರಣದ ಮೇಲೆ ಡೈರಿ ಸಹಕಾರ ಸಂಘಗಳ ಪ್ರಭಾವವನ್ನು ಗುರುತಿಸುತ್ತಾರೆ. "ಮಹಿಳಾ ಸಬಲೀಕರಣವು ಮಹಿಳೆಯರ ವೈಯಕ್ತಿಕ ಜೀವನದ ಮೇಲೆ ಮಾತ್ರವಲ್ಲ, ಅವರು ಸದಸ್ಯರಾಗಿರುವ ಸಹಕಾರ ಸಂಘಗಳ ಮೇಲೆಯೂ ಪರಿಣಾಮ ಬೀರುತ್ತದೆ. ಅಲ್ಲದೆ ಮಹಿಳೆಯರು ಪುರುಷರಿಗಿಂತ ಉತ್ತಮ ಕೆಲಸಗಾರರು ಮತ್ತು ತಮ್ಮ ಆತ್ಮ ಸಾಕ್ಷಿಯಾಗಿ ದುಡಿಯುವವರೂ ಆಗಿರುತ್ತಾರೆ ಹಾಗೂ ತಮ್ಮ ಕರ್ತವ್ಯಗಳನ್ನು ಅತ್ಯಂತ ಜವಾಬ್ದಾರಯುತರಾಗಿ ನಿರ್ವಹಿಸುತ್ತಾರೆ" ಎಂದು ಹೇಳುತ್ತಾರೆ.

ಹೈನುಗಾರಿಕೆಯು ಮಹಿಳೆಯರಿಗೆ ಈ ಚಟುವಟಿಕೆಯನ್ನು ಉದ್ಯಮವಾಗಿ ಅಭಿವೃದ್ಧಿ ಪಡಿಸಲು ಮತ್ತು ವರ್ಷದುದ್ದಕ್ಕೂ ಸ್ಥಿರ ನಗದು ಆದಾಯವನ್ನು ಖಾತ್ರಿಗೊಳಿಸಲು ಒಳ್ಳೆಯ ಅವಕಾಶ ಕಲ್ಪಿಸುತ್ತದೆ (ಕುಮಾರಿ, ಕುಮಾರ್, ಲಾಲ್, ದಯಾಲ್ ಮತ್ತು ಡೇ, ೨೦೧೪).

ಎನ್‌ಡಿಡಿಬಿ ವರದಿಯ ಪ್ರಕಾರ, ಮಹಿಳೆಯರು ಹೈನುಗಾರಿಕಾ ಅಭಿವೃದ್ಧಿಯಲ್ಲಿ ಈಗ ಮುಂಚೂಣಿಯಲ್ಲಿದ್ದಾರೆ. ಪ್ರಸ್ತುತ ಒಟ್ಟು ೧.೬೦ ಲಕ್ಷ ಗ್ರಾಮೀಣ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ೨೬,೭೦೦ ರಷ್ಟು ಹಾಲು ಉತ್ಪಾದಕರ ಮಹಿಳಾ ಸಂಘಗಳಿವೆ. ಅಂದರೆ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳ ವಾರ್ಷಿಕ ಬೆಳವಣಿಗೆ ದರ ೧೦% ಆಗಿದೆ. ಇದೆಲ್ಲವೂ ಹೈನುಗಾರಿಕೆ ಉದ್ಯಮದಲ್ಲಿ ಮಹಿಳಾ ಸಬಲೀಕರಣವು ಸಾಕಷ್ಟು ಮುನ್ನಡೆದಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ತೆಗೆದುಕೊಂಡ ಉಪಕ್ರಮಗಳು

ನಂದನ್ (೨೦೧೫), ರವರ ಪ್ರಕಾರ ಕರ್ನಾಟಕದ ಕೆ.ಎಂ.ಎಫ್. ಮತ್ತು ಸರಕಾರದ ಧನಾತ್ಮಕ ಹಸ್ತಕ್ಷೇಪ ಹೈನುಗಾರಿಕೆಯ ಬಗ್ಗೆ ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿಯನ್ನು

ಮೂಡಿಸಿದೆ. ಸ್ಟೆಪ್ (STEP) ಕಾರ್ಯಕ್ರಮವು ಡೈರಿ ಫಾರ್ಮ್‌ಗಳ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಉದ್ದೇಶಿಸಿ ಯೋಜನೆಯನ್ನು ಭಾರತದಾದ್ಯಂತ ಯಶಸ್ವಿಯಾಗಿ ಪ್ರಾರಂಭಿಸಿದೆ ಹಾಗೂ ಮನೆ ಮತ್ತು ಸಮುದಾಯ ಸಂಪನ್ಮೂಲಗಳ ಮೇಲೆ ಮಹಿಳೆಯರ ಪ್ರವೇಶ ಮತ್ತು ನಿಯಂತ್ರಣವನ್ನು ಹೆಚ್ಚಿಸುವ ಮೂಲಕ ಮಹಿಳೆಯರ ಸ್ವಯಂ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯವನ್ನು ಸ್ಟೆಪ್ (STEP) ಯೋಜನೆಯು ಗಮನಾರ್ಹವಾಗಿ ಸಾಧಿಸಿದೆ.

"ಭಾರತ ಸರಕಾರದ ಪ್ರಾಯೋಜಿತ ಮತ್ತು ಕೆ.ಎಮ್.ಎಫ್. ಜಾರಿಗೊಳಿಸಿದ ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು ಸಹಕಾರ ಸಂಘಗಳಿಗೆ ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಸಹಾಯ ಮಾಡಿವೆ. ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಸಾಮಾಜಿಕ ಬದಲಾವಣೆಯು ಹುಲ್ಲಿನ ಮೂಲ ಮಟ್ಟದಲ್ಲಿ ನಡೆಯುತ್ತಿದೆ. ಸಹಕಾರ ಸಂಘಗಳು ಸಮಾಜದಲ್ಲಿ ತಮ್ಮ ಗುರುತಿನ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಈ ರಾಜ್ಯ ಪ್ರಾಯೋಜಿತ ಕಾರ್ಯಕ್ರಮಗಳು ಸಹರಕಾರ ಸಂಘಗಳು ತಮ್ಮ ಗುರುತನ್ನು ಉಳಿಸುಕೊಳ್ಳುವಲ್ಲಿ ಸಹಕರಿಸುತ್ತಿವೆ" ಎಂದು ಪರಂಜ್ಯೋತಿ ಮತ್ತು ರವಿಚಂದ್ರನ್‌ರವರು ಹೇಳುತ್ತಾರೆ.

ಶೀಲಾ ಮತ್ತು ಗೌಡ (೨೦೧೩), ರವರು ಹೇಳುವ ಪ್ರಕಾರ ಮಹಿಳಾ ಸಹಕಾರ ಸಂಘಗಳಲ್ಲಿ ಇರುವ ಪ್ರಯೋಜನಗಳ ಬಗ್ಗೆ ಮಹಿಳೆಯರಿಗೆ ಹೆಚ್ಚು ಜಾಗೃತಿ ಅಭಿಯಾನವನ್ನು ನೀಡಲು ಸಹಕಾರಿ ಸಂಘಗಳು ಮತ್ತು ಸ್ಥಳೀಯ ಸರ್ಕಾರಿ ಅಧಿಕಾರಿಗಳು ಒಟ್ಟಿಗೆ ಕೆಲಸ ಮಾಡಬೇಕಾಗಿದೆ ಹಾಗೂ ಹೆಚ್ಚು ಹೆಚ್ಚು ಮಹಿಳೆಯರನ್ನು ಸಹಕಾರಿ ಸಂಘಗಳ ಸದಸ್ಯರನ್ನಾಗಿ ಮಾಡಲು ಪ್ರಯತ್ನಿಸಬೇಕಾಗಿದೆ. ಒಂದು ವೇಳೆ ಈ ಸಹಕಾರಿ ಸಂಘಗಳನ್ನು ಚೆನ್ನಾಗಿ ನಿರ್ವಹಿಸಿದ್ದರೆ, ಅವರು ತಮ್ಮ ಸದಸ್ಯರ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಉನ್ನತೀಕರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಹೇಗೆಂದರೆ ಈ ಸಹಕಾರಿ ಸಂಘಗಳು ಸದಸ್ಯರಿಗೆ ಅವಕಾಶಗಳನ್ನು ಸೃಷ್ಟಿಸುತ್ತವೆ ಮತ್ತು ಅವುಗಳನ್ನು ಮಾರುಕಟ್ಟೆಗೆ ಲಿಂಕ್ ಮಾಡಿ ಹಣಕಾಸು ಸೇವೆಗಳನ್ನು ಒದಗಿಸುತ್ತವೆ.

ರಮಾನಂದ ಮತ್ತು ಕುಮಾರ್ (೨೦೧೦), ರವರು ತಮ್ಮ ಲೇಖನದಲ್ಲಿ ಹೀಗೆ ವಿಶ್ಲೇಷಿಸಿದ್ದಾರೆ. "ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರಿಗೆ ಶಿಕ್ಷಣ ಮತ್ತು ಸರಿಯಾದ ತರಬೇತಿಯನ್ನು ನೀಡಬೇಕು. ರಾಜಕಾರಣಿಗಳನ್ನು ಸಹಕಾರಿ ಸಂಘಗಳ ಚಟುವಟಿಕೆಯಿಂದ ದೂರವಿರಿಸಬೇಕು. ಸಹಕಾರ ಸಂಘಗಳ ಆಡಳಿತ ಅಥವಾ ನಿರ್ವಹಣೆಯ

ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಬೇಕು ಹಾಗೂ ಉತ್ತಮ ಭಾಗವಹಿಸುವಿಕೆಗೆ ಪ್ರೋತ್ಸಾಹಕರ ಬಹುಮಾನಗಳನ್ನು ನೀಡಬೇಕು".

ಸಬಲೀಕರಣದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ಪ್ರಸಾದ್ ಮತ್ತು ಚಂದ್ರಶೇಖರ್ (೨೦೧೭), ರವರು ಗಮನಿಸಿದ ಪ್ರಕಾರ ವಿಶ್ವಬ್ಯಾಂಕ್ ಅನುದಾನಿತ ಡೈರಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಕರ್ನಾಟಕದ ಕೆಎಂಎಫ್‌ನ ಪಾತ್ರ ಬಹಳ ದೊಡ್ಡದಾಗಿದೆ ಹಾಗೂ ಇದರಿಂದಾಗಿ ಹಾಲು ಉತ್ಪಾದಕರ ಸಂಘಗಳು ಅದರಲ್ಲೂ ಡೈರಿ ಉತ್ಪಾದಕರ ಮಹಿಳಾ ಸಂಘಗಳು ಪ್ರತಿವರ್ಷವೂ ಹೆಚ್ಚಾಗುತ್ತಿವೆ. ಆದರೆ ಮಹಿಳಾ ಡೈರಿ ಸಹಕಾರ ಸಂಘಗಳು ಒಟ್ಟಾರೆಯಾಗಿ ಹೆಚ್ಚಿದರೂ, ಮಹಿಳೆಯರ ಡೈರಿ ಅಭಿವೃದ್ಧಿಗೆ ಅಸ್ತಿತ್ವದಲ್ಲಿರುವ ನೀತಿಗಳಿಂದಾಗಿ, ವಾರ್ಷಿಕ ಬೆಳವಣಿಗೆಯ ಪ್ರಮಾಣ ಕಡಿಮೆಯಾಗಿದೆ.

ಬೇಬಿ, (೨೦೧೪) ಯವರ ಅಭಿಪ್ರಾಯದ ಪ್ರಕಾರ, ಮಹಿಳೆಯರು ಹೈನುಗಾರಿಕೆಯನ್ನು ಲಾಭದಾಯಕ ಕ್ಷೇತ್ರವನ್ನಾಗಿ ಪರಿಗಣಿಸಿದ್ದಾರೆ. ಏಕೆಂದರೆ ಡೈರಿ ಕ್ಷೇತ್ರವು ಲಾಭದಾಯಕ ಚಟುವಟಿಕೆಯಾಗಿದೆ. ಉದ್ಯೋಗದ ಸುರಕ್ಷತೆಯನ್ನು ಒದಗಿಸುತ್ತದೆ, ಸುಲಭ ಮಾರುಕಟ್ಟೆಯ ಲಭ್ಯವಿದೆ. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸಿ ಅವರ ಸ್ವಾಭಿಮಾನವನ್ನು ಹೆಚ್ಚಿಸುತ್ತದೆ. ಅಲ್ಲದೆ ಡೈರಿಕ್ಷೇತ್ರದಲ್ಲಿ ಸರಕಾರ ಆಯೋಜಿಸಿದ ಅನೇಕ ಯೋಜನೆಗಳು ಕೂಡಾ ಡೈರಿ ಕ್ಷೇತ್ರವನ್ನು ತುಂಬಾ ಲಾಭದಾಯಕ ಕ್ಷೇತ್ರವನ್ನಾಗಿ ಮಾಡಿದೆ.

ಆದರೆ ಬೇಬಿಯವರು ತಮ್ಮ ಅಧ್ಯಯನದಲ್ಲಿ "ಸಂಘದ ಸದಸ್ಯರು ಜಾನುವಾರುಗಳ ಆಹಾರದ ಕೊರತೆ, ಪಶುವೈದ್ಯ ಸೇವೆಗಳ ಕೊರತೆ, ಜಾನುವಾರುಗಳ ಅನಾರೋಗ್ಯ ಮತ್ತು ಸಂಘಗಳ ಸರಿಯಾದ ನಿರ್ವಹಣೆಯ ಕೊರತೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ" ಎಂದು ಗಮನಿಸಿದ್ದಾರೆ.

ಮುಕ್ತಿ (೧೯೮೮), ಯವರು "ಮಹಿಳೆಯರನ್ನು ಸಹಕಾರ ಸಂಘಗಳ ಸದಸ್ಯರನ್ನಾಗಲು ಪ್ರೇರೇಪಿಸಬೇಕಾದರೆ ಅವರು ಸರಬರಾಜು ಮಾಡುವ ಹಾಲಿಗೆ ಉತ್ತಮ ಹಾಗೂ ನ್ಯಾಯಯುತ ಬೆಲೆಯ ಭರವಸೆ ನೀಡಬೇಕು, ಸಂಘದ ಮೇಲ್ವಿಚಾರಕರು ಹಾಲಿನ ಗುಣಮಟ್ಟವನ್ನು ಪರೀಕ್ಷಿಸಿ, ಅದಕ್ಕೆ ತಕ್ಕ ಬೆಲೆ ನಿಗದಿಪಡಿಸಿಬೇಕು" ಎಂದು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ ಮಹಿಳಾ ಸಹಕಾರಿ ಸಂಘಗಳು ಎಷ್ಟೇ ಅಭಿವೃದ್ದಿಯನ್ನು ಸಾಧಿಸಿದರೂ ಕೆಲವು ನಗರ ಪ್ರದೇಶಗಳಲ್ಲಿ ಶುದ್ಧ ಹಾಲನ್ನು ಪೂರೈಸುವ ಸಮಸ್ಯೆಯನ್ನು ಇನ್ನೂ ಎದುರಿಸುತ್ತಿದಾರೆ. ಸಹಕಾರಿ ಸಂಘಗಳು ಈ ವಿಷಯಕ್ಕೆ ಸಂಬಂಧಪಟ್ಟಂತೆ ಕೆಲವು ಉಪಕ್ರಮಗಳನ್ನು ಕೈಗೊಳ್ಳಬೇಕು.

ಕೌಶಿಕ್ ಮತ್ತು ಸಿಂಗಲ್ (೧೯೯೩) ರವರು ತಮ್ಮ ಲೇಖನದಲ್ಲಿ ಹೀಗೆ ವಿಶ್ಲೇಷಿಸಿದ್ದಾರೆ. "ಡೈರಿ ಬೇಸಾಯಕ್ಕೆ ಸಂಬಂಧಿಸಿದ ಮಹಿಳಾ ಸಮಸ್ಯೆಗಳು ಅನೇಕ. ಮಹಿಳಾ ಸದಸ್ಯೆಯರಿಗೆ, ಅಸ್ತಿತ್ವದಲ್ಲಿರುವ ಸರಕಾರದ ಸಬ್ಸಿಡಿಗಳು ಮತ್ತು ಇತರ ಪ್ರಯೋಜನಗಳು ಹಾಗೂ ಯೋಜನೆಗಳ ಬಗ್ಗೆ ಸೂಕ್ತ ಮಾಹಿತಿ ಒದಗಿಸಬೇಕು" ಎಂದಿದ್ದಾರೆ.

ಮೀನ, ದುಡಿ ಮತ್ತು ಶರ್ಮಾ, (೨೦೧೩) ರವರು ತಮ್ಮ ಲೇಖನದಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ. "ಸದಸ್ಯರಿಗೆ ಸಹಕಾರಿ ಸಂಘಗಳ ಮೂಲಕ ಜಾನುವಾರುಗಳನ್ನು ಕೊಳ್ಳಲು ಸಿಗುವ ಸಾಲ ಸೌಲಭ್ಯಗಳ ಮಾಹಿತಿಯ ಲಭ್ಯದ ಕೊರತೆ ಇದೆ ಹಾಗೂ ಅನಿಯಮಿತ ಮತ್ತು ಅಸಮರ್ಪಕ ಬೋನಸ್ ವಿತರಣೆ ವ್ಯವಸ್ಥೆ ಮತ್ತು ಪಶುವೈದ್ಯರು ತುರ್ತು ಸೇವೆಗಾಗಿ ಹೆಚ್ಚಿನ ಶುಲ್ಕ ಪಡೆಯುವುದು ಮುಂತಾದ ತೊಂದರೆಗಳಿವೆ" ಎಂದಿದ್ದಾರೆ.

ಮೇಲಿನ ಹೆಚ್ಚಿನ ಅಧ್ಯಯನಗಳು, ಮಹಿಳಾ ಸಬಲೀಕರಣಕ್ಕೆ ಕಾರಣವಾದ ಅನೇಕ ಆಯಾಮಗಳಲ್ಲಿ ಕೇವಲ ಕೆಲವು ಆಯಾಮಗಳ ಮೇಲೆ ಯಾ ಉಪಕ್ರಮಗಳು ಅಥವಾ ಸಮಸ್ಯೆಗಳ ಮೇಲೆ ಮಾತ್ರ ಬೆಳಕು ಚೆಲ್ಲಿವೆ. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳಾ ಸಬಲೀಕರಣದ ನಿಖರವಾದ ಪರಿಕಲ್ಪನೆಯ ತಿಳುವಳಿಕೆ ಮತ್ತು ಸಮಗ್ರ ಚಿತ್ರಣದ ಬಗ್ಗೆ ಅಧ್ಯಯನವು ನಿಜವಾಗಿಯೂ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತಾಪಿತ ಸಂಶೋಧನಾ ಅಧ್ಯಯನವು ಪ್ರಸ್ತುತ ಸಂಶೋಧನಾ ಅಂತರವನ್ನು ನೀಗಿಸುವ ಒಂದು ಪ್ರಯತ್ನವಾಗಿದೆ.

ಅಧ್ಯಾಯ-೦೩

ದಕ್ಷಿಣಕನ್ನಡ ಜಿಲ್ಲೆಯ ಕೆಲವು ತಾಲೂಕುಗಳ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಪರಿಚಯ ಹಾಗೂ ಮಹಿಳೆಯರ ಸಬಲೀಕರಣಕ್ಕಾಗಿ ಹಾಲು ಉತ್ಪಾದಕರ ಮಹಿಳಾ ಸಂಘಗಳು ತೆಗೆದುಕೊಳ್ಳುವ ಉಪಕ್ರಮಗಳು

ಅಧ್ಯಾಯ –೩

ಮಹಿಳೆಯರ ಸಬಲೀಕರಣಕ್ಕಾಗಿ ಮಾದರಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ತೆಗೆದುಕೊಂಡ ಉಪಕ್ರಮಗಳು

ಈ ಅಧ್ಯಾಯದಲ್ಲಿ ಮಾದರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಂಕ್ಷಿಪ್ತ ಚಿತ್ರಣದ ಜೊತೆಗೆ ಈ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಕೈಗೊಂಡ ವಿವಿಧ ಉಪಕ್ರಮಗಳ ಪ್ರಾಯೋಗಿಕ ವಿಶ್ಲೇಷಣೆಯನ್ನು ನಡೆಸಲಾಗಿದೆ.

೩.೧ ದಕ್ಷಿಣ ಕನ್ನಡ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟ:

ಕರ್ನಾಟಕದಲ್ಲಿ 'ನಂದಿನಿ ಡೈರಿ', ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಿಂದ ಹಾಲು ಸಂಗ್ರಹಿಸಿ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ಅದೇ ತರಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ದಕ್ಷಿಣ ಕನ್ನಡ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ' ೧೯೮೬ರಲ್ಲಿ ಸ್ಥಾಪನೆಯಾಗಿದ್ದು, ಇದರ ವ್ಯಾಪ್ತಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊಂದಿದೆ. ಇದೊಂದು ಐ.ಎಸ್.ಒ (ISO) ೨೨೦೦೦ : ೨೦೦೫ ಪ್ರಮಾಣೀಕೃತ ಸಂಸ್ಥೆಯಾಗಿದ್ದು, ಕರ್ನಾಟಕದ ಪ್ರಮುಖ ಹಾಲು ಸಂಘಗಳ ಒಕ್ಕೂಟಗಳಲ್ಲಿ ಒಂದಾಗಿದೆ. ೧೯೮೬ ರಲ್ಲಿ ಈ ಒಕ್ಕೂಟದ ನೋಂದಣಿ ಸಮಯದಲ್ಲಿ ಒಕ್ಕೂಟದ ಹಾಲು ಸಂಗ್ರಹಣೆಯ ಸಾಮರ್ಥ್ಯ ೪೫೦೦ ಕಿಲೋ ಆಗಿದ್ದು, ಈಗ ೪,೫೦,೦೦೦/- ಕಿಲೋ ಗಳಾಗಿವೆ.

ಈ ಒಕ್ಕೂಟದ ವ್ಯಾಪ್ತಿಯಲ್ಲಿ ೬೮೭ ಹಾಲಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ೧೮೮ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಾಗಿವೆ ಮತ್ತು ಅವುಗಳಲ್ಲಿ ೧೩೭ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳು ಭಾರತ ಸರ್ಕಾರದ "ಸ್ಟೆಪ್" (STEP) ಯೋಜನೆಯಡಿಯಲ್ಲಿ ರೂಪುಗೊಂಡಿವೆ. ಈ ಹಾಲು ಉತ್ಪಾದಕರ ಮಹಿಳಾ ಸಂಘಗಳ ಒಕ್ಕೂಟದಲ್ಲಿ ಒಟ್ಟು ೧,೨೪,೮೩೦ ರಷ್ಟು ರೈತ ಸದಸ್ಯರಿದ್ದು, ಅದರಲ್ಲಿ ೩೫,೫೪೮ ಸದಸ್ಯರು ಮಹಿಳೆಯರೇ ಆಗಿದ್ದಾರೆ. ಅಗತ್ಯವಿರುವ ಸೇವೆಗಳನ್ನು ಸದಸ್ಯರಿಗೆ ವಿಸ್ತರಿಸುವ ಮೂಲಕ ಉತ್ತಮ ಗುಣಮಟ್ಟದ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಿ, ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸುಧಾರಿಸುವುದು ಈ ಒಕ್ಕೂಟದ ಮುಖ್ಯ ಉದ್ದೇಶ. (ಡಿ.ಕೆ.ಎಮ್.ಯು.ಎಲ್. ವರದಿ, ೨೦೧೭).

ಈ ಒಕ್ಕೂಟದ ಅಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ, ಸುಳ್ಯ ತಾಲೂಕಿನ ಹಾಲಿನ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ

ಅಧ್ಯಯನಕ್ಕೆ ಮಂಗಳೂರು, ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕಿನ ಹತ್ತು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಆಯ್ದುಕೊಳ್ಳಲಾಗಿದೆ. ಈ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಕಿರು ಪರಿಚಯ ಹೀಗಿದೆ.

೩.೧.೧ ಕಟೀಲು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ೧೯೯೪ರಲ್ಲಿ ಸ್ಥಾಪಿಸಲ್ಪಟ್ಟಿದ್ದು ಮಂಗಳೂರು ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. ಈ ಸಹಕಾರಿ ಸಂಘದಲ್ಲಿ ಪ್ರಸ್ತುತ ೧೯೬ ಸದಸ್ಯರು ಸಕ್ರಿಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೫ ವರ್ಷಗಳ ಹಿಂದೆ, ಈ ಸಂಘದ ಸದಸ್ಯರ ಸಂಖ್ಯೆ ೧೨೫ ಆಗಿತ್ತು. ಇದು ಸ್ಟೆಪ್ ಹಂತ –೪ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಮೊದಲು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಹಕಾರಿ ಸಂಘವು ಈಗ ತಮ್ಮದೇ ಆದ ಸ್ವಂತ ಕಟ್ಟಡಕ್ಕೆ ತಮ್ಮ ವ್ಯವಹಾರವನ್ನು ಸ್ಥಳಾಂತರಿಸಿದೆ. ದಿನಕ್ಕೆ ೬೨೫ ಲೀ.ಗಳಷ್ಟು ಹಾಲನ್ನು ಸದಸ್ಯೆಯರಿಂದ ಈ ಸಂಘವು ಸಂಗ್ರಹಿಸುತ್ತಿದೆ.

೩.೧.೨ ಸೂರಿಂಜೆ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ೨೦೦೧ರಲ್ಲಿ ಸ್ಥಾಪಿತವಾಗಿದ್ದು, ಮಂಗಳೂರು ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. ಇದು ಸ್ಟೆಪ್ ಯೋಜನೆಯಡಿಯಲ್ಲಿ ಬರುವ ಸಹಕಾರ ಸಂಘವಾಗಿದ್ದು, ೧೪೯ ಸದಸ್ಯೆಯರನ್ನು ಒಳಗೊಂಡಿದೆ. ತಮ್ಮದೇ ಆದ ಸ್ವಂತ ಕಟ್ಟಡದಲ್ಲಿ ವ್ಯವಹಾರ ನಡೆಸುತ್ತಿದೆ.

೩.೧.೩ ಕೆಂಜಾರು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ಮಂಗಳೂರು ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದ್ದು, ೨೦೦೩ರಲ್ಲಿ ಸ್ಥಾಪಿತವಾಗಿದೆ. “ಸ್ಟೆಪ್”– ಹಂತ ೨ ಯೋಜನೆಯಡಿಯಲ್ಲಿ ಬರುವ ಈ ಹಾಲಿನ ಸಹಕಾರಿ ಸಂಘವು ೫ ವರ್ಷಗಳ ಹಿಂದೆ ೫೪ ಸದಸ್ಯೆಯರನ್ನೊಳಗೊಂಡಿದ್ದು, ಈಗ ಅದರ ಸದಸ್ಯರ ಸಂಖ್ಯೆ ೧೫೨ಕ್ಕೆ ಏರಿದೆ. ದಿನಕ್ಕೆ ೬೦೦ ಲೀಟರ್‌ಗಳಷ್ಟು ಹಾಲನ್ನು ಈ ಸಹಕಾರಿ ಸಂಘವು ಸದಸ್ಯೆಯರಿಂದ ಸಂಗ್ರಹಿಸುತ್ತಿದೆ. ಈ ಸಂಘವು ಕೂಡಾ ಬಾಡಿಗೆ ಕಟ್ಟಡದಲ್ಲಿ ತಮ್ಮ ಹಾಲಿನ ವ್ಯವಹಾರವನ್ನು ನಡೆಸುತ್ತಿದೆ.

೩.೧.೪ ಕುಕ್ಕುದ ಕಟ್ಟೆ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ಮಂಗಳೂರು ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದ್ದು ೨೦೧೨ರಲ್ಲಿ ಸ್ಥಾಪಿತವಾಗಿದೆ. ೫ ವರ್ಷಗಳ ಹಿಂದೆ ಈ ಸಂಘದ ಸದಸ್ಯೆಯರ ಸಂಖ್ಯೆ ೧೪ ಆಗಿದ್ದು, ಪ್ರಸ್ತುತ ಈ ಹಾಲಿನ ಸಂಘದ ಸದಸ್ಯೆಯರ ಸಂಖ್ಯೆ ೧೩೧ ಕ್ಕೆ ಏರಿದೆ. ಈ ಡೈರಿಯು ದಿನಕ್ಕೆ ೪೦೦ ಲೀಟರ್‌ನಷ್ಟು ಹಾಲನ್ನು ಸದಸ್ಯರಿಂದ ಸಂಗ್ರಹಣೆ ಮಾಡುತ್ತದೆ ಮತ್ತು ಈ ಡೈರಿ ಸಂಘವು ಸ್ಟೆಪ್ (STEP) ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬಾಡಿಗೆ ಕಟ್ಟಡದಲ್ಲಿ ವಹಿವಾಟು ನಡೆಸುತ್ತಿದೆ.

೩.೧.೫ ಕಡೇಶ್ವಾಲ್ಯ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

೧೯೯೭ರಲ್ಲಿ ಸ್ಥಾಪಿಸಲ್ಪಟ್ಟ ಈ ಸಹಕಾರಿ ಸಂಘವು ಬಂಟ್ವಾಳ ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. ಸ್ಟೆಪ್ ಯೋಜನೆಯಡಿಯಲ್ಲಿ ಬರುವ ಈ ಸಹಕಾರಿ ಸಂಘವು ತನ್ನ ಸ್ವಂತ ಕಟ್ಟಡದಲ್ಲಿ ವ್ಯವಹಾರ ನಡೆಸುತ್ತಿದ್ದು, ದಿನಕ್ಕೆ ಸರಾಸರಿ ೮೦೦ ಲೀಟರ್‌ರಷ್ಟು ಹಾಲನ್ನು ಸದಸ್ಯರಿಂದ ಸಂಗ್ರಹಿಸುತ್ತಿದೆ. ೫ ವರ್ಷಗಳ ಹಿಂದೆ ಈ ಸಂಘದ ಸದಸ್ಯರ ಸಂಖ್ಯೆ ೨೨೩ ಆಗಿದ್ದು, ಪ್ರಸ್ತುತ ೩೫೦ ಸದಸ್ಯರನ್ನು ಒಳಗೊಂಡಿದೆ.

೩.೧.೬ ಶಂಭೂರು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಮಹಿಳಾ ಸಹಕಾರಿ ಸಂಘವು ೨೦೦೩ರಲ್ಲಿ ಸ್ಥಾಪಿಸಲ್ಪಟ್ಟಿದ್ದು, ಪ್ರಸ್ತುತ ೨೯೬ ಸದಸ್ಯರನ್ನು ಒಳಗೊಂಡಿದೆ. ಈ ಸಂಘವು ೫ ವರ್ಷಗಳ ಮೊದಲು ೨೨೪ ಸದಸ್ಯರನ್ನು ಒಳಗೊಂಡಿತ್ತು. ಸ್ಟೆಪ್ – ಹಂತ ೩ ಯೋಜನೆಯಡಿಯಲ್ಲಿ ಬರುವ ಈ ಸಹಕಾರಿ ಸಂಘವು ಬಂಟ್ವಾಳ ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. ಪ್ರತಿ ದಿನಕ್ಕೆ ೭೫೦ ಲೀಟರ್‌ರಷ್ಟು ಹಾಲನ್ನು ಸದಸ್ಯರಿಂದ ಈ ಸಂಘವು ಸಂಗ್ರಹಿಸುತ್ತಿದೆ. ಈ ಸಹಕಾರಿ ಸಂಘವು ಅಭಿವೃದ್ಧಿ ಹೊಂದಿದ ಸಂಘವಾಗಿದ್ದು, ೩ ವರ್ಷದಲ್ಲಿಯೇ ತಮ್ಮ ವ್ಯವಹಾರವನ್ನು ಬಾಡಿಗೆ ಕಟ್ಟಡದಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಿದೆ ಹಾಗೂ ತಮ್ಮದೇ ಆದ ಇನ್ನೊಂದು ಕಟ್ಟಡವನ್ನು ಹೊಂದಿದ್ದು ಅದನ್ನು ಬಾಡಿಗೆಗೆ ಕೊಡಲಾಗಿದೆ.

೩.೧.೭ ಅಂತರ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ೨೦೦೬ರಲ್ಲಿ ಸ್ಥಾಪಿಸಲ್ಪಟ್ಟು, ಪ್ರಸ್ತುತ ೧೯೪ ಸದಸ್ಯರನ್ನು ಒಳಗೊಂಡಿದೆ. ೫ ವರ್ಷಗಳ ಹಿಂದೆ ಇದರ ಸದಸ್ಯರ ಸಂಖ್ಯೆ ಸರಾಸರಿ ೪೦ ಆಗಿತ್ತು. ೫೨೦ ಲೀಟರ್‌ರಷ್ಟು ಹಾಲನ್ನು ಸಂಗ್ರಹಿಸುವ ಈ ಸಹಕಾರಿ ಸಂಘವು ಸ್ಟೆಪ್ ಯೋಜನೆಯಡಿಯಲ್ಲಿ ತಮ್ಮ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಹಕಾರಿ ಸಂಘವು ಬಂಟ್ವಾಳ ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. 'ರೀಟಾ' ಎನ್ನುವವರೊಬ್ಬರೇ ೧೨೫ ಲೀ.ನಷ್ಟು ಹಾಲನ್ನು ಸಂಘಕ್ಕೆ ಸರಬರಾಜು ಮಾಡುತ್ತಿದ್ದಾರೆ.

೩.೧.೮ ಪಿಲಿಗೋಡು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ಬೆಳ್ತಂಗಡಿ ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದ್ದು, ೧೯೯೮ರಲ್ಲಿ ಸ್ಥಾಪಿತವಾಗಿದೆ. ಸ್ಟೆಪ್ ಯೋಜನೆಯಡಿಯಲ್ಲಿ ಬರುವ ಈ ಸಹಕಾರಿ ಸಂಘವು ಅಭಿವೃದ್ಧಿ ಹೊಂದಿದ ಸಹಕಾರಿ ಸಂಘಗಳಲ್ಲೊಂದಾಗಿದ್ದು, ೧೩೫೦ ಲೀಟರ್ ರಷ್ಟು ಹಾಲನ್ನು ದಿನಕ್ಕೆ ಸದಸ್ಯರಿಂದ ಸಂಗ್ರಹಿಸುತ್ತಿದೆ. ೫ ವರ್ಷಗಳ ಹಿಂದೆ, ಸರಾಸರಿ ೬೦ ಸದಸ್ಯರನ್ನು ಹೊಂದಿದ್ದ ಈ ಸಹಕಾರಿ ಸಂಘವು ಪ್ರಸ್ತುತ ೧೧೬ ಸದಸ್ಯರನ್ನು ಒಳಗೊಂಡಿದೆ. ತಮ್ಮದೇ ಆದ ಸ್ವಂತ ಕಟ್ಟಡದಲ್ಲಿ ವ್ಯವಹಾರ ನಡೆಸುತ್ತಿದ್ದ ಈ ಸಹಕಾರಿ ಸಂಘವು ೧೩ ಸೆಂಟ್ಸ್ ಆಸ್ತಿಯನ್ನೂ ಹೊಂದಿದೆ. "ಜೊಹರಾಬಿ" ಎನ್ನುವ ಸದಸ್ಯರೊಬ್ಬರೇ ದಿನಕ್ಕೆ ೯೪ ಲೀಟರ್‌ರಷ್ಟು ಹಾಲನ್ನು ಸಹಕಾರಿ ಸಂಘಕ್ಕೆ ಸರಬರಾಜು ಮಾಡುತ್ತಿದ್ದಾರೆ.

೩.೧.೯ ಬಂದಾರು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

೧೯೯೯ರಲ್ಲಿ ಸ್ಥಾಪಿಸಲ್ಪಟ್ಟ ಈ ಸಹಕಾರಿ ಸಂಘವು ಬೆಳ್ತಂಗಡಿ ತಾಲೂಕಿನ ವ್ಯಾಪ್ತಿಗೆ ಒಳಪಟ್ಟ ಅಭಿವೃದ್ಧಿ ಹೊಂದಿದ ಸಹಕಾರಿ ಸಂಘಗಳಲ್ಲಿ ಒಂದಾಗಿದೆ. ಸ್ಟೆಪ್ ಯೋಜನೆಯಡಿಯಲ್ಲಿ ಬರುವ ಈ ಸಹಕಾರಿ ಸಂಘವು ದಿನಕ್ಕೆ ೨೪೦೦ಲೀ.ರಷ್ಟು ಹಾಲನ್ನು ಸದಸ್ಯೆಯರಿಂದ ಸಂಗ್ರಹಿಸುತ್ತಿದೆ. ೫ ವರ್ಷಗಳ ಹಿಂದೆ ಸರಾಸರಿ ೧೪೦ ಸದಸ್ಯೆಯರನ್ನು ಹೊಂದಿದ್ದ ಈ ಸಹಕಾರಿ ಸಂಘವು ಪ್ರಸ್ತುತ ೩೭೧ ಸದಸ್ಯೆಯರಿಂದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. "ಸೀತಮ್ಮ" ಎನ್ನುವ ಸದಸ್ಯೆಯೊಬ್ಬರೇ ದಿನಕ್ಕೆ ೯೦ಲೀ.ರಷ್ಟು ಹಾಲನ್ನು ಸಂಘಕ್ಕೆ ಸರಬರಾಜು ಮಾಡುತ್ತಿದ್ದಾರೆ.

೩.೧.೧೦ ಹಳ್ಳಿಂಗೇರಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ :

ಈ ಸಹಕಾರಿ ಸಂಘವು ೨೦೧೫ರಲ್ಲಿ ಸ್ಥಾಪಿತವಾಗಿದ್ದು, ಬೆಳ್ತಂಗಡಿ ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. ಈ ಸಹಕಾರಿ ಸಂಘವು ಅಷ್ಟೊಂದು ಅಭಿವೃದ್ಧಿ ಹೊಂದದ ಸಂಘವಾಗಿದ್ದು, ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದಸ್ಯೆಯರ ಸಂಖ್ಯೆಯೂ ಕಡಿಮೆಯಾಗಿದ್ದು, ಕೇವಲ ೪೨ ಸದಸ್ಯೆಯರನ್ನು ಒಳಗೊಂಡಿದೆ. ಈ ಸಹಕಾರಿ ಸಂಘವು "ಸ್ಟೆಪ್" ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿಲ್ಲ.

೩.೨ ಮಾದರಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಹಮ್ಮಿಕೊಂಡ ಉಪಕ್ರಮಗಳು

೩.೨.೧ ಸದಸ್ಯೆಯರಿಗೆ ಒಕ್ಕೂಟ ಆಧಾರಿತ ಕಾರ್ಯಕ್ರಮಗಳು :-

ಸರಕಾರದಿಂದ ಸದಸ್ಯೆಯರಿಗೆ ಒಂದು ಲೀಟರ್ ಹಾಲಿಗೆ ರೂ. ೫ ರಂತೆ ಬೆಂಬಲ ಬೆಲೆಯನ್ನು ಕೊಡಲಾಗುತ್ತದೆ. ಈ ಬೆಂಬಲ ಬೆಲೆಯ ಮೊತ್ತ ನೇರವಾಗಿ ಸದಸ್ಯೆಯರ ಖಾತೆಗೆ ಜಮೆಯಾಗುತ್ತದೆ. ಹಾಲು ಮಾರಿದ ಹಣ ಕೂಡಾ ಹತ್ತು ದಿನಕ್ಕೊಮ್ಮೆ ನೇರವಾಗಿ ಸದಸ್ಯೆಯರ ಖಾತೆಗೆ ಜಮೆಯಾಗುತ್ತದೆ.

ಹಾಲಿನ ಗುಣಮಟ್ಟದ ಮೇಲೆ (ಫ್ಯಾಟ್ ಆಧಾರಿತ ದರ) ಹಾಲಿನ ದರವನ್ನು ನಿಗದಿಪಡಿಸಲಾಗುತ್ತದೆ. ಸದಸ್ಯರಿಗೆ ಹಾಲಿನ ದರ ಒಂದು ಲೀಟರ್‌ಗೆ ಕನಿಷ್ಠ ರೂ. ೨೮.೬೭ ಪೈಸೆಯಿಂದ ಗರಿಷ್ಠ ರೂ. ೩೪ರ ವರೆಗೆ ಸಿಗುತ್ತದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವರ್ಷದ ಲಾಭಾಂಶದಲ್ಲಿ ಶೇ.೬೫ರಷ್ಟನ್ನು ಸದಸ್ಯೆಯರಿಗೆ ಇನಾಮು (ಬೋನಸ್) ಆಗಿ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಮೇ-ಜೂನ್ ತಿಂಗಳಲ್ಲಿ ವಿತರಿಸಲಾಗುತ್ತದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವರ್ಷದ ಲಾಭಾಂಶದಲ್ಲಿ ಶೇ. ೨೫ ಲಾಭಾಂಶವನ್ನು (ಡಿವಿಡೆಂಡ್) ಸದಸ್ಯೆಯರಿಗೆ ವಿತರಿಸಲಾಗುತ್ತದೆ.

'ಯಶಸ್ವಿನಿ' ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ಸದಸ್ಯೆಯರಿಗೆ ಕನಿಷ್ಠ ಪ್ರೀಮಿಯಮ್‌ನಲ್ಲಿ ಆರೋಗ್ಯ ವಿಮೆಯ ಸೌಲಭ್ಯವನ್ನು ಒದಗಿಸಲಾಗುತ್ತದೆ.

ಎಲ್.ಐ.ಸಿ.ಯ 'ಜನಶ್ರೀ' ಗುಂಪು ವಿಮಾ ಯೋಜನೆಯಡಿಯಲ್ಲಿ ೫೮ ವರ್ಷದೊಳಗಿನ ಸದಸ್ಯೆಯರಿಗೆ ಉಚಿತ ನೊಂದಾವಣಿಯ ಮೂಲಕ ವಿಮಾ ರಕ್ಷಣೆಯನ್ನು ಕೊಡಲಾಗುತ್ತದೆ.

ಬಡ ಸದಸ್ಯೆಯರ ಮಕ್ಕಳಿಗೆ (೯ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ.) ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು ರೂ. ೧೦೦೦ರಂತೆ ಪ್ರೋತ್ಸಾಹಧನ ನೀಡಲಾಗುತ್ತದೆ.

'ಅಮೃತ ಯೋಜನೆ'ಯಡಿಯಲ್ಲಿ ವಿಧವೆಯರಿಗೆ ಮತ್ತು ಸಂಕಷ್ಟಕ್ಕೊಳಗಾದ ಸದಸ್ಯೆಯರಿಗೆ ಶೇ.೫೦ರ ಅನುದಾನದಲ್ಲಿ ಘಟಕ ವೆಚ್ಚ ರೂ. ೩೫,೦೦೦ರಂತೆ, ಜಾನುವಾರು ಖರೀದಿಗೆ ಸಹಕಾರ ನೀಡುತ್ತದೆ.

ಒಕ್ಕೂಟದ 'ರೈತ ಕಲ್ಯಾಣ' ನಿಧಿಯಿಂದ ಆಕಸ್ಮಿಕ ಸಂದರ್ಭಗಳಲ್ಲಿ ಹಾಲು ಉತ್ಪಾದಕರಿಗೆ ಹಣದ ಸಹಾಯ ನೀಡುತ್ತದೆ ಮತ್ತು ಸದಸ್ಯೆಯರ ಮಕ್ಕಳಿಗೆ ಕೃಷಿ ಮತ್ತು ಹೈನುಗಾರಿಕೆ ವಿಷಯದಲ್ಲಿ ಉನ್ನತ ಶಿಕ್ಷಣಕ್ಕೆ ಸಹಾಯ ಹಾಗೂ ದನಗಳಿಗೆ ವಿಮೆಯ ಸೌಲಭ್ಯ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಅತೀ ಹೆಚ್ಚು ಹಾಲು ಹಾಕುವವರನ್ನು ಹಾಗೂ ಸಂಘದಲ್ಲಿ ಬಹಳ ವರ್ಷಗಳಿಂದ ಸದಸ್ಯರಾಗಿದ್ದವರನ್ನು ಗುರುತಿಸಿ ಪ್ರೋತ್ಸಾಹಿಸಲು ಸಂಘದ ವಾರ್ಷಿಕ ಸಭೆಯಲ್ಲಿ ಅವರಿಗೆ ಪ್ರೋತ್ಸಾಹಕರ ಬಹುಮಾನಗಳನ್ನು ಒಕ್ಕೂಟದಿಂದ ಕೊಡಲಾಗುತ್ತದೆ ಮತ್ತು ಅಂತಹವರಿಗೆ 'ಅಧ್ಯಯನ ಪ್ರವಾಸ' ವನ್ನು ಏರ್ಪಡಿಸಲಾಗುತ್ತದೆ.

'ಪಶುಭಾಗ್ಯ' ಯೋಜನೆಯಡಿಯಲ್ಲಿ ಪಶು ಆರೋಗ್ಯ ಇಲಾಖೆಯ ವತಿಯಿಂದ ಹಸುಗಳನ್ನು ಖರೀದಿಸಲು ರೂ.೧೦೦೦೦ ಸಾಲದ ಸೌಲಭ್ಯವಿದೆ. ಸ್ಟೆಪ್ ಯೋಜನೆಯಡಿಯಲ್ಲಿ ಪಶುಗಳನ್ನು ಖರೀದಿಸಲು ಬಡ್ಡಿರಹಿತ ಸಾಲ ರೂ. ೨೦೦೦೦ ಅಂಚಿನ ಹಣದೊಂದಿಗೆ ಲಭ್ಯವಿದೆ.

ಒಕ್ಕೂಟದ ವತಿಯಿಂದ ಸದಸ್ಯೆಯರಿಗೆ ವರ್ಷಕ್ಕೊಮ್ಮೆ 'ಅಮೂಲ್ ಡೈರಿ' ಅಥವಾ ಇತರ ಧಾರ್ಮಿಕ ಸ್ಥಳಗಳಿಗೆ ಪ್ರವಾಸ ಕಾರ್ಯಕ್ರಮವಿದೆ.

ಒಕ್ಕೂಟದ ಸದಸ್ಯೆಯರಿಗೆ 'ಮರಣ ಸಾಂತ್ವಾನ ನಿಧಿ'ಯ ಸೌಲಭ್ಯವಿದೆ.

ಒಕ್ಕೂಟದ ಮುಖೇನ ವಿವಿಧ ಹಬ್ಬಗಳ ಆಚರಣೆ (ಉದಾಹರಣೆ – ಕ್ರಿಸ್‌ಮಸ್ ಸೌಹಾರ್ದ ಸಂಗಮ)ಯನ್ನು ಮಾಡಲಾಗುತ್ತದೆ.

ಕೆಪಿಟಿ (KPT) ಯ ಮೂಲಕ ಸದಸ್ಯರ ಮಕ್ಕಳಿಗೆ ಹೊಲಿಗೆ ತರಬೇತಿ ನೀಡಲಾಗುತ್ತದೆ.

ಸದಸ್ಯರಿಗೆ ಮಂಗಳೂರಿನ ಕೆಎಂಎಫ್ (KMF) ನಲ್ಲಿ ವರ್ಷಕ್ಕೊಮ್ಮೆ ಮಹಿಳಾ ಸಬಲೀಕರಣದ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸಿ ಅನೇಕ ಮಾಹಿತಿಗಳನ್ನು ಒದಗಿಸಲಾಗುತ್ತದೆ.

ಸ್ಟೆಪ್ ಯೋಜನೆ ಮತ್ತು ಕ್ಷೀರ ಸಂಜೀವಿನಿ ಯೋಜನೆಯಡಿ ಮಹಿಳೆಯರಿಗೆ ಕಾನೂನು ಮಾಹಿತಿ ಶಿಬಿರ, ಆರೋಗ್ಯ ಮಾಹಿತಿ ಶಿಬಿರ, ಮಹಿಳಾ ಜಾಗೃತಿ ಮಾಹಿತಿ ಶಿಬಿರ, ಮಹಿಳೆಯರಿಗೆ ಆದಾರ ತರುವ ಚಟುವಟಿಕೆಗಳ ಮೇಲೆ ಶಿಬಿರ, ಮಹಿಳಾ ಸಬಲೀಕರಣದ ಬಗ್ಗೆ

ಪುರುಷ ಪ್ರೇರಣಾ ಶಿಬಿರ, ಲಿಂಗ ತಾರತಮ್ಯದ ಬಗ್ಗೆ ಶಿಬಿರ ಮುಂತಾದವುಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕಾನೂನು ಶಿಬಿರದಲ್ಲಿ 'ಮಹಿಳೆ ಮತ್ತು ಕಾನೂನು', 'ಮಹಿಳೆ ಮತ್ತು ಪೋಲೀಸ್ ವ್ಯವಸ್ಥೆ'ಯ ಬಗ್ಗೆ ಮತ್ತು ಮಹಿಳಾ ಹಕ್ಕುಗಳ ರಕ್ಷಣೆಯ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತದೆ. ಆರೋಗ್ಯ ಶಿಬಿರದಲ್ಲಿ ರಕ್ತ ವರ್ಗೀಕರಣದ ಮಹತ್ವ, ಶಿಶು ಆಹಾರದ ಬಗ್ಗೆ ಮಾಹಿತಿ, ಪೌಷ್ಠಿಕಾಹಾರದ ಮಹತ್ವ, ಪ್ರಥಮ ಚಿಕಿತ್ಸೆ, ಸಾಮಾನ್ಯ ಕಾಯಿಲೆಗಳನ್ನು ತಡೆಗಟ್ಟುವ ವಿಧಾನ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಒದಗಿಸಲಾಗುತ್ತದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸದಸ್ಯರಿಗೆ ಸಹಕಾರ ಸಂಘಗಳಲ್ಲಿ ಉಪನಿಯಮಗಳ ಪಾಲನೆಯ ಮೇಲೆ ಶಿಬಿರ ಹಾಗೂ ಮುಂದಾಳುತ್ವ, ಪ್ರಥಮ ಚಿಕಿತ್ಸೆ, ಕಂಪ್ಯೂಟರ್ ಮತ್ತು ಹಾಲಿನ ಗುಣಮಟ್ಟ ಪರೀಕ್ಷೆ ಮುಂತಾದವುಗಳ ಮೇಲೆ ತರಬೇತಿ ಕಾರ್ಯಕ್ರಮ ನೀಡಲಾಗುತ್ತದೆ.

೩.೨.೨ ಸದಸ್ಯೆಯರಿಗೆ ಸ್ವಸಹಾಯ ಸಂಘ ಆಧಾರಿತ ಕಾರ್ಯಕ್ರಮಗಳು :

ಸ್ವಸಹಾಯ ಸಂಘಗಳು ಪಶುಗಳನ್ನು ಖರೀದಿಸಲು, ಕೃಷಿ ಕೆಲಸಗಳಿಗಾಗಿ, ಮಕ್ಕಳ ವಿದ್ಯಾಭ್ಯಾಸ, ಮದುವೆ ಮತ್ತು ಇತರ ಉದ್ದೇಶಗಿಗಾಗಿ ಸಾಲದ ಸೌಲಭ್ಯಗಳನ್ನು ಸದಸ್ಯರಿಗೆ ಒದಗಿಸುತ್ತವೆ.

ಸ್ವಸಹಾಯ ಸಂಘಗಳು ಉಳಿತಾಯ ಖಾತೆಯ ಮೂಲಕ ಸದಸ್ಯೆಯರ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸುತ್ತವೆ.

ಸ್ವಸಹಾಯ ಸಂಘಗಳು ಸದಸ್ಯೆಯರ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ.

೩.೨.೩ ಸದಸ್ಯೆಯರಿಗೆ ಜಾನುವಾರುಗಳ ನಿರ್ವಹಣೆಯಲ್ಲಿ ರೂಪಿಸಿದ ಕಾರ್ಯಕ್ರಮಗಳು :

ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ ಹಾಗೂ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಆಶ್ರಯದಲ್ಲಿ ಜಾನುವಾರುಗಳಿಗೆ ವಿಮಾ ಯೋಜನೆ.

'ರಾಸು ಅಭಿವೃದ್ಧಿ ನಿಧಿ'ಯಿಂದ ಸಂಘದ ವತಿಯಿಂದ ಉಚಿತವಾಗಿ ದನಗಳಿಗೆ ಹುಳದ ಮದ್ದಿನ ಸೌಲಭ್ಯ. ಒಕ್ಕೂಟದ ವತಿಯಿಂದ ದನಗಳ ಆಹಾರಕ್ಕೆ ಹುಲ್ಲು, ನೆಡಲು ಮೇವಿನ ಬೀಜ ಶೇ.೫೦ರ ಅನುದಾನದಲ್ಲಿ ಕೊಡಲಾಗುತ್ತದೆ.

ಲವಣ ಮಿಶ್ರಣ ಅಥವಾ ನೆಕ್ಕು ಬಿಲ್ಲೆ ಶೇ.೫೦ರ ಅನುದಾನದಲ್ಲಿ ಸದಸ್ಯರಿಗೆ ಲಭ್ಯ.

ನಬಾರ್ಡ್ ಅನುದಾನದೊಂದಿಗೆ ಹಾಲು ಉತ್ಪಾದಕರಿಗೆ ಹೈನುಗಾರಿಕೆಯ ಬಗ್ಗೆ ಅರಿವು ಮೂಡಿಸಲು ಶುದ್ಧ ಹಾಲು ಉತ್ಪಾದನಾ ಕಾರ್ಯಾಗಾರ, ಬಂಜೆತನ ನಿವಾರಣಾ ಶಿಬಿರ, ಪಶುಗಳ ಆಹಾರ ಮಾಹಿತಿ ಶಿಬಿರ ಇತ್ಯಾದಿ.

ನಬಾರ್ಡ್ ಅನುದಾನದೊಂದಿಗೆ ಹಾಲು ಉತ್ಪಾದಕರಿಗೆ ಹೈನುಗಾರಿಕೆಯ ಬಗ್ಗೆ ಅರಿವು ಮೂಡಿಸಲು ಶುದ್ಧ ಹಾಲು ಉತ್ಪಾದನಾ ಕಾರ್ಯಾಗಾರ, ಬಂಜೆತನ ನಿವಾರಣಾ ಶಿಬಿರ, ಪಶುಗಳ ಆಹಾರ ಮಾಹಿತಿ ಶಿಬಿರ ಇತ್ಯಾದಿ

'ಮಿನಿ ಡೈರಿ' ಯೋಜನೆಯಡಿಯಲ್ಲಿ 5 ದನ ತೆಗೆದುಕೊಂಡರೆ, ಪಶು ಆಹಾರ ಖರೀದಿಗೆ ರೂ.೧೫,೦೦೦/- ಅನುದಾನ.

ಸದಸ್ಯರಿಗೆ ಹುಲ್ಲು ಕತ್ತರಿಸುವ ಯಂತ್ರ, ಹಾಳೆ ಕತ್ತರಿಸುವ ಯಂತ್ರ, ಪಶುಗಳ ಹಾಲು ಕರೆಯುವ ಯಂತ್ರ, ಗೋಬರ್ ಗ್ಯಾಸ್‌ನ ನೀರನ್ನು ತೋಟಗಳಿಗೆ ಬಿಡುವ ಸ್ಲರೀ ಪಂಪು, ದನಗಳಿಗೆ ಹಾಸುವ ಹಾಸು ಮುಂತಾದವುಗಳನ್ನು ರಿಯಾಯಿತಿ ದರಗಳಲ್ಲಿ ಸದಸ್ಯರಿಗೆ ದೊರಕಿಸಿಕೊಡಲಾಗುತ್ತದೆ.

ಮಹಿಳಾ ಸದಸ್ಯೆಯರಿಗೆ ಸ್ಟೆಪ್‌ನ ಅಡಿಯಲ್ಲಿ ಸಂಯೋಜಿಸುವ ಕಾರ್ಯಕ್ರಮಗಳು

ಆರೋಗ್ಯ ಮತ್ತು ಪೋಷಣೆಯ ಕಾರ್ಯಕ್ರಮ : ಈ ಕಾರ್ಯಕ್ರಮದ ಅಡಿಯಲ್ಲಿ ಮಹಿಳೆಯರಿಗೆ ಆರೋಗ್ಯ ಮತ್ತು ನೈರ್ಮಲ್ಯ, ಸಮತೋಲಿತ ಆಹಾರ, ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆ, ಸುರಕ್ಷಿತ ಕುಡಿಯುವ ನೀರು, ಲಸಿಕೆ ಹಾಕುವುದು, ಕಾಯಿಲೆಗಳನ್ನು ತಡೆಗಟ್ಟುವ ಕ್ರಮಗಳು, ಸ್ಥಳೀಯವಾಗಿ ಲಭ್ಯವಿರುವ ತರಕಾರಿಗಳ ಬಳಕೆ, ಅಪೌಷ್ಟಿಕತೆಯ ತಡೆಗಟ್ಟುವಿಕೆ, ಸ್ಥಳೀಯವಾಗಿ ಲಭ್ಯವಿರುವ ಸಾಮಾಗ್ರಿಗಳಿಂದ ಶಿಶುವಿಗೆ ಪೌಷ್ಟಿಕ ಆಹಾರ ತಯಾರಿಕೆಯ ಪ್ರದರ್ಶನ ಮುಂತಾದವುಗಳ ಬಗ್ಗೆ ಮಾಹಿತಿ ಶಿಬಿರಗಳನ್ನು ಆಯೋಜಿಸಿ ಮಹಿಳೆಯರ ಆರೋಗ್ಯ ಜ್ಞಾನವನ್ನು ಹೆಚ್ಚಿಸಲಾಗುತ್ತದೆ.

ಕಾನೂನು ಸಾಕ್ಷರತಾ ಕಾರ್ಯಕ್ರಮ

ಗ್ರಾಮೀಣ ಮಟ್ಟದಲ್ಲಿ ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ವಿಶೇಷವಾಗಿ ಮಹಿಳಾ ವಕೀಲರ ಸಹಾಯದಿಂದ ಮಹಿಳೆಯರಿಗೆ ಆಸ್ತಿಯಲ್ಲಿ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು, ವರದಕ್ಷಿಣೆ ತಡೆಗಟ್ಟುವುದು ಮುಂತಾದವುಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಲಿಂಗ ಸಂವೇದನಾ ಕಾರ್ಯಕ್ರಮ

ಮಹಿಳಾ ಸದಸ್ಯರನ್ನು ಲಿಂಗ ಭಿನ್ನತೆಗಳಲ್ಲಿ ಸೂಕ್ಷ್ಮಗೊಳಿಸಲು, ಹೆಣ್ಣು ಮಕ್ಕಳ ಶಿಕ್ಷಣವನ್ನು ಮತ್ತು ವಿಧವೆಯರ ಮರುಮದುವೆಯನ್ನು ಉತ್ತೇಜಿಸಲು ಈ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಅಮೂಲ್ ಭೇಟಿ

ಹಾಲಿನ ಮಹಿಳಾ ಸಹಕಾರಿ ಸಂಘಗಳ ಅಧ್ಯಕ್ಷರಿಗೆ, ನಿರ್ದೇಶಕರಿಗೆ ಮತ್ತು ಸದಸ್ಯರಿಗೆ ಗುಜರಾತ್‌ನ ಆನಂದ್‌ನಲ್ಲಿರುವ ಅಮೂಲ್ ಡೈರಿಯ ಭೇಟಿಯ ವ್ಯವಸ್ಥೆಯನ್ನು ಆಯೋಜಿಸುತ್ತದೆ. "ಅಮೂಲ್ ಮಾದರಿ"ಯಲ್ಲಿರುವ ಉತ್ತಮ ವೈಶಿಷ್ಟ್ಯಗಳನ್ನು ಸದಸ್ಯರು ತಮ್ಮ ಹಾಲಿನ ಸೊಸೈಟಿಯಲ್ಲಿ ಅಳವಡಿಸಲಿ" ಎನ್ನುವುದು ಈ ಭೇಟಿಯ ಮುಖ್ಯ ಉದ್ದೇಶ.

ಅಂಚಿನ ಹಣ :

ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಉನ್ನತೀಕರಿಸಲು ಆಯ್ಕೆ ಮಾಡಿದ ಗುಂಪಿನ ಸದಸ್ಯರಿಗೆ ರೂ.೫,೦೦೦/- ಅಂಚಿನ ಹಣವನ್ನು ಪಶುಗಳ ಖರೀದಿಗಾಗಿ ಒದಗಿಸಲಾಗುತ್ತದೆ. ಹಣಕಾಸು ಸಂಸ್ಥೆಗಳು ಪ್ರತಿಫಲಾನುಭವಿಯಿಂದ ಕನಿಷ್ಠ ೨೦% ಅಂಚು ಹಣವನ್ನು ಬೇಡಿಕೆ ಮಾಡುತ್ತವೆ. ಆದರೆ ಫಲಾನುಭವಿ ಆರ್ಥಿಕವಾಗಿ ದುರ್ಬಲವಾಗಿದ್ದು, ಅಂಚು ಹಣವನ್ನು ಪಾವತಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ೫,೦೦೦ ರೂ. ಗಳನ್ನು ೧೫ ಸದಸ್ಯರಿಗೆ ಬಡ್ಡಿರಹಿತ ಸಾಲವಾಗಿ ನೀಡಲಾಗುತ್ತದೆ. ಇದು ಡೈರಿ ಸಹಕಾರ ಸಂಘಗಳಲ್ಲಿ "ಸುತ್ತುತ್ತಿರುವ ನಿಧಿ"ಯಾಗಿ ಉಳಿಯುತ್ತದೆ. ಪ್ರತಿ ಮಹಿಳಾ ಡೈರಿ ಸಹಕಾರ ಸಂಘಗಳಿಗೆ ರೂ. ೬೦೦೦೦ ರಿಂದ ರೂ. ೭೫೦೦೦ ವರೆಗೆ ಅಂಚಿನ ಹಣ ದೊರೆಯುತ್ತದೆ.

ಸ್ವ-ಸಹಾಯ ಗುಂಪುಗಳು :-

ಮಹಿಳಾ ಡೈರಿ ಸಹಕಾರ ಸಂಘಗಳ ಇನ್ನೊಂದು ಮುಖ್ಯ ಲಕ್ಷಣವೆಂದರೆ ಸ್ವ-ಸಹಾಯ ಗುಂಪುಗಳ ರಚನೆ. ಸ್ಟೆಪ್ (STEP) ಕಾರ್ಯಕ್ರಮ ಅನುಷ್ಠಾನವು ಕನಿಷ್ಠ ಒಂದು ಸ್ವಸಹಾಯ ಗುಂಪಿನ ರಚನೆಯನ್ನು ಪ್ರಸ್ತಾಪಿಸುತ್ತದೆ. ಈ ರೀತಿಯಲ್ಲಿ ೧೩೭೫ ಸ್ವ-ಸಹಾಯ ಗುಂಪುಗಳು ರೂ.೪೭೫.೩೩ ಲಕ್ಷಗಳ ಉಳಿತಾಯದೊಂದಿಗೆ ರೂಪುಗೊಂಡಿದೆ. ಸಬಲೀಕರಣ ಕೇಂದ್ರಗಳಾದ ನಂದಿನಿ ಸ್ವ ಸಹಾಯ ಗುಂಪುಗಳು ಗ್ರಾಮೀಣ ಮಹಿಳೆಯರ ಆರ್ಥಿಕ - ಸಾಮಾಜಿಕ ಅಭಿವೃದ್ಧಿಗಾಗಿ ಕೆಲಸ ಮಾಡುತ್ತವೆ.

ಕ್ಷೀರ ಸಂಜೀವಿನಿ :

ಈ ಯೋಜನೆಯು ೨೦೧೧ ರಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಮೋಷನ್ ಸೊಸೈಟಿ (KSRLPS) ಮೂಲಕ ರಾಷ್ಟ್ರೀಯ ಗ್ರಾಮೀಣ ಮಿಶನ್, ಭಾರತ ಸರ್ಕಾರ ಗ್ರಾಮೀಣಾಭಿವೃದ್ಧಿ ಸಚಿವಾಲಯ ೨೦೧೧ ರಲ್ಲಿ ಪ್ರಾರಂಭಿಸಿದ ಸಂಜೀವನಿ ಯೋಜನೆಯ ಒಂದು ಭಾಗವಾಗಿದೆ. ೨೦೧೪ರಲ್ಲಿ ಒಕ್ಕೂಟವು ಇದನ್ನು ಜಾರಿಗೆ ತಂದಿತು. ಹಾಲಿನ ಸಹಕಾರಿ ಸಂಘಗಳಲ್ಲಿ ಉದ್ಯಮಶೀಲತೆಯ ಅಭಿವೃದ್ಧಿ ಚಟುವಟಿಕೆಗಳನ್ನು ಉತ್ತೇಜಿಸುವ ಮತ್ತು ಸ್ವಯಂ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ ಮಹಿಳಾ ಸಬಲೀಕರಣವನ್ನು ಮಾಡುವುದು ಮತ್ತು ಬಡತನ ನಿರ್ಮೂಲನೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಇದು ಮಹಿಳೆಯರಿಗೆ ಅವರ ನಿವ್ವಳ ವರಮಾನವನ್ನು ಹೆಚ್ಚಿಸುವ ಮೂಲಕ ನೇರ ಉದ್ಯೋಗವನ್ನು ನೀಡಿ ಅವರಿಗೆ ಖಾತರಿ ಜೀವನೋಪಾಯವನ್ನು ಒದಗಿಸುವ ಮೂಲಕ ನೆರವಾಗುತ್ತದೆ. ಪ್ರತೀ ಹಾಲಿನ ಮಹಿಳಾ ಸಹಕಾರಿ ಸಂಘಗಳು ನಿರ್ವಹಣೆ, ತರಬೇತಿ, ಜಾಗೃತಿ ಕಾರ್ಯಕ್ರಮಗಳಿಗೆ ಮತ್ತು ಜಾನುವಾರುಗಳ ಖರೀದಿ ಮತ್ತು ವಿಮೆಗಾಗಿ ರೂ. ೦.೪೫೫ ಮಿಲಿಯನ್ ಅನುದಾನವನ್ನು ಪಡೆಯುತ್ತವೆ.

ಈ ಯೋಜನೆಯ ಮುಖ್ಯ ಚಟುವಟಿಕೆಗಳೇನೆಂದರೆ ಸ್ವ–ಸಹಾಯ ಗುಂಪುಗಳ ಮೂಲಕ ಮಹಿಳೆಯರನ್ನು ಮಹಿಳಾ ಡೈರಿ ಸಹಕಾರ ಸಂಘಗಳಲ್ಲಿ ಸಕ್ರಿಯಗೊಳಿಸುವುದು, ಅಂಚಿನ ಹಣದ ಸೌಲಭ್ಯ ನೀಡುವುದು, ಕಂಪ್ಯೂಟರ್ ಮತ್ತು ನಿರ್ವಹಣಾ ತರಬೇತಿ, ಡೈರಿ ಕೃಷಿ ನಿರ್ವಹಣೆ, ಅಮೂಲ್ ಡೈರಿಗೆ ಭೇಟಿ ಕೊಡುವುದು, ಸಾಮಾನ್ಯ ಜಾಗೃತಿ ಕಾರ್ಯಕ್ರಮಗಳು, ಮಹಿಳಾ ಡೈರಿ ಸಹಕಾರ ಸಂಘಗಳಲ್ಲಿ ಸಾವಯವ ಗೊಬ್ಬರ ಘಟಕ, ಮೇವು ಉತ್ಪಾದನಾ ಯಂತ್ರ, ಸೌರ, ಹಸಿರು ಶಕ್ತಿ ಮತ್ತು ಮೇವು ಸಂಸ್ಕರಣಾ ಘಟಕಗಳ ಸ್ಥಾಪನೆ (ಕೆ.ಎಮ್.ಎಫ್. ವರದಿ, ೨೦೧೫).

ಅಧ್ಯಾಯ-೦೪

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ, ಅವರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಬಲೀಕರಣ ಮತ್ತು ಮಹಿಳಾ ಸದಸ್ಯೆಯರು ಎದುರಿಸುತ್ತಿರುವ ಸಮಸ್ಯೆಗಳು

ಅಧ್ಯಾಯ-೪

ಮಹಿಳಾ ಸಬಲೀಕರಣದ ಕಾರ್ಯಕ್ರಮಗಳಲ್ಲಿ ಮಹಿಳಾ ಸದಸ್ಯೆಯರ ಭಾಗವಹಿಸುವಿಕೆ

ಈ ಅಧ್ಯಾಯವು ಮಹಿಳಾ ಸದಸ್ಯೆಯರ ವೈಯುಕ್ತಿಕ ಹಾಗೂ ವೃತ್ತಿಪರ ಚಿತ್ರಣದ ಜೊತೆಗೆ ಮಹಿಳಾ ಸಬಲೀಕರಣದ ಚಟುವಟಿಕೆಗಳಲ್ಲಿ ಮಹಿಳಾ ಸದಸ್ಯೆಯರ ಪಾಲ್ಗೊಳ್ಳುವಿಕೆಯ ಮಟ್ಟ ಹಾಗೂ ಭಾಗವಹಿಸುವಿಕೆಯಿಂದ ಅವರ ಅಭಿವೃದ್ಧಿಯ ಮೇಲೆ ಆದ ಪರಿಣಾಮಗಳು ಹಾಗೂ ಮಹಿಳೆಯರು ತಮ್ಮ ಸಬಲೀಕರಣ ಪ್ರಕ್ರಿಯೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಚಿತ್ರಿಸುತ್ತದೆ.

ಪ್ರಾಥಮಿಕ ಸಮೀಕ್ಷೆಯ ವರದಿಗಳು


4.1 ಪ್ರತಿ ಸ್ಪಂದಕರ ವೈಯುಕ್ತಿಕ ಹಾಗೂ ವೃತ್ತಿಪರ ಚಿತ್ರಣ

ಕೋಷ್ಟಕ 4.1.1: ಪ್ರತಿಸ್ಪಂದಕರ ವಯಸ್ಸು ಆಧಾರಿತ ವರ್ಗೀಕರಣ

ವಯಸ್ಸು	ಒಟ್ಟು ಸದಸ್ಯೆಯರು	ಶೇಕಡಾವಾರು
20–30	22	22%
30–50	46	46%
50 ಮೇಲ್ಪಟ್ಟು	32	32%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ 4.1.1



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.1.1 ಹೇಳುವಂತೆ ಹೆಚ್ಚಿನ ಸದಸ್ಯರು (46%) 30ರಿಂದ 50ವರ್ಷ ವಯೋಮಿತಿಯವರು. 22% ಸದಸ್ಯರು 20ರಿಂದ 30ವರ್ಷ ವಯೋಮಿತಿ ಉಳ್ಳವರು ಹಾಗೂ 32% ಸದಸ್ಯರು 50 ವರ್ಷಕ್ಕಿಂತ ಮೇಲ್ಪಟ್ಟವರು. ಎಲ್ಲಾ ವಯಸ್ಸಿನ ಗುಂಪಿನ ಸದಸ್ಯರು ಹಾಲು ಉತ್ಪಾದಕರ ಸಹಕಾರ ಸಂಘಗಳ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ ಎಂದು ಈ ಕೋಷ್ಟಕದಿಂದ ತಿಳಿದು ಬರುತ್ತದೆ.

ಕೋಷ್ಟಕ 4.1.2: ಪ್ರತಿಸ್ಪಂದಕರ ಶಿಕ್ಷಣ ಆಧಾರಿತ ವರ್ಗೀಕರಣ

ಶಿಕ್ಷಣ	ಒಟ್ಟು ಸದಸ್ಯೆಯರು	ಶೇಕಡಾವಾರು
ಅನಕ್ಷರಸ್ಥ	35	35%
ಪ್ರಾಥಮಿಕ	28	28%
ಪ್ರೌಢ	20	20%
ಪಿಯುಸಿ	14	14%
ಪದವಿ	03	3%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.2



ಮೂಲ: ಕ್ಷೇತ್ರ ಸಮೀಕ್ಷೆ


ಮೇಲಿನ ಕೋಷ್ಟಕ 4.1.2ರಲ್ಲಿ ತಿಳಿಸುವಂತೆ, ಮಾದರಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳಲ್ಲಿ 35% ರಷ್ಟು ಸದಸ್ಯರು ಅನಕ್ಷರಸ್ಥರಾಗಿದ್ದಾರೆ. 28% ರಷ್ಟು ಸದಸ್ಯರು ಪ್ರಾಥಮಿಕ ಶಿಕ್ಷಣವನ್ನು 20% ರಷ್ಟು ಸದಸ್ಯರು ಪ್ರೌಢಶಿಕ್ಷಣವನ್ನು, 14% ರಷ್ಟು ಸದಸ್ಯರು ಪಿಯುಸಿ ಶಿಕ್ಷಣವನ್ನು ಹಾಗೂ ಅತೀ ಕಡಿಮೆ ಶೇಕಡ 3ರಷ್ಟು ಸದಸ್ಯರು ಪದವಿಯನ್ನು ಪಡೆದಿರುತ್ತಾರೆ. ಇದು ಹಾಲು ಉತ್ಪಾದಕರ ಸಹಕಾರಿ ಸಂಘಗಳು ಕಡಿಮೆ ಶಿಕ್ಷಣ ಹೊಂದಿರುವ ಮಹಿಳೆಯರಿಂದ ರಚಿಸಲಾಯಿತು ಎಂಬುದನ್ನು ತಿಳಿಸುತ್ತದೆ. ಇದಕ್ಕೆ ಕಾರಣ ಸಹಕಾರ ಸಂಘಗಳಲ್ಲಿರುವ ಹೆಚ್ಚಿನ ಸದಸ್ಯರು ಹಿರಿಯ ನಾಗರಿಕರು ಹಾಗೂ ಮಧ್ಯ ವಯಸ್ಕರಾಗಿದ್ದು, ಗ್ರಾಮೀಣ ಪ್ರದೇಶಗಳಿಗೆ ಒಳಪಟ್ಟವರಾಗಿರುವುದು.

ಕೋಷ್ಟಕ 4.1.3 : ಪ್ರತಿಸ್ಪಂದಕರ ವೃತ್ತಿ

ವೃತ್ತಿ	ಒಟ್ಟು ಸದಸ್ಯೆಯರು	ಶೇಕಡಾವಾರು
ಕೃಷಿ ಮತ್ತು ಪಶು ಸಂಗೋಪನೆ	74	74%
ಕೃಷಿಯೇತರ ಮತ್ತು ಪಶು ಸಂಗೋಪನೆ	18	18%
ಪಶು ಸಂಗೋಪನೆ	8	8%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.3



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.1.3ರಂತೆ ಬಹುಪಾಲು ಸದಸ್ಯರು (74%) ಕೃಷಿ ಮತ್ತು ಹೈನುಗಾರಿಕೆಯನ್ನು ತಮ್ಮ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. 18% ಸದಸ್ಯರು ಕೃಷಿಯೇತರ ಮತ್ತು ಹೈನುಗಾರಿಕೆಯನ್ನು ತಮ್ಮ ಉದ್ಯೋಗವನ್ನಾಗಿ ಆರಿಸಿಕೊಂಡಿದ್ದಾರೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ ಶೇಕಡ 8ರಷ್ಟು ಸದಸ್ಯರು ಮಾತ್ರ ಕೇವಲ ಪಶುಸಂಗೋಪನೆಯನ್ನು ಕೈಗೆತ್ತಿಕೊಂಡಿದ್ದಾರೆ. ಇದರಿಂದ ತಿಳಿದು ಬಂದಿರುವುದೇನೆಂದರೆ ಜನರು ಹೈನುಗಾರಿಕೆಯನ್ನು ಕೃಷಿಗೆ ಪೂರಕ ಚಟುವಟಿಕೆಯಾಗಿ ಕೈಗೆತ್ತಿಕೊಂಡಿದ್ದಾರೆ. ಹೈನುಗಾರಿಕೆಯು ಸದಸ್ಯರಿಗೆ ಒಂದು ಉಪ ಉದ್ಯೋಗವೆಂದು ಇದರಿಂದ ತಿಳಿದುಬರುತ್ತದೆ.

ಕೋಷ್ಟಕ 4.1.4: ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ಸದಸ್ಯರಾಗಿ ಸೇರಿದ ಉದ್ದೇಶ

ಉದ್ದೇಶ	ಒಟ್ಟು ಸದಸ್ಯೆಯರು	ಶೇಕಡಾವಾರು
ಹೈನುಗಾರಿಕೆಯನ್ನು ಉಪ ಉದ್ಯೋಗವನ್ನಾಗಿ ಕೈಗೊಳ್ಳಲು	58	58%
ಹಾಲಿಗೆ ಉತ್ತಮ ಬೆಲೆ ಪಡೆಯಲು	22	22%
ಸಾಲ ಸವಲತ್ತುಗಳನ್ನು ಪಡೆಯಲು	10	10%
ಪಶು ವೈದ್ಯಸೇವೆ ಪಡೆಯಲು	06	06%
ಸಮುದಾಯದ ಉತ್ತಮತೆಗೆ	04	04%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.4



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.1.4ರಂತೆ ಹೆಚ್ಚಿನ ಸದಸ್ಯರು (58%) ಹೈನುಗಾರಿಕೆಯನ್ನು ಉಪ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಂಡು ಸಹಕಾರಸಂಘವನ್ನು ಸೇರಿದ್ದಾರೆ. ಏಕೆಂದರೆ ಹೆಚ್ಚಿನ ಕೃಷಿಕರು ಹೈನುಗಾರಿಕೆಯನ್ನು ತಮ್ಮ ಕೃಷಿಗೆ ಪೂರಕವಾದ ಚಟುವಟಿಕೆಯಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಉಳಿದವರು ತಾವು ಸರಬರಾಜು ಮಾಡುವ ಹಾಲಿಗೆ ಉತ್ತಮ ಬೆಲೆ ಪಡೆಯಲು (22%), ಸಹಕಾರಿ ಸಂಘದಿಂದ ಸಾಲ ಸವಲತ್ತುಗಳನ್ನು ಪಡೆಯಲು (10%), ಪಶುವೈದ್ಯ ಸೇವೆ ಪಡೆಯಲು (6%), ಹಾಗೂ ಸಮುದಾಯದ ಉತ್ತಮತೆಗಾಗಿ (4%) ಸಹಕಾರಿ ಸಂಘವನ್ನು ಸೇರಿದ್ದಾರೆ.

ಕೋಷ್ಟಕ 4.1.5: ಸದಸ್ಯತ್ವದ ಅವಧಿ

ಅವಧಿ	ಒಟ್ಟು ಸದಸ್ಯೆಯರು	ಶೇಕಡಾವಾರು
3 ವರ್ಷಗಳಿಗಿಂತ ಕಡಿಮೆ	25	25%
3–6 ವರ್ಷ	29	29%
6 ವರ್ಷಕ್ಕೆ ಮೇಲ್ಪಟ್ಟು	46	46%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.5



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.1.5ರಲ್ಲಿ ಹೇಳುವಂತೆ ಹೆಚ್ಚಿನ ಸದಸ್ಯರು (46%) ತುಂಬಾ ವರ್ಷಗಳಿಂದ ಸಹಕಾರಿ ಸಂಘದ ಸದಸ್ಯರಾಗಿರುತ್ತಾರೆ. ಶೇ.29ರಷ್ಟು ಸದಸ್ಯರು 3ರಿಂದ 6 ವರ್ಷದೊಳಗಿನ ಸದಸ್ಯತ್ವವನ್ನು ಹಾಗೂ ಶೇ.25ರಷ್ಟು ಸದಸ್ಯರು 3 ವರ್ಷಗಳಿಗಿಂತ ಕಡಿಮೆ ಅವಧಿಯ ಸದಸ್ಯತ್ವವನ್ನು ಹೊಂದಿರುತ್ತಾರೆ. ನಮ್ಮ ಈ ಸಂಶೋಧನೆಯಲ್ಲಿ ಸಮೀಕ್ಷೆಗೆ ಒಳಪಡಿಸಿದ ಹೆಚ್ಚಿನ ಸಹಕಾರ ಸಂಘಗಳು ಬಹಳ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದು, ಸ್ಟೆಪ್ ಯೋಜನೆಯಡಿಯಲ್ಲಿ ರಚಿತಗೊಂಡ ಕಾರಣ, ಸ್ಟೆಪ್ ಯೋಜನೆಯ ಸವಲತ್ತುಗಳಿಂದ ಪ್ರೇರೇಪಿತರಾಗಿ ಸದಸ್ಯರು ತಮ್ಮ ಸದಸ್ಯತ್ವವನ್ನು ಉಳಿಸಿಕೊಂಡಿದ್ದಾರೆ.

ಕೋಷ್ಟಕ 4.1.6: ಸದಸ್ಯರಾಗಲು ಪ್ರೇರೇಪಿಸಿದ ಅಂಶ

ಸದಸ್ಯತ್ವಕ್ಕೆ ಪ್ರೇರಣೆ	ಒಟ್ಟು ಸದಸ್ಯೆಯರು	ಶೇಕಡಾವಾರು
ಕೆ.ಎಂ.ಎಫ್ ನಿಂದ ಪ್ರೇರೇಪಿತರಾಗಿ	28	28%
ಕುಟುಂಬ ಸದಸ್ಯರ ಪ್ರೇರಣೆ	20	20%
ಮಾಧ್ಯಮಗಳ ಪ್ರೇರಣೆ	03	03%
ಸ್ವಯಂ ಪ್ರೇರಿತ	44	44%
ಇತರೆ ಕಾರಣಗಳು	05	05%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.6



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.1.6ರಂತೆ ಹೆಚ್ಚಿನ ಸದಸ್ಯರು (44%) ಸ್ವಯಂ ಪ್ರೇರಿತರಾಗಿ ಸಂಘದ ಸದಸ್ಯರಾಗಿದ್ದಾರೆ. ಕೃಷಿಯೊಂದಿಗೆ ಹೈನುಗಾರಿಕೆಯು ಉತ್ತಮ ಲಾಭ ತರುವಂತಹ ಒಂದು ಉದ್ಯೋಗವಾದ್ದರಿಂದ ಕೃಷಿಕರು ಸ್ವಯಂಪ್ರೇರಿತರಾಗಿ ತಮ್ಮ ಕೃಷಿಗೆ ಪೂರಕವಾಗಿ ಹೈನುಗಾರಿಕೆಯನ್ನು ಆಯ್ಕೆಮಾಡಿಕೊಂಡು ಸಹಕಾರಿ ಸಂಘದ ಸದಸ್ಯರಾಗಿದ್ದಾರೆ. ಅಲ್ಲದೆ ಇನ್ನು ಕೆಲವರು ಕೆ.ಎಂ.ಎಫ್ ನಿಂದ ಪ್ರೇರಿತರಾಗಿ ಸಂಘದ ಸದಸ್ಯರಾಗಿದ್ದಾರೆ (28%). ಕೆ.ಎಂ.ಎಫ್ ಕೆಲವು ಸಮೀಕ್ಷೆಗಳನ್ನು ನಡೆಸಿ ಸೂಕ್ತ ಸ್ಥಳಗಳಲ್ಲಿ ಹಾಲಿನ ಸಹಕಾರಿ ಸಂಘಗಳನ್ನು ಸಂಘಟಿಸುವ ಮೂಲಕ ಪ್ರಶಂಸನೀಯ ಕೆಲಸವನ್ನು ಮಾಡಿದೆ. ಇನ್ನು ಕೆಲವರು ಕುಟುಂಬ ಸದಸ್ಯರ ಪ್ರೇರಣೆಯಿಂದಾಗಿ ಸದಸ್ಯರಾಗಿದ್ದಾರೆ (20%). ಹೈನುಗಾರಿಕೆಯನ್ನೇ ಅವಲಂಬಿಸಿದವರು ಪಶುವೈದ್ಯ ಸೇವೆಗಳಿಗೆ ಹಾಗೂ ತಾವು ಸರಬರಾಜು ಮಾಡುವ ಹಾಲಿಗೆ ಉತ್ತಮ ಬೆಲೆ ಪಡೆಯವ ಸಲುವಾಗಿ ಹಾಲು ಉತ್ಪಾದಕರ ಸಹಕಾರಿ ಸಂಘದ ಸದಸ್ಯರಾಗಿದ್ದಾರೆ (5%).

ಕೋಷ್ಟಕ 4.1.7: ಹಾಲು ಉತ್ಪಾದಿಸುವ ಪಶುಗಳ ಸಂಖ್ಯೆ

ಪಶುಗಳ ಸಂಖ್ಯೆ	ಒಟ್ಟು ಸದಸ್ಯೆಯರು	ಶೇಕಡಾವಾರು
ಒಂದೇ ಒಂದು	27	27%
2 ರಿಂದ 3	42	42%
4ರಿಂದ ಮೇಲ್ಪಟ್ಟು	31	31%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.7



ಮೂಲ: ಕ್ಷೇತ್ರ ಸಮೀಕ್ಷೆ


4.1.7 ಕೋಷ್ಟಕದ ಪ್ರಕಾರ ಪ್ರತಿಕ್ರಿಯಿಸಿದವರಲ್ಲಿ ಹೆಚ್ಚಿನ ಸದಸ್ಯರು (42%) 2ರಿಂದ 3 ಹಸುಗಳನ್ನು, ಶೇಕಡ 31 ರಷ್ಟು ಸದಸ್ಯರು 4 ಹಸುಗಳಿಂದ ಮೇಲ್ಪಟ್ಟು ಮತ್ತು ಶೇಕಡ 27 ಸದಸ್ಯರು ಒಂದೇ ಒಂದು ಹಸುವನ್ನು ಹೊಂದಿದವರಾಗಿದ್ದಾರೆ. 2ರಿಂದ 3 ಹಾಗೂ 4ಕ್ಕಿಂತ ಮೇಲ್ಪಟ್ಟು ಹಸುಗಳನ್ನು ಹೊಂದಿದವರು ಕೃಷಿಗೆ ಪೂರಕವಾಗಿ ಹಸುಗಳನ್ನು ಸಾಕುತ್ತಾ ಅತೀ ಹೆಚ್ಚಿನ ಹಾಲುನ್ನು ಈ ಸಹಕಾರಿ ಸಂಘಗಳಿಗೆ ಸರಬರಾಜು ಮಾಡಿ ಆರ್ಥಿಕವಾಗಿ ಸಬಲೀಕರಣಗೊಂಡಿದ್ದಾರೆ. ಉದಾಹರಣೆಗೆ – 'ಅಂತರ ಹಾಲು ಉತ್ಪಾದಕರ ಸಹಕಾರ ಸಂಘ' ದಲ್ಲಿ 'ರೀಟಾ' ಹಾಗೂ 'ನಿಶ್ಮಿತಾ' ಎನ್ನುವವರು 125 ಲೀಟರ್‌ಗಳಷ್ಟು ಹಾಲನ್ನು, 'ಪಿಲಿಗೋಡು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ'ದಲ್ಲಿ 'ಜೊಹರಾಬಿ' ಎನ್ನುವವರು 94ಲೀಟರ್ ಗಳಷ್ಟು ಹಾಲನ್ನು ದಿನಕ್ಕೆ ಹಾಲಿನ ಸಹಕಾರಿ ಸಂಘಕ್ಕೆ ಸರಬರಾಜು ಮಾಡುತ್ತಿದ್ದಾರೆ.

ಕೋಷ್ಟಕ 4.1.8: ಪಶು ಆಹಾರದ ಖರೀದಿ

ಪಶು ಆಹಾರದ ಖರೀದಿ	ಒಟ್ಟು ಸದಸ್ಯೆಯರು	ಶೇಕಡಾವಾರು
ಹಾಲು ಉತ್ಪಾದಕರ ಸಹಕಾರಿ ಸಂಘಗಳಿಂದ	85	85%
ಖಾಸಗಿಯಾಗಿ ಹೊರಗಿನಿಂದ	15	15%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.8



ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.1.8ರಂತೆ ಬಹುಪಾಲು ಸದಸ್ಯರು (85%) ಪಶು ಆಹಾರವನ್ನು ಹಾಲು ಉತ್ಪಾದಕರ ಸಹಕಾರ ಸಂಘದಿಂದಲೇ ಖರೀದಿಸುತ್ತಿದ್ದಾರೆ. ಸಮೀಕ್ಷೆಗೆ ಒಳಪಡಿಸಿದ ಜನರ ಪ್ರತಿಕ್ರಿಯೆಯ ಪ್ರಕಾರ ಪಶು ಆಹಾರವು ಸಹಕಾರ ಸಂಘದಲ್ಲಿ ಕಡಿಮೆ ಬೆಲೆಗೆ ಸಿಗದಿದ್ದರೂ ಸುಲಭವಾಗಿ ಲಭ್ಯವಾಗುತ್ತದೆ. ಅಲ್ಲದೆ ಸರ್ಕಾರದ 'ಮಿನಿಡೈರಿ' ಯೋಜನೆಯಡಿಯಲ್ಲಿ 5 ಹಸುಗಳನ್ನು ತೆಗೆದುಕೊಂಡರೆ ಪಶು ಆಹಾರ ಖರೀದಿಗೆ ರೂ. 15000 ರಷ್ಟು ಅನುದಾನವು ಕೂಡಾ ಲಭ್ಯವಿದೆ.

ಕೋಷ್ಟಕ 4.1.9: ಹಾಲು ಉತ್ಪಾದನೆಯ ಪ್ರಮಾಣ ಮತ್ತು ಸರಬರಾಜು

ಹಾಲು ಉತ್ಪಾದನೆ	ಒಟ್ಟು ಸದಸ್ಯರು	ಶೇಕಡಾವಾರು
3–6 ಲೀಟರ್	39	39%
6–9 ಲೀಟರ್	34	34%
15 ಲೀಟರ್ ಮೇಲ್ಪಟ್ಟು	27	27%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ


ಹೆಚ್ಚಿನ ಸದಸ್ಯರು (39%) 3 ರಿಂದ 6 ಲೀಟರ್‌ಗಳಷ್ಟು ಹಾಲನ್ನು, ಶೇ.34 ಸದಸ್ಯರು 6–9 ಲೀಟರ್ ರಷ್ಟು ಹಾಲನ್ನು ಮತ್ತು ಕೆಲವು ಸದಸ್ಯರು 15 ಲೀಟರ್ ಮೇಲ್ಪಟ್ಟು ಹಾಲನ್ನು ಉತ್ಪಾದಿಸಿ ಸಹಕಾರಿ ಸಂಘಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಈ ಅಂಕಿ ಅಂಶವು ಸಹಕಾರಿ ಸಂಘಗಳ ಮೂಲಕ ಹಾಲು ಉತ್ಪಾದನೆಯ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರಿಯರಾಗಿ ಪಾಲ್ಗೊಳ್ಳುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಕೋಷ್ಟಕ 4.1.10: ಹಾಲು ಮಾರಾಟದ ರೀತಿ

ಹಾಲು ಮಾರಾಟ	ಒಟ್ಟು ಸದಸ್ಯೆಯರು	ಶೇಕಡಾವಾರು
ಡೈರಿ ಸಂಘಗಳ ಮೂಲಕ	84	84%
ಖಾಸಗಿಯಾಗಿ	04	04%
ಡೈರಿ ಸಂಘಗಳ ಮೂಲಕ ಹಾಗೂ ಖಾಸಗಿಯಾಗಿ	12	12%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.1.10



ಮೂಲ: ಕ್ಷೇತ್ರ ಸಮೀಕ್ಷೆ

4.1.10 ಕೋಷ್ಟಕದಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಬಹುಪಾಲು ಸದಸ್ಯರು (84%) ತಾವು ಉತ್ಪಾದಿಸಿದ ಹಾಲನ್ನು ಡೈರಿ ಸಂಘಗಳಿಗೇ ಮಾರಾಟ ಮಾಡುತ್ತಿದ್ದಾರೆ. ಏಕೆಂದರೆ ಡೈರಿ ಸಹಕಾರ ಸಂಘಗಳು ಹಾಲು ವಿತರಕರಿಗೆ ಅನೇಕ ಸವಲತ್ತುಗಳನ್ನು ಕೊಡುವ ಕಾರಣ ಸದಸ್ಯರು ನಿಷ್ಠಾವಂತರಾಗಿ ಸಹಕಾರ ಸಂಘಗಳಿಗೆ ಹಾಲನ್ನು ವಿತರಿಸುತ್ತಾರೆ. ಉಳಿದಂತೆ ಕೆಲವು ಸದಸ್ಯೆಯರು ಖಾಸಗಿಯಾಗಿ ಮತ್ತು ಡೈರಿ ಸಹಕಾರ ಸಂಘಗಳ ಮೂಲಕ (12%), ಇನ್ನು ಕೆಲವರು ಖಾಸಗಿಯಾಗಿ (4%) ಹಾಲು ಮಾರಾಟ ಮಾಡುತ್ತಿದ್ದಾರೆ. ಅವರು ಖಾಸಗಿಯಾಗಿ

ಹಾಲು ಮಾರಾಟ ಮಾಡುವ ಉದ್ದೇಶ ಅಕ್ಕಪಕ್ಕದವರೊಂದಿಗೆ ಹಾಗೂ ಸ್ನೇಹಿತರೊಂದಿಗೆ ಒಳ್ಳೆಯ ಸಂಬಂಧವನ್ನು ಮುಂದುವರೆಸುವುದು.


4.2 ಸ್ವೆಪ್ ಯೋಜನೆಗಳಲ್ಲಿ, ಸ್ವಸಹಾಯ ಸಂಘಗಳಲ್ಲಿ, ಕ್ಷೀರಸಂಜೀವಿನಿ ಯೋಜನೆಗಳಲ್ಲಿ ಮಹಿಳಾ ಸಹಕಾರ ನಾಯಕತ್ವ ಕಾರ್ಯಕ್ರಮಗಳಲ್ಲಿ ಸದಸ್ಯರ ಭಾಗವಹಿಸುವಿಕೆಯ ಮಟ್ಟ

ಕೋಷ್ಟಕ 4.2.1: ಸ್ವಸಹಾಯ ಸಂಘಗಳಲ್ಲಿ ಸದಸ್ಯತ್ವ

ಸ್ವಸಹಾಯ ಸಂಘಗಳಲ್ಲಿ ಸದಸ್ಯತ್ವ	ಒಟ್ಟು ಸದಸ್ಯೆಯರು	ಶೇಕಡಾವಾರು
ಇದೆ	75	75%
ಇಲ್ಲ	25	25%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ:4.2.1



ಮೂಲ: ಕ್ಷೇತ್ರ ಸಮೀಕ್ಷೆ

ಹಾಲು ಮಾರಾಟ ಮಾಡುವ ಉದ್ದೇಶ ಅಕ್ಕಪಕ್ಕದವರೊಂದಿಗೆ ಹಾಗೂ ಸ್ನೇಹಿತರೊಂದಿಗೆ ಒಳ್ಳೆಯ ಸಂಬಂಧವನ್ನು ಮುಂದುವರೆಸುವುದು.


4.2 ಸ್ಟೆಪ್ ಯೋಜನೆಗಳಲ್ಲಿ, ಸ್ವಸಹಾಯ ಸಂಘಗಳಲ್ಲಿ, ಕ್ಷೀರಸಂಜೀವಿನಿ ಯೋಜನೆಗಳಲ್ಲಿ ಮಹಿಳಾ ಸಹಕಾರ ನಾಯಕತ್ವ ಕಾರ್ಯಕ್ರಮಗಳಲ್ಲಿ ಸದಸ್ಯರ ಭಾಗವಹಿಸುವಿಕೆಯ ಮಟ್ಟ

ಕೋಷ್ಟಕ 4.2.1: ಸ್ವಸಹಾಯ ಸಂಘಗಳಲ್ಲಿ ಸದಸ್ಯತ್ವ

ಸ್ವಸಹಾಯ ಸಂಘಗಳಲ್ಲಿ ಸದಸ್ಯತ್ವ	ಒಟ್ಟು ಸದಸ್ಯೆಯರು	ಶೇಕಡಾವಾರು
ಇದೆ	75	75%
ಇಲ್ಲ	25	25%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ:4.2.1



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.2.1ರಂತೆ ತಿಳಿದು ಬರುವುದೇನೆಂದರೆ ಶೇ.75%ರಷ್ಟು ಸದಸ್ಯರು ಸ್ವಸಹಾಯ ಗುಂಪುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಏಕೆಂದರೆ ಕ್ಷೇತ್ರ ಸಮಿಕ್ಷೆಗೆ ಒಳಪಟ್ಟ ಹೆಚ್ಚಿನ, ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳು ಸ್ಟೆಪ್ ಯೋಜನೆಗೆ ಒಳಪಟ್ಟಿದ್ದು, ಸ್ಟೆಪ್ ಕಾರ್ಯಕ್ರಮ ಅನುಷ್ಠಾನವು ಕನಿಷ್ಠ ಒಂದು ಸ್ವಸಹಾಯ ಗುಂಪಿನ ರಚನೆಯನ್ನು ಪ್ರಸ್ತಾಪಿಸುತ್ತದೆ.

ಕೋಷ್ಟಕ 4.2.2: ಸ್ವಸಹಾಯ ಸಂಘಗಳಲ್ಲಿ ಸದಸ್ಯರಾದ ಉದ್ದೇಶ

ಸದಸ್ಯತ್ವದ ಉದ್ದೇಶ	ಒಟ್ಟು ಸದಸ್ಯರು	ಶೇಕಡಾವಾರು
ಸಾಲ ಪಡೆಯಲು	35	35%
ಸಾಮಾಜಿಕ ಸ್ಥಾನ ಮಾನ ಹೆಚ್ಚಿಸಲು	12	12%
ಆರ್ಥಿಕವಾಗಿ ಸ್ವಾತಂತ್ರ್ಯ ಪಡೆಯಲು	13	13%
ಉಳಿತಾಯವನ್ನು ಉತ್ತೇಜಿಸಲು	40	40%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.2.2



ಮೂಲ: ಕ್ಷೇತ್ರ ಸಮೀಕ್ಷೆ


ಕೋಷ್ಟಕ 4.2.2ರಂತೆ ಶೇ.40ರಷ್ಟು ಸದಸ್ಯರು ತಮ್ಮ ಉಳಿತಾಯವನ್ನು ಉತ್ತೇಜಿಸಲು ಸ್ವಸಹಾಯ ಸಂಘದ ಸದಸ್ಯರಾಗಿರುತ್ತಾರೆ. ಏಕೆಂದರೆ ಸ್ವಸಹಾಯ ಸಂಘಗಳು ಉಳಿತಾಯವನ್ನು ಉತ್ತೇಜಿಸುತ್ತವೆ. ಶೇ 35ರಷ್ಟು ಸದಸ್ಯರು ಸ್ವಸಹಾಯ ಸಂಘಗಳಿಂದ ಸಾಲ ಸೌಲಭ್ಯ ಪಡೆಯಲು ಸದಸ್ಯೆಯರಾಗುತ್ತಾರೆ. ಏಕೆಂದರೆ ಸ್ವಸಹಾಯ ಸಂಘಗಳಲ್ಲಿ ಸಾಲ ಮಂಜೂರಾತಿ ಕ್ರಮಗಳು ಸುಲಭವಾಗಿರುವುದರಿಂದ ಮಹಿಳೆಯರು ಇದಕ್ಕೆ ಹೆಚ್ಚು ಅವಲಂಬಿತರಾಗಿದ್ದಾರೆ. ಸಾಲದ ಮರುಪಾವತಿ ಕೂಡ ಸುಲಭ ಕಂತುಗಳಲ್ಲಿ ಲಭ್ಯ. ಇನ್ನು ಕೆಲವರು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು (ಶೇ.13) ಮತ್ತು ಸಮಾಜದಲ್ಲಿ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲು (ಶೇ.12) ಸ್ವಸಹಾಯ ಸಂಘದ ಸದಸ್ಯರಾಗುತ್ತಾರೆ. ಸ್ವಸಹಾಯ ಸಂಘಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅವರು ಅಯೋಜಿಸುವ ತರಬೇತಿ ಕಾರ್ಯಕ್ರಮಗಳಲ್ಲಿ ಕೆಲವೊಮ್ಮೆ ಮಹಿಳೆಯರು ಪಾಲ್ಗೊಳ್ಳುವ ಮೂಲಕ ಸಾಮಾಜಿಕ ಅಸ್ತಿತ್ವವನ್ನು ಪಡೆದು ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆಯುತ್ತಾರೆ. ಸ್ವಸಹಾಯ ಸಂಘಗಳು ಗ್ರಾಮೀಣ ಮಹಿಳೆಯರ ಉಳಿತಾಯವನ್ನು ಉತ್ತೇಜಿಸಿ ಅವರು ಅರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಹೊಂದುವಂತೆ ಮಾಡುತ್ತದೆ.

ಕೋಷ್ಟಕ: 4.2.3: ಸ್ವಸಹಾಯ ಸಂಘಗಳಲ್ಲಿ ಸಾಲ ಪಡೆಯುವ ಉದ್ದೇಶ

ಸಾಲದ ಉದ್ದೇಶ	ಒಟ್ಟು ಸದಸ್ಯರು	ಶೇಕಡಾವಾರು
ಹಾಲು ಉತ್ಪಾದನೆಯ ಪಶುಗಳನ್ನು ಖರೀದಿಸಲು	30	30%
ಕೃಷಿ ಕೆಲಸಗಳಿಗಾಗಿ	25	25%
ಹಳೆಯ ಸಾಲವನ್ನು ಪಾವತಿಸಲು	20	20%
ಮಕ್ಕಳ ವಿದ್ಯಾಭ್ಯಾಸ, ಮದುವೆ ಮತ್ತು ಇತರ ಉದ್ದೇಶಗಳಿಗಾಗಿ	25	25%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.2.3



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕ 4.2.3ರಂತೆ ಸದಸ್ಯೆಯರು ಸ್ವಸಹಾಯ ಸಂಘಗಳಿಂದ ಹಾಲು ಉತ್ಪಾದನೆಯ ಪಶುಗಳನ್ನು ಖರೀದಿಸಲು (ಶೇ.30%), ಕೃಷಿ ಕೆಲಸಗಳುಗಾಗಿ (25%), ಮಕ್ಕಳು ವಿಧ್ಯಾಬ್ಯಾಸ ಮದುವೆ ಹಾಗೂ ಇತರ ಉದ್ದೇಶಗಳಿಗಾಗಿ (25%) ಮತ್ತು ಹಳೆಯ ಸಾಲ ಪಾವತಿಸಲು (20%) ಸಾಲವನ್ನು ಪಡೆಯುತ್ತಾರೆ.

ಸ್ವಸಹಾಯ ಸಂಘಗಳಲ್ಲಿ ಇತರೆ ಸಂಸ್ಥೆಗಳಿಗಿಂತ ಸುಲಭವಾಗಿ ಸಾಲ ಸಿಗುವುದರಿಂದ ತಮ್ಮ ಪ್ರಾಥಮಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಹಾಗೂ ಖಾಸಗಿ ವ್ಯಕ್ತಿಗಳ ಸಾಲದ ಬಲೆಯಲ್ಲಿ ಬೀಳುವುದನ್ನು ತಪ್ಪಿಸಿಕೊಳ್ಳಲು ಸ್ವಸಹಾಯ ಸಂಘಗಳಿಂದ ಸಾಲ ಪಡೆಯುತ್ತಾರೆ. ಸಾಲದ ಮರುಪಾವತಿ ಕೂಡಾ ಸದಸ್ಯರಿಗೆ ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಸರಕಾರದಿಂದ ಬರುವ ಸಬ್ಸಿಡಿ ಹಾಗೂ ಇತರ ನೆರವುಗಳು ನೇರವಾಗಿ ಅವರ ಖಾತೆಗೆ ಬೀಳುವುದರಿಂದ ಮಧ್ಯವರ್ತಿಗಳ ತೊಂದರೆ ಕೂಡಾ ತಪ್ಪುತ್ತದೆ.

ಅಲ್ಲದೆ ಕೆಲವು ಸ್ವಸಹಾಯ ಗುಂಪುಗಳು ಸ್ಟೆಪ್ ಯೋಜನೆ ಜೊತೆಗೆ ಸಂಪರ್ಕವನ್ನು ಹೊಂದಿದೆ. ಇದರಿಂದಾಗಿ ಸದಸ್ಯೆಯರು ಸ್ವಸಹಾಯ ಸಂಘಗಳ ಮೂಲಕ ಸ್ಟೆಪ್ ಯೋಜನೆಯ ಉಪಯೋಗಗಳನ್ನು ಪಡೆಯುತ್ತಾರೆ.

ಸದಸ್ಯರ ಹೇಳಿಕೆ ಪ್ರಕಾರ ಸ್ವಸಹಾಯ ಸಂಘಗಳು ಆಯೋಜಿಸಿದ ತರಬೇತಿ ಕಾರ್ಯಕ್ರಮಗಳಿಂದ ಅವರ ಆತ್ಮ ಸ್ಥೈರ್ಯ, ಕೌಶಲ್ಯ ಅಭಿವೃದ್ಧಿ, ಸ್ವಾವಲಂಬನೆ ಹೆಚ್ಚಿದೆ.

ಕೋಷ್ಟಕ 4.2.4: ಜಾನುವಾರು ಖರೀದಿಗೆ ಸಾಲ ಸೌಲಭ್ಯ

ಜಾನುವಾರು ಖರೀದಿಗೆ ಬಡ್ಡಿ ರಹಿತ ಸಾಲ ಸೌಲಭ್ಯ	ಒಟ್ಟು ಸದಸ್ಯೆಯರು	ಶೇಕಡಾವಾರು
ಪಡೆದಿದ್ದಾರೆ	70	70%
ಇಲ್ಲ	30	30%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.2.4ರಂತೆ ಶೇ 70ರಷ್ಟು ಪ್ರತಿಸ್ಪಂದಕರು ಸ್ಟೆಪ್ ಯೋಜನೆಯಲ್ಲಿ ಜಾನುವಾರುಗಳ ಖರೀದಿಗಾಗಿ ಬಡ್ಡಿರಹಿತ ಸಾಲವನ್ನು ಪಡೆದಿರುತ್ತಾರೆ ಹಾಗೂ ಅದರ ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ. ಸ್ಟೆಪ್ ಯೋಜನೆಯು ಅಂಚಿನ ಹಣದ ಸೌಲಭ್ಯವನ್ನು ಒದಗಿಸುವ ಮೂಲಕ ಪಶುಗಳ ಖರೀದಿಗೆ ಬಡ್ಡಿ ರಹಿತ ಸಾಲವನ್ನು ಒದಗಿಸಿ ಆ ಮೂಲಕ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಉನ್ನತೀಕರಿಸಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಉತ್ತೇಜಿಸುತ್ತದೆ. ಶೇ 30ರಷ್ಟು ಸದಸ್ಯೆಯರು ಈ ಪ್ರಯೋಜನವನ್ನು ಪಡೆಯಲಿಲ್ಲ. ಏಕೆಂದರೆ ಅವರು ಆರ್ಥಿಕವಾಗಿ ಸಬಲರಾಗಿದ್ದಾರೆ.

ಕೋಷ್ಟಕ 4.2.5: ಸ್ಟೆಪ್ ತರಬೇತು ಕಾರ್ಯಕ್ರಮಗಳಿಂದ ಲಾಭ

ಸ್ಟೆಪ್ ತರಬೇತು ಕಾರ್ಯಕ್ರಮಗಳಿಂದ ಲಾಭ	ಒಟ್ಟು ಸದಸ್ಯರು	ಶೇಕಡಾವಾರು
ಇದೆ	85	85%
ಇಲ್ಲ	15	15%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.2.5ರಂತೆ ಶೇ.85ರಷ್ಟು ಸದಸ್ಯೆಯರು ಸ್ಟೆಪ್ ಯೋಜನೆಯ ಲಾಭವನ್ನು ಪಡೆದಿರುತ್ತಾರೆ. ಕ್ಷೇತ್ರ ಕಾರ್ಯದ ಸಮಯದಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಸ್ಟೆಪ್ ಯೋಜನೆಯ ವಿಷಯದಲ್ಲಿ ಸದಸ್ಯೆಯರಿಂದ ತಿಳಿದು ಬಂದ ಕೆಲವು ಅಂಶಗಳು ಹೀಗಿವೆ.

1. ಸ್ಟೆಪ್ ಆಯೋಜಿಸಿದ ಆರೋಗ್ಯ ಮತ್ತು ಪೋಷನೆಯ ಕಾರ್ಯಕ್ರಮವು ನೈರ್ಮಲ್ಯ ಸಮತೋಲಿತ ಆಹಾರ, ಲಸಿಕೆ ಹಾಕುವುದು, ಸುರಕ್ಷಿತ ಕುಡಿಯುವ ನೀರು, ಅಪೌಷ್ಟಿಕತೆ ತಡೆಗಟ್ಟುವಿಕೆ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಒದಗಿಸಿ ಆರೊಗ್ಯ ಜ್ಞಾನವನ್ನು ಹೆಚ್ಚಿಸಿದೆ.
2. ಲಿಂಗ ಸಂವೇದನಾ ಕಾರ್ಯಕ್ರಮವು ಲಿಂಗ ಭಿನ್ನತೆಗಳನ್ನು ಸೂಕ್ಷ್ಮಗೊಳಿಸಿ, ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ವಿಧವರೆಯರ ಮರುಮದುವೆಯ ಪ್ರಾಶಸ್ತ್ಯದ ಅರಿವನ್ನು ಮೂಡಿಸಿತು.
3. ಕಾನೂನು ಸಾಕ್ಷರತಾ ಕಾರ್ಯಕ್ರಮದಿಂದ ಪೋಲೀಸ್ ವ್ಯವಸ್ಥೆ, ಮಹಿಳೆಯರ ಹಕ್ಕುಗಳು ಮುಂತಾದವುಗಳ ಬಗೆಗಿನ ಅರಿವು ಹೆಚ್ಚಿತು.
4. ಜಾನುವಾರು ನಿರ್ವಹಣೆಯ ತರಬೇತಿ ಕಾರ್ಯಕ್ರಮಗಳಿಂದ ಹೈನುಗಾರಿಕೆಯ ಬಗೆಗಿನ ಅರಿವನ್ನು ಹೆಚ್ಚಿಸಿ ಆ ಮೂಲಕ ಹೈನುಗಾರಿಕೆಗೆ ಉತ್ತೇಜನ ನೀಡಿ ಅದರಿಂದ ಲಾಭ ಪಡೆಯುವಂತೆ ಸದಸ್ಯರನ್ನು ಪ್ರೇರೇಪಿಸಿದೆ.
5. ಗುಜರಾತ್‌ನಲ್ಲಿರುವ ಅಮೂಲ್ ಡೈರಿಯ ಬೇಟಿ ವ್ಯವಸ್ಥೆಯಿಂದ “ಅಮೂಲ್ ಮಾದರಿ” ಯಲ್ಲಿರುವ ಉತ್ತಮ ವೈಶಿಷ್ಟ್ಯಗಳನ್ನು ಅಳವಡಿಸಿಕೊಳ್ಳುವಂತೆ ಸಹಕರಿಸಿದೆ.

ಕೋಷ್ಟಕ 4.2.6: ಕ್ಷೀರಸಂಜೀವಿನಿ ಯೋಜನೆಯಡಿಯಲ್ಲಿ ಉದ್ಯೋಗಾವಕಾಶಗಳ ಲಭ್ಯತೆ

ಕ್ಷೀರಸಂಜೀವಿನಿಯಲ್ಲಿ ಉದ್ಯೋಗಾವಕಾಶ	ಒಟ್ಟು ಸದಸ್ಯೆಯರು	ಶೇಕಡಾವಾರು
ಹೆಚ್ಚಿವೆ	48	48%
ಇಲ್ಲ	52	52%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.2.6ರಂತೆ ಶೇ.48 ರಷ್ಟು ಸದಸ್ಯೆಯರ ಹೇಳಿಕೆಯಂತೆ ಈ ಯೋಜನೆಯಲ್ಲಿ ಉದ್ಯೋಗವಕಾಶಗಳು ಹೆಚ್ಚಿವೆ. ಸ್ವಸಹಾಯ ಗುಂಪುಗಳ ಮೂಲಕ ಈ ಯೋಜನೆಯು ಸದಸ್ಯೆಯರನ್ನು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳಲ್ಲಿ ಸಕ್ರಿಯಗೊಳಿಸಿ, ಉದ್ಯಮ ಶೀಲತೆಯ, ಚಟುಚಟಿಕೆಗಳನ್ನು ಉತ್ತೇಜಿಸಿ, ಉದ್ಯೋಗವಕಾಶಗಳನ್ನು ಕಲ್ಪಿಸಿದೆ. ಆ ಮೂಲಕ ಮಹಿಳಾ ಸಬಲೀಕರಣಕ್ಕೆ ಕಾರಣೀಭೂತವಾಗಿದೆ.

ಆದರೆ ಶೇ.52ರಷ್ಟು ಸದಸ್ಯೆಯರಿಗೆ 'ಕ್ಷೀರಸಂಜೀವಿನಿ' ಯೋಜನೆಯ ಅರಿವೇ ಇಲ್ಲ. ಇದಕ್ಕೆ ಸದಸ್ಯೆಯರ ಅತ್ಯಲ್ಪ ಸಾಕ್ಷರತಾ ಪ್ರಮಾಣ ಮತ್ತು ಮಾಹಿತಿಯ ಕೊತರೆಯಿರಬಹುದು.

ಕೋಷ್ಟಕ 4.2.7: ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ನಾಯಕತ್ವ ಕಾರ್ಯಕ್ರಮಗಳ ಪ್ರಯೋಜನ

ನಾಯಕತ್ವ ಕಾರ್ಯಕ್ರಗಳ ಪ್ರಯೋಜನ	ಒಟ್ಟು	ಶೇಕಡಾವಾರು
ಇದೆ	44	44%
ಇಲ್ಲ	56	56%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ಕ್ಷೇತ್ರ ಸಮೀಕ್ಷೆಯಂತೆ ಮೇಲಿನ ಕೋಷ್ಟಕದ ಪ್ರಕಾರ ಹಾಲು ಉತ್ಪಾದಕ ಮಹಿಳಾ ಸಹಕಾರ ಸಂಘದ ನಾಯಕತ್ವ ಅಥವಾ ಮುಂದಾಳುತ್ವ ಕಾರ್ಯಕ್ರಮಗಳು ತುಂಬಾ ಪ್ರಯೋಜನಕಾರಿಯಾಗಿವೆ. ಈ ಕಾರ್ಯಕ್ರಮವು ಸಮರ್ಥ ಮಹಿಳೆಯರನ್ನು ಗುರಿತಿಸಿ, ಅವರು ನಾಯಕಿಯರಾಗಿ ಪಾಲ್ಗೊಳ್ಳುವಿಕೆಯನ್ನು ಹಾಗೂ ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಅವರನ್ನು ಸ್ಥಳೀಯ ಮಹಿಳೆಯರಿಗೆ ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಯನ್ನಾಗಿ ತಯಾರಿಸುತ್ತದೆ. ಇದರಿಂದ ಸದಸ್ಯರ ನಾಯಕತ್ವದ ಗುಣವನ್ನು ಹೆಚ್ಚಿಸುತ್ತದೆ.


4.3: ಮಾದರಿಯ ಪ್ರತಿಸ್ಪಂದಕರು ಗ್ರಹಿಸಿದಂತೆ ಮಹಿಳೆಯರ ಆರ್ಥಿಕ ಸಬಲೀಕರಣ

ಕೋಷ್ಟಕ 4.3.1: ಆರ್ಥಿಕ ಸ್ವಾವಲಂಬನೆ

ಆರ್ಥಿಕ ಸ್ವಾವಲಂಬನೆ	ಒಟ್ಟು ಸದಸ್ಯೆಯರು	ಶೇಕಡಾವಾರು
ಆಗಿದೆ	82	82%
ಇಲ್ಲ	18	18%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.3.1



ಮೂಲ: ಕ್ಷೇತ್ರ ಸಮೀಕ್ಷೆ


ಮೇಲಿನ ಕೋಷ್ಟಕದ ಪ್ರಕಾರ ಶೇಕಡ 82 ಪ್ರತಿಸ್ಪಂದಕರು ತಾವು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದೇವೆ ಎನ್ನುತ್ತಾರೆ. ಏಕೆಂದರೆ ಅವರು ಕೊಡುವ ಹಾಲಿಗೆ ಸಹಕಾರ ಸಂಘ ಉತ್ತಮ ಬೆಲೆ ಕೊಡುತ್ತಿದ್ದು, ಹಾಲಿನ ಹಣವನ್ನು ನೇರವಾಗಿ ಅವರ ಖಾತೆಗೆ ಜಮಾ ಮಾಡುವುದರಿಂದ, ಮಹಿಳೆಯರಿಗೆ ಹಣಕ್ಕಾಗಿ ತಮ್ಮ ಪತಿ ಅಥವಾ ಕುಟುಂಬದ ಸದಸ್ಯರನ್ನು ಅವಲಂಬಿಸಬೇಕಾಗಿಲ್ಲ.

ಕೋಷ್ಟಕ 4.3.2: ಸದಸ್ಯರ ಆದಾಯ

ಸದಸ್ಯರ ಆದಾಯ	ಒಟ್ಟು ಸದಸ್ಯೆಯರು	ಶೇಕಡಾವಾರು
ತುಂಬಾ ಹೆಚ್ಚಿದೆ	35	35%
ಹೆಚ್ಚಿದೆ	51	51%
ಕಡಿಮೆಯಾಗಿದೆ	4	4%
ತುಂಬಾ ಕಡಿಮೆಯಾಗಿದೆ	1	1%
ಹೆಚ್ಚೂ ಇಲ್ಲ ಕಡಿಮೆ ಇಲ್ಲ	9	9%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.3.2



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಠಕದ ಪ್ರಕಾರ ಶೇಕಡ 35ರಷ್ಟು ಸದಸ್ಯರು ಸಹಕಾರಿ ಸಂಘಗಳಿಗೆ ಸೇರಿದ ನಂತರ ತಮ್ಮ ಆದಾಯ ತುಂಬಾ ಹೆಚ್ಚಿದೆ ಎನ್ನುತ್ತಾರೆ. ಇವರೆಲ್ಲಾ ಹಾಲಿನ ಸಹಕಾರಿ ಸಂಘಗಳಿಗೆ ಅತೀ ಹೆಚ್ಚು ಹಾಲು ಸರಬರಾಜು ಮಾಡುವವರಾಗಿದ್ದಾರೆ. ಉದಾಹರಣೆ–'ಅಂತರ ಮಹಿಳಾ ಸಹಕಾರಿ ಸಂಘ'ದ ಸದಸ್ಯೆಯಾದ 'ರೀಟಾ' ರವರು ದಿನಕ್ಕೆ 125 ಲೀಟರ್ ಹಾಲನ್ನು ಸಂಘಕ್ಕೆ ಸರಬರಾಜು ಮಾಡುತ್ತಾರೆ. ಅವರ ಪ್ರಕಾರ ಅವರ ಆದಾಯ ತುಂಬಾ ಹೆಚ್ಚಾಗಲು ಕಾರಣ ಸಹಕಾರಿ ಸಂಘ ಅವರು ಕೊಡುವ ಹಾಲಿಗೆ ಉತ್ತಮ ಬೆಲೆ ಕೊಡುವುದಾಗಿದೆ ಆದರೆ ಶೇಕಡ 51


ರಷ್ಟು ಸದಸ್ಯೆಯರು ತಾವು ಸಂಘಕ್ಕೆ ಸೇರಿದ ಮೇಲೆ ತಮ್ಮ ಆದಾಯ 'ಹೆಚ್ಚಿದೆ' ಎನ್ನುವ ಅಭಿಪ್ರಾಯ ಪಟ್ಟಿದ್ದಾರೆ. ಆದಾಯ ಕಡಿಮೆಯಾಗಿದೆ ಎನ್ನುವವರು ತೀರಾ ಕಡಿಮೆ.

ಕೋಷ್ಟಕ 4.3.3: ಆದಾಯದ ಉಳಿತಾಯ

ಆದಾಯದ ಉಳಿತಾಯ	ಒಟ್ಟು ಸದಸ್ಯೆಯರು	ಶೇಕಡಾವಾರು
ಬ್ಯಾಂಕ್‌ಗಳಲ್ಲಿ	22	22%
ಅಂಚೆ ಕಛೇರಿಗಳಲ್ಲಿ	18	18%
ಸ್ವ ಸಹಾಯ ಸಂಘಗಳಲ್ಲಿ	31	31%
ಸಹಕಾರಿ ಬ್ಯಾಂಕ್‌ಗಳಲ್ಲಿ	29	29%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.3.3



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಲ್ಲಿ ಹೇಳುವಂತೆ ಸದಸ್ಯೆಯರು ತಮ್ಮ ಉಳಿತಾಯವನ್ನು ಹೆಚ್ಚಾಗಿ ಸ್ವಸಹಾಯ ಸಂಘಗಳಲ್ಲಿ (31%) ಮಾಡುತ್ತಿದ್ದಾರೆ. ಅಂದರೆ ಈ ಸದಸ್ಯೆಯರು ಸ್ವಸಹಾಯ ಗುಂಪುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಶೇಕಡ 29ರಷ್ಟು ಸದಸ್ಯರು ಸಹಕಾರಿ ಬ್ಯಾಂಕುಗಳಲ್ಲಿ ಉಳಿತಾಯ ಮಾಡಿ 'ಸಹಕಾರ ತತ್ವ' ವನ್ನು ಪುಷ್ಟೀಕರಿಸುತ್ತಿದ್ದಾರೆ. ಉಳಿದಂತೆ ಇತರ ಸದಸ್ಯರು ಬ್ಯಾಂಕ್‌ಗಳಲ್ಲಿ (22%) ಮತ್ತು ಅಂಚೆ ಕಛೇರಿಗಳಲ್ಲಿ (18%) ಉಳಿತಾಯ


ಮಾಡುತ್ತಿದ್ದಾರೆ. ಇದು ಸದಸ್ಯೆಯರ ಉಳಿತಾಯ ಪ್ರವೃತ್ತಿಯನ್ನು ಸೂಚಿಸುತ್ತದೆ. ಸದಸ್ಯೆಯರು ಮಹಿಳೆಯರಾದ ಕಾರಣ, ಹೆಚ್ಚಿನ ಮಹಿಳೆಯರು ಉಳಿತಾಯ ಪ್ರವೃತ್ತಿಯನ್ನು ಹೊಂದಿದವರಾಗಿರುತ್ತಾರೆ.

ಕೋಷ್ಟಕ 4.3.4: ಆದಾಯದ ಉಳಿತಾಯದ ಉದ್ದೇಶ

ಉಳಿತಾಯದ ಉದ್ದೇಶ	ಒಟ್ಟು ಸದಸ್ಯೆಯರು	ಶೇಕಡಾವಾರು
ಸಾಮಾಜಿಕ, ಆರ್ಥಿಕ ಭದ್ರತೆ	40	40%
ಮಕ್ಕಳ ಮದುವೆ, ವಿದ್ಯಾಭ್ಯಾಸ	42	42%
ತುರ್ತು ಪರಿಸ್ಥಿತಿಗಳಿಗೆ	18	18%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.3.4



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಲ್ಲಿ ಹೇಳುವಂತೆ ಹೆಚ್ಚಿನ ಸದಸ್ಯೆಯರು (42%) ತಮ್ಮ ಉಳಿತಾಯದ ಮುಖ್ಯ ಉದ್ದೇಶ, ಮಕ್ಕಳ ಮದುವೆ ಮತ್ತು ವಿದ್ಯಾಭ್ಯಾಸಕ್ಕಾಗಿ ಎನ್ನುತ್ತಾರೆ. 'ಸೂರಿಂಜೆ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ'ದ ಸದಸ್ಯೆಯೊಬ್ಬರು ತನ್ನ ಮಗನನ್ನು ಬೆಸೆಂಟ್ ಸಂಧ್ಯಾ ಕಾಲೇಜಿಗೆ ಬಿ.ಬಿ.ಎಂ ಪದವಿಗಾಗಿ ಸೇರಿಸಿದ್ದು ತನ್ನ ಈ ಹಾಲಿನ ಸಂಪಾದನೆಯಿಂದ ಎನ್ನುತ್ತಾರೆ. ಶೇಕಡ 40ರಷ್ಟು ಸದಸ್ಯರು ಸಾಮಾಜಿಕ-ಆರ್ಥಿಕ ಭದ್ರತೆಗಾಗಿ ಉಳಿತಾಯ ಮಾಡುತ್ತೇವೆ


ಎಂದಿದ್ದಾರೆ. ಹಾಗೆ ಇನ್ನು ಕೆಲವರು ಸದಸ್ಯರು (18%) ತುರ್ತುಪರಿಸ್ಥಿತಿಗಳಿಗೆ ಅಂದರೆ ಮನೆಯ ಹೆಂಚು ರೀಪೇರಿಗೆ, ಮಕ್ಕಳ ಶಾಲೆಯ ಶುಲ್ಕ ಕಟ್ಟಲು ಉಳಿತಾಯವನ್ನು ಮಾಡಿರುತ್ತಾರೆ.

ಕೋಷ್ಟಕ 4.3.5: ಬಡತನ ನಿರ್ಮೂಲನೆ

ಬಡತನ ನಿರ್ಮೂಲನೆ	ಒಟ್ಟು ಸದಸ್ಯೆಯರು	ಶೇಕಡಾವಾರು
ಆಗಿದೆ	66	66%
ಇಲ್ಲ	34	34%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.3.5



ಮೂಲ: ಕ್ಷೇತ್ರ ಸಮೀಕ್ಷೆ


ಮೇಲಿನ ಕೋಷ್ಟಕದ ಪ್ರಕಾರ ಶೇ.66ರಷ್ಟು ಸದಸ್ಯೆಯರು ಬಡತನ ನಿರ್ಮೂಲನೆ ತಕ್ಕಮಟ್ಟಿಗೆ ಆಗಿದೆ ಎನ್ನುತ್ತಾರೆ. ಹೇಗೆಂದರೆ ಮೊದಲು ಹಂಚಿನ ಮನೆಯಲ್ಲಿದ್ದವರು ಈಗ ತಕ್ಕಮಟ್ಟಿಗೆ ಸಣ್ಣ ತಾರಸಿ ಮನೆಯಲ್ಲಿ ವಾಸವಾಗಿದ್ದಾರೆ ಅಲ್ಲದೆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಒಳ್ಳೆಯ ಶಾಲೆಗಳಲ್ಲಿ ಕೊಡಿಸುತ್ತಿದ್ದಾರೆ. ಈ ಅಂಕಿ ಅಂಶವು ಮಹಿಳೆಯರು ಆರ್ಥಿಕ ಸ್ವಾವಲಂಬನೆಯಿಂದ ಸಾಮಾಜಿಕ ಸಬಲೀಕರಣ ಮತ್ತು ಕುಟುಂಬದಲ್ಲಿ ಲಿಂಗ ಸಮಾನತೆಯ ಜೊತೆಗೆ ಸಮುದಾಯದಲ್ಲಿ ಗೌರವವನ್ನೂ, ಅಸ್ಮಿತೆಯನ್ನು ಸಂಪಾದಿಸಿಕೊಂಡಿದ್ದಾರೆ ಎಂದು ಧೃಡೀಕರಿಸುತ್ತದೆ.

ಕೋಷ್ಟಕ 4.3.6: ಪ್ರತಿಸ್ಪಂದಕರ ಆಸ್ತಿ ರಚನೆಯ ವಿವರ

ಆಸ್ತಿ ವಿವರ	ಒಟ್ಟು ಸದಸ್ಯೆಯರು	ಶೇಕಡಾವಾರು
ಒಡವೆ	25	25%
ವಾಹನ	30	30%
ಮನೆ	10	10%
ಇತರ ಸಾಮಾಗ್ರಿಗಳು	35	35%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.3.6



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದ ಪ್ರಕಾರ, ಸಮೀಕ್ಷೆಯಲ್ಲಿ ತಿಳಿದು ಬಂದ ವಿಷಯವೇನೆಂದರೆ ಶೇ.35ರಷ್ಟು ಸದಸ್ಯರು ಹಾಲಿನ ಆದಾಯದಿಂದ ಮನೆಗೆ ಬೇಕಾದ ಸಾಮಾಗ್ರಿಗಳಾದ ಬಟ್ಟೆ ಹೊಲಿಯುವ ಯಂತ್ರ, ಬಟ್ಟೆ ಒಗೆಯುವ ಯಂತ್ರ, ರುಬ್ಬುವ ಯಂತ್ರ, ಶೀತಲ ಪೆಟ್ಟಿಗೆ ಮುಂತಾದವುಗಳನ್ನು ಖರೀದಿಸಿದ್ದಾರೆ. ಶೇ.30ರಷ್ಟು ಸದಸ್ಯರು ಹಾಲಿನ ಸರಬರಾಜಿಗೆ ಅನುಕೂಲವಾಗಲು ದ್ವಿಚಕ್ರ ಹಾಗೂ ನಾಲ್ಕು ಚಕ್ರಗಳ ವಾಹನವನ್ನು ಖರೀದಿಸಿದ್ದಾರೆ. ಇನ್ನು ಕೆಲವು ಸದಸ್ಯರು (25%) ಮಕ್ಕಳಿಗೆ ಕಿವಿಯ ಓಲೆ, ಸರ ಮುಂತಾದ ಸಣ್ಣ, ಪುಟ್ಟ ಒಡವೆಗಳನ್ನು ಮಾಡಿಸಿರುತ್ತಾರೆ. ಶೇ.10ರಷ್ಟು ಸದಸ್ಯರು ಹೊಸ ಮನೆ ತೆಗೆದುಕೊಳ್ಳದಿದ್ದರೂ ಇದ್ದ ಮನೆಯನ್ನು ವಿಸ್ತರಿಸುವುದು, ದುರಸ್ತಿ ಮಾಡಿಸುವುದು ಮುಂತಾದವುಗಳನ್ನು ಕೈಗೊಂಡಿದ್ದಾರೆ. ಈ ಅಂಕಿ

ಅಂಶವು ಸದಸ್ಯೆಯರ ಆರ್ಥಿಕ ಸಂಪಾದನೆ ಮತ್ತು ಸಂಪನ್ಮೂಲಗಳ ಕ್ರೋಢೀಕರಣದಿಂದ ಅವರು ಆರ್ಥಿಕವಾಗಿ ಸಬಲೀಕರಣಗೊಂಡಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತದೆ.

ಕಾರ್ಯಕ್ಷೇತ್ರದಲ್ಲಿ ಸದಸ್ಯರ ಸಂದರ್ಶನ ನಡೆಸಿದಾಗ ಮಹಿಳೆಯರ ಆರ್ಥಿಕ ಸಬಲೀಕರಣವನ್ನು ಪುಷ್ಟೀಕರಿಸುವ ಇನ್ನಷ್ಟು ಅಂಶಗಳು ಹೀಗಿವೆ.

ಹಾಲಿನ ಹಣ ಹಾಗೂ ಅಂಚಿನ ಹಣ ನೇರವಾಗಿ ಸದಸ್ಯೆಯರ ಖಾತೆಗೆ ಜಮೆಯಾಗುವ ಕಾರಣ ಸದಸ್ಯೆಯರ ಆರ್ಥಿಕ ಸ್ವಾತಂತ್ರ್ಯ ತುಂಬಾ ಹೆಚ್ಚಿದೆ. ಈಗ ಅವರು ಹಣಕ್ಕೆ ಪತಿಯ ಆದಾಯ ಅಥವಾ ಮನೆಯ ಇತರ ಸದಸ್ಯರ ಆದಾಯವನ್ನು ಅವಲಂಬಿಸಬೇಕಾಗಿಲ್ಲ.

"ಮಹಾ ನಂದಿನಿ" ನವೋದಯ, ಸ್ತ್ರೀಶಕ್ತಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಮುಂತಾದ ಸ್ವ ಸಹಾಯ ಗುಂಪುಗಳಿಗೆ ಸದಸ್ಯರು ಸೇರಿದ್ದರಿಂದ ಬಡ್ಡಿರಹಿತ ಸಾಲ ಸೌಲಭ್ಯ ಹಾಗೂ ಹಣ ಉಳಿತಾಯ ಸೌಲಭ್ಯಗಳು ದೊರಕಿವೆ. ಹಣ ಉಳಿತಾಯದಿಂದಾಗಿ ಆರ್ಥಿಕ ಸ್ವಾವಲಂಬನೆ ಹೆಚ್ಚಿದೆ.

ಕೃಷಿಗೆ ಪೂರಕವಾಗಿ ಹೈನುಗಾರಿಕೆಯನ್ನು ಕೈಗೊಂಡದ್ದರಿಂದ, ಕೃಷಿ ಕಾರ್ಯಗಳಿಗೆ ಬೇಕಾದ ಗೊಬ್ಬರ ಹೈನುಗಾರಿಕೆಯಿಂದಲೇ ಸಿಗುತ್ತದೆ. ಅಲ್ಲದೆ ಮನೆಗೆ ಬೇಕಾದ ಗೋಬರ್ ಗ್ಯಾಸ್, ಹಾಲು ಇದರಿಂದಲೇ ಸಿಗುತ್ತದೆ. ಹಾಗೂ ಇದರಿಂದ ಹಣದ ಉಳಿತಾಯವಾಗುತ್ತದೆ. 'ಅಂತರ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ'ದ ಅತೀ ಹೆಚ್ಚು ಹಾಲು ಸರಬರಾಜು ಮಾಡುವ ಸದಸ್ಯೆಯರಲ್ಲಿ ಒಬ್ಬರಾದ 'ನಿಶ್ಮಿತ' ರವರ ಪ್ರಕಾರ ಹೈನುಗಾರಿಕೆಯಿಂದ ಕೃಷಿಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಹೊರಗಿನಿಂದ ಗೊಬ್ಬರ ತರಿಸುವ ಅಗತ್ಯವಿಲ್ಲ ಹಾಗೂ ಕೆಲಸಕ್ಕೆ ಹೊರಗೆ ಹೋಗಬೇಕೆಂದಿಲ್ಲ. ಹೈನುಗಾರಿಕೆಯು ಇತರರಿಗೆ ಉದ್ಯೋಗ ಅವಕಾಶವನ್ನೂ ಕಲ್ಪಿಸಿಕೊಡುತ್ತದೆ. ಮನೆಗೆ ಬೇಕಾದ ಸಾಮಾಗ್ರಿಗಳಾದ ಶೀತಲಪೆಟ್ಟಗೆ, ಬಟ್ಟೆ ಒಗೆಯುವ ಯಂತ್ರ ಮುಂತಾದವುಗಳನ್ನು ಖರೀದಿಸಲು ಸಾಧ್ಯವಾಗುತ್ತದೆ. ಅಲ್ಲದೆ ಹಾಲಿನ ಸರಬರಾಜಿಗಾಗಿ ಹಾಗೂ ಕೃಷಿ ಕಾರ್ಯಗಳಿಗಾಗಿ ದೊಡ್ಡ ಮಟ್ಟದ ವಾಹನ ಖರೀದಿಯು ಕೂಡ ಸಾಧ್ಯವಾಗಿದೆ. ಹೈನುಗಾರಿಕೆಯು ಸದಸ್ಯರನ್ನು ಸಮಾಜದಲ್ಲಿ ಗುರುತಿಸಲ್ಪಡುವ ವ್ಯಕ್ತಿಯನ್ನಾಗಿ ಮಾಡುತ್ತದೆ.

ಹಣ ಬ್ಯಾಂಕಿಗೆ ಜಮೆ ಮಾಡುವುದು, ಬ್ಯಾಂಕಿನಿಂದ ಹಣ ತೆಗೆಯುವುದು, ಸ್ವಸಹಾಯ ಸಂಘಗಳಲ್ಲಿ ಹಣ ಜಮೆ ಮಾಡುವುದು, ಬ್ಯಾಂಕ್ ಪಾಸ್ ಪುಸ್ತಕವನ್ನು ನವೀಕರಿಸುವುದು, ಸಾಲ ಮರುಪಾವತಿ ಮಾಡುವುದು, ಕುಟುಂಬದ ಖರ್ಚು ವೆಚ್ಚಗಳನ್ನು ಭರಿಸುವುದು ಮುಂತಾದ ಹಣಕಾಸಿನ ವ್ಯವಹಾರಗಳು ಮಹಿಳೆಯರಲ್ಲಿ ಹಣಕಾಸಿನ ವಿಷಯದಲ್ಲಿ ಅವರ ಧೈರ್ಯ ಮತ್ತು


ನಂಬಿಕೆಯನ್ನು ಹೆಚ್ಚಿಸಿದೆ. ಮೇಲಿನ ಈ ಎಲ್ಲಾ ಅಂಶಗಳಿಂದ ಮಹಿಳೆಯರು ಬಹಳ ಗುರುತರದ ಮಟ್ಟದಲ್ಲಿ ಆರ್ಥಿಕ ಸಬಲೀಕರಣ ಗೊಂಡಿದ್ದಾರೆ ಎಂಬುದನ್ನು ಧೃಡೀಕರಿಸುತ್ತದೆ.

ಕೋಷ್ಟಕ 4.4: ಮಾದರಿಯ ಪ್ರತಿಸ್ಪಂದಕರು ಗ್ರಹಿಸುವಂತೆ ಮಹಿಳೆಯರ ಸಾಮಾಜಿಕ ಸಬಲೀಕರಣ

ವಿವರ	ಹೆಚ್ಚಿದೆ	ತಟಸ್ಥ	ಒಟ್ಟು
ಮಕ್ಕಳ ವಿದ್ಯಾಭ್ಯಾಸದ ಅರಿವು	76%	24%	100%
ಆರೋಗ್ಯ ಮಾಹಿತಿಯ ಅರಿವು	63%	37%	100%
ಹೆಂಗಸರ ವಿದ್ಯಾಭ್ಯಾಸದ ಅರಿವು	72%	28%	100%
ಸಮಾಜದಲ್ಲಿ ಮಾನ್ಯತೆ	54%	46%	100%
ನೈರ್ಮಾಲ್ಯದ ಸೌಲಭ್ಯಗಳ ಅರಿವು	52%	48%	100%
ಆಹಾರ ಮತ್ತು ಪೋಷಣೆ ಅರಿವು	55%	45%	100%
ಕುಟುಂಬ ಯೋಜನೆ ಅರಿವು	58%	42%	100%
ಕಾನೂನಿನ ಅರಿವು	51%	49%	100%
ಸಾಮಾಜಿಕ ಒಡನಾಟ	74%	26%	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.4



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕ 4.4ರಂತೆ ಮಹಿಳಾ ಸದಸ್ಯೆಯರ ಆರ್ಥಿಕ ಸಬಲೀಕರಣದೊಂದಿಗೆ ಸಾಮಾಜಿಕ ಸಬಲೀಕರಣವೂ ಆಗಿದೆ ಎಂಬುದನ್ನು ತೋರಿಸುತ್ತದೆ. ಸ್ವೆಪ್ ಪ್ರಾಯೋಜಿತ ಈ ಕಾರ್ಯಕ್ರಮಗಳು ಮಹಿಳೆಯರ ಸಾಮಾಜಿಕ ಸಬಲೀಕರಣಕ್ಕೆ ಕಾರಣವಾಗಿವೆ.

ಈ ಸಾಮಾಜಿಕ ಅರಿವಿನ ಕಾರ್ಯಕ್ರಮಗಳ ಬಗ್ಗೆ ಸಂದರ್ಶನ ನಡೆಸಿದ ವೇಳೆ ಸಂಗ್ರಹಿಸಿದ ಸದಸ್ಯರ ಅಭಿಪ್ರಾಯಗಳು ಹೀಗಿವೆ.

ಎಲ್ಲರ ಪರಿಚಯವಾಗುತ್ತದೆ. ಹೊರಗಿನ ಪ್ರಪಂಚದ ಅರಿವಾಗುತ್ತದೆ. ಹೊರಗಿನ ವಿಷಯಗಳು ತಿಳಿಯುತ್ತವೆ ಹಾಗೂ ಸಾಮಾಜಿಕ ಒಡನಾಟ ಹೆಚ್ಚುತ್ತದೆ.

ಸಮಾಜದಲ್ಲಿ ಮಾನ್ಯತೆ ಸಿಗುತ್ತದೆ, ಜನರು ನಮ್ಮನ್ನು ಗುರುತಿಸುವ ದೃಷ್ಟಿಕೋನ ಬದಲಾಗುತ್ತದೆ. ಮೊದಲು ವೈಯುಕ್ತಿಕ ನೆಲೆಯ ಅಸ್ಮಿತೆಯಿಂದ ಗುರುತಿಸಲ್ಪಡುತ್ತಿದ್ದವರು ಈಗ ಸಹಕಾರ ಸಂಘಗಳ ಸಂಘಟನಾ ಅಸ್ಮಿತೆಯಲ್ಲಿ ಗುರುತಿಸಲ್ಪಡುತ್ತಾರೆ.

ಕುಟುಂಬ ಯೋಜನೆಯ ಅರಿವು ಸದಸ್ಯೆಯರಿಗೆ ಆಗಿದೆ. ಹಾಗಾಗಿ ಈಗ ಸದಸ್ಯೆಯರು ಎರಡು ಮಕ್ಕಳಿಗೇ ತಮ್ಮ ಸಂತಾನವನ್ನು ಸೀಮಿತಗೊಳಿಸಿದ್ದಾರೆ.

ಮೊದಲು ಮನೆಯಿಂದ ಹೊರಗಡೆ ಬಂದು ಬೇರೆಯವರ ಜೊತೆ ಬೆರೆಯದಿರುತ್ತಿದ್ದವರು ಈಗ ಎಲ್ಲರೊಂದಿಗೆ ಬೆರೆತು ಮಾತನಾಡುವಷ್ಟು ಸಾಮರ್ಥ್ಯವನ್ನು ಹೊಂದಿದ್ದಾರೆ. ಇವೆಲ್ಲಕ್ಕೂ ಕಾರಣ ಕೆಲವು ಸದಸ್ಯೆಯರು ಸಹಕಾರಿ ಸಂಘದ ಕಛೇರಿ ಸಿಬ್ಬಂದಿಯಾಗಿ ಗಳಿಸಿದ ಅನುಭವದಿಂದ.

ಸದಸ್ಯರು ತಮ್ಮ ಮಕ್ಕಳು ತಮ್ಮಂತೆ ಅವಿದ್ಯಾವಂತರಾಗಬಾರದೆಂದು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ಕೊಡುತ್ತಿದ್ದಾರೆ.

ಸದಸ್ಯೆಯರ ಪ್ರಕಾರ ಸಂಘದ ಸದಸ್ಯೆಯರಾದ ನಂತರ ಮನೆಕೆಲಸ ಹೆಚ್ಚಿದೆ. ಮನೆ ಕೆಲಸದ ಜೊತೆಗೆ ಪಶುಗಳ ನಿರ್ವಹಣೆಯ ಕೆಲಸ ಕೂಡಾ ಹೆಚ್ಚಿ ಸದಸ್ಯೆಯರ ಕೆಲಸದ ಹೊಣೆಯನ್ನು ಹೆಚ್ಚಿಸಿದೆ.

ಸಂಘದಲ್ಲಿ ನಡೆದ 'ಮಹಿಳೆ ಮತ್ತು ಪೋಲಿಸ್', 'ಮಹಿಳೆ ಮತ್ತು ಕಾನೂನು' ಎಂಬ ಕಾನೂನಿನ ಅರಿವಿನ ಕಾರ್ಯಾಗಾರಗಳು ಕಾನೂನಿನ ಬಗ್ಗೆ ಮತ್ತು ಪೋಲೀಸ್ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಮೂಡಿಸಿವೆ.

ಸಹಕಾರಿ ಸಂಘಗಳಲ್ಲಿ ಆಚರಿಸುವ ವಿವಿಧ ಧರ್ಮಗಳ ಹಬ್ಬಗಳಿಂದಾಗಿ ಸದಸ್ಯೆಯರಲ್ಲಿ ಸಹಿಷ್ಣುತೆ, ಸಮನ್ವಯ, ಸಹಬಾಳ್ವೆಯ ಅರಿವು ಉಂಟಾಗಿ ಸಹಕಾರ ತತ್ವಗಳ ಪೂರ್ಣ ಅನುಷ್ಠಾನವಾಗುತ್ತದೆ. ಎಲ್ಲಾ ಧರ್ಮದವರು ಸಹಬಾಳ್ವೆ ನಡೆಸುವಂತಾಗಿದೆ.


ಸದಸ್ಯೆಯರು ತಮ್ಮ ಹಸುಗಳು, ಅವುಗಳ ಹಟ್ಟಿ ಮತ್ತು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುತ್ತಿದ್ದಾರೆ. ಮಲೇರಿಯಾ, ಡೆಂಗ್ಯೂ ಮುಂತಾದ ಸಾಂಕ್ರಾಮಿಕ ರೋಗಗಳ ಹಾವಳಿಯ ಅರಿವು ಅವರಿಗಿದೆ.

ಕೋಷ್ಟಕ 4.5: ಮಾದರಿಯ ಪ್ರತಿಸ್ಪಂದಕರು ಗ್ರಹಿಸಿದಂತೆ ಮಹಿಳೆಯರ ರಾಜಕೀಯ ಕ್ಷೇತ್ರದಲ್ಲಿ ಸಬಲೀಕರಣ

ವಿಷಯ	ಹೆಚ್ಚಿದೆ	ತಟಸ್ಥ	ಒಟ್ಟು
ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವಿಕೆ	65%	35%	100%
ಚುನಾವಣೆಗೆ ನಾಮ ನಿರ್ದೇಶನ	68%	32%	100%
ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವಿಕೆ	72%	28%	100%
ಸಂಘ ಸಂಸ್ಥೆಗಳ ಅಧ್ಯಕ್ಷ	54%	46%	100%
ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ	80%	20%	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.5



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಂತೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರ ಸಮೀಕ್ಷೆಯಿಂದ ಕಂಡು ಬಂದ ಅಂಶವೆಂದರೆ ಮಹಿಳೆಯರು ಸಹಕಾರ ಸಂಘಗಳಿಗೆ ಸೇರಿದ ನಂತರ ರಾಜಕೀಯವಾಗಿಯೂ ಸಬಲೀಕರಣ ಗೊಂಡಿರುವುದು. ಮೇಲಿನ ಕೋಷ್ಟಕದ ಪ್ರಕಾರ ಅನೇಕ

ಸದಸ್ಯೆಯರು ರಾಜಕೀಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಚುನಾವಣೆಗೆ ನಿಂತು ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಆಗಿದ್ದಾರೆ. ಉದಾಹರಣೆಗೆ 'ಪಿಲಿಗೋಡು' ಸಹಕಾರಿ ಸಂಘದ 'ಆಶಾಲತಾ', 'ಅಂತರ ಮಹಿಳಾ ಸಹಕಾರಿ ಸಂಘ'ದ 'ರಾಜೀವಿ', 'ಕೆಂಜಾರು' ಮಹಿಳಾ ಸಹಕಾರಿ ಸಂಘದ ಶ್ರೀಮತಿ 'ವಿನೋದ' ಮುಂತಾದವರು ಪಂಚಾಯತ್ ಚುನಾವಣೆಗೆ ನಿಂತು ಉಪಾಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಹಾಗೂ ರಸ್ತೆ ದುರಸ್ತಿ, ಬೀದಿ ದೀಪ ಅಳವಡಿಕೆ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲದೆ ಈ ಮಹಿಳೆಯರು ಚುನಾವಣೆಗೆ ನಿಂತಾಗ ಸಂಬಂಧಪಟ್ಟ ಮಹಿಳಾ ಸಹಕಾರಿ ಸಂಘಗಳ ಉಳಿದ ಸದಸ್ಯೆಯರು ಅವರೊಂದಿಗೆ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆ ಎಂಬ ಅಂಶ ಸಮೀಕ್ಷೆಯಿಂದ ತಿಳಿದು ಬಂದಿದೆ. ಅಲ್ಲದೆ ಈ ಸದಸ್ಯೆಯರು ಹೇಳುವ ಪ್ರಕಾರ, ಚುನಾವಣೆಗಳಲ್ಲಿ ಅಲ್ಲದೆ ಅವರು ಬೇರೆ ಬೇರೆ ಸಂಘ ಸಂಸ್ಥೆಗಳಲ್ಲಿಯೂ, (ಉದಾಹರಣೆಗೆ- ಲಯನ್ಸ್ ಕ್ಲಬ್ ಮತ್ತು ರೋಟರಿ ಕ್ಲಬ್) ಸದಸ್ಯೆಯರಾಗಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಏನೂ ವಿದ್ಯಾಭ್ಯಾಸವಿಲ್ಲದ ಮಹಿಳೆಯೊಬ್ಬರು ಹಾಲಿನ ಸಹಕಾರ ಸಂಘದ ಅಧ್ಯಕ್ಷೆಯೂ ಆಗಿದ್ದಾರೆ ಎನ್ನುವುದು ಮಹಿಳೆಯರು ಸಹಕಾರ ಸಂಘಗಳಿಂದಾಗಿ ರಾಜಕೀಯ ನಿರ್ಧಾರದ ಪ್ರಕ್ರಿಯೆಯಲ್ಲಿ ಹಾಗೂ ಆಡಳಿತದಲ್ಲಿ ಭಾಗವಹಿಸಿ ಬಹುಮಟ್ಟಿಗೆ ರಾಜಕೀಯ ಕ್ಷೇತ್ರದಲ್ಲಿ ಸಬಲೀಕರಣಗೊಂಡಿದ್ದಾರೆ ಎಂಬುದನ್ನು ಸ್ಪಷ್ಟೀಕರಿಸುತ್ತದೆ.

ಕೋಷ್ಟಕ 4.6: ಮಾದರಿಯ ಪ್ರತಿಸ್ಪಂದಕರು ಗ್ರಹಿಸಿದಂತೆ ಮಹಿಳೆಯರ ಕೌಶಲ್ಯ ಅಭಿವೃದ್ಧಿ

ಕ್ರ.ಸಂ	ವಿವರ	ಹೆಚ್ಚಿದೆ	ತಟಸ್ಥ	ಒಟ್ಟು
1	ಯೋಜನಾ ಕೌಶಲ್ಯ	62%	38%	100%
2	ಸಂಘಟನಾ ಕೌಶಲ್ಯ	68%	32%	100%
3	ವಾಕ್ ಸಾಮರ್ಥ್ಯ	75%	25%	100%
4	ಹಣ ನಿರ್ವಹಣೆ ಕೌಶಲ್ಯ	82%	18%	100%
5	ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯ	73%	27%	100%

ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದಂತೆ, ಸದಸ್ಯರ ಅನಿಸಿಕೆಯ ಪ್ರಕಾರ ಹೇಳುವ ಪ್ರಕಾರ ಅವರ ಯೋಜನೆ, ಸಂಘಟನೆ ಮತ್ತು ಸಂವಹನಾ ಸಾಮರ್ಥ್ಯಗಳು ಹೆಚ್ಚಿವೆ. ಸದಸ್ಯೆಯರು, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿಯೋಜನೆ, ನವೋದಯ ಸಹಕಾರ ಸಂಘ, ಸ್ತ್ರೀ ಶಕ್ತಿ ಸಂಘಟನೆ ಮುಂತಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ತಮ್ಮ ಸಂಘಟನಾ ಸಾಮರ್ಥ್ಯ

ಹೆಚ್ಚಿದೆ ಎನ್ನುತ್ತಾರೆ. ಅಲ್ಲದೆ ಇಂತಹ ಸಂಘಟನೆಗಳಿಗೆ ಸೇರಿ, ಸಭೆ ಸಮಾರಂಭಗಳಲ್ಲಿ ಅವರಿಗೆ ಮಾತನಾಡಲು ಅವಕಾಶ ಸಿಕ್ಕಿ ಅವರ ಸಂವಹನಾ ಸಾಮರ್ಥ್ಯ ಹೆಚ್ಚಿದೆ ಎನ್ನುತ್ತಾರೆ.

ಇತ್ತೀಚಿನ ವರೆಗೂ ಗ್ರಾಮೀಣ ಮಹಿಳೆಯರು ನಾಟಿ ಹಸುಗಳನ್ನೇ ನಂಬಿ ಜೀವನ ಸಾಗಿಸುತ್ತಿದ್ದವರು, ಈಗ ಸಹಕಾರಿ ಸಂಘಗಳನ್ನು ರಚಿಸಿಕೊಂಡು, ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಂಡು, ತಮ್ಮೊಳಗೆ ವಿಚಾರ ವಿನಿಮಯ ಮಾಡಿಕೊಂಡು ಹೈನುಗಾರಿಕೆಯನ್ನು ಮಾಡುತ್ತಿದ್ದಾರೆ. ಅಲ್ಲದೆ ಹೈನುಗಾರಿಕೆಯಲ್ಲಿ ಹಾಲು ಕರೆಯುವ ಯಂತ್ರ, ಹುಲ್ಲು ಹಾಗೂ ಹಾಳೆ ಕತ್ತರಿಸುವ ಯಂತ್ರ ಮುಂತಾದ ಆಧುನಿಕ ಸಲಕರಣೆಗಳನ್ನು ಬಳಸಿ ವಿದೇಶೀ ತಳಿಯ ಹಸುಗಳನ್ನು ಸಾಕಿ ತಮ್ಮ ಆದಾಯ ವೃದ್ಧಿಸಿಕೊಳ್ಳುತ್ತಿದ್ದಾರೆ. ಇದು ಅವರ ಯೋಜನಾ ಕೌಶಲ್ಯ ಮತ್ತು ಸಂಘಟನಾ ಕೌಶಲ್ಯದ ಬೆಳವಣಿಗೆಯನ್ನು ತೋರಿಸುತ್ತದೆ.

ಇವಲ್ಲದೆ ಕ್ಷೇತ್ರಕಾರ್ಯದಲ್ಲಿ ಸದಸ್ಯೆಯರಿಂದ ತಿಳಿದು ಬಂದ ಅಂಶವೇನೆಂದರೆ ಅವರ ಹಣ ನಿರ್ವಹಣಾ ಕೌಶಲ್ಯ ಮತ್ತು ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯ ಕೂಡ ಹೆಚ್ಚಿರುವುದು. ಸದಸ್ಯರೊಬ್ಬರ ಹೇಳಿಕೆಯ ಪ್ರಕಾರ, ಮನೆಯ ವಿಚಾರದ ನಿರ್ಧಾರಗಳು, ಹಣಕಾಸಿನ ನಿರ್ಧಾರಗಳು ಹಾಗೂ ಮಕ್ಕಳ ವಿದ್ಯಾಭ್ಯಾಸದ ಕುರಿತಾದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಶಕ್ತರಾಗಿದ್ದಾರೆ. ಹಾಗೂ ಹಣ ನಿರ್ವಹಣೆಯ ಕೌಶಲ್ಯವೂ ಹೆಚ್ಚಿದೆ. ಇವೆಲ್ಲವೂ ಅವರ ಆರ್ಥಿಕ ಸ್ವಾವಲಂಬನೆಯಿಂದ ಉಂಟಾದ ಬೆಳವಣಿಗೆಗಳಾಗಿವೆ.

4.7 ಸಹಕಾರ ಸಂಘಗಳ ಕಾರ್ಯವೈಖರಿಯ ಮೇಲೆ ಮಹಿಳಾ ಸಬಲೀಕರಣ ಚಟುವಟಿಕೆಗಳ ಪರಿಣಾಮ:

ಹಾಲು ಉತ್ಪಾದಕರ ಸಹಕಾರ ಸಂಘಗಳ ಚಟುವಟಿಕೆಯು ಮಹಿಳೆಯರ ಆರ್ಥಿಕ, ಸಮಾಜಿಕ ಹಾಗೂ ರಾಜಕೀಯ ಸಬಲೀಕರಣದ ಮೇಲೆ ಎಷ್ಟು ಪರಿಣಾಮ ಬೀರಿದೆಯೋ, ಮಹಿಳೆಯರ ಸಬಲೀಕರಣದ ಪ್ರಕ್ರಿಯೆಯು ಸಹಕಾರ ಸಂಘಗಳ ಪ್ರಗತಿಯ ಮೇಲೆ ಅಷ್ಟೇ ಪರಿಣಾಮವನ್ನು ಬೀರಿವೆ. ಮೊಟ್ಟಮೊದಲಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯತ್ವದ ದಾಖಲಾತಿಯಲ್ಲಿ ಗಣನೀಯವಾದ ಸುದಾರಣೆಯಾಯಿತು. ಉದಾಹರಣೆ ತೆಗೆದುಕೊಳ್ಳುವುದಾದರೆ, ಮಾದರಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳ ಕ್ಷೇತ್ರ ಸಮೀಕ್ಷೆಯನ್ನು ಮಾಡಿದ ಸಂದರ್ಭ ಗಮನಿಸಿದ ಅಂಶವೆಂದರೆ, ಒಂದು ಸಹಕಾರಿ ಸಂಘವನ್ನು ಉಳಿದು ಸಮೀಕ್ಷೆ ನಡೆಸಿದ ಉಳಿದ ಎಲ್ಲಾ ಮಾದರಿ ಸಹಕಾರ ಸಂಘಗಳಲ್ಲೂ ಸದಸ್ಯತ್ವದ ಸಂಖ್ಯೆಯ ಏರಿಕೆಯಾಗಿದೆ ಆದರಲ್ಲೂ ಬಂದಾರು ಹಾಲು ಉತ್ಪಾದಕರ ಮಹಿಳಾ ಸಹಕಾರಿ

ಸಂಘದ ಸದಸ್ಯತ್ವದ ಸಂಖ್ಯೆಯು 180 ರಿಂದ 371 ಕ್ಕೆ ಏರಿರುವುದು, ಸಹಕಾರಿ ಸಂಘಗಳ ಅಭಿವೃದ್ಧಿಯನ್ನು ತೋರಿಸುತ್ತದೆ.

ಅದೇ ತರಹ ಈ ಹಾಲು ಉತ್ಪಾದಕರ ಸಹಕಾರ ಸಂಘಗಳ ಹಾಲಿನ ಉತ್ಪಾದನೆಯ ಪ್ರಮಾಣವು ಗಣನೀಯವಾಗಿ ಏರಿದೆ ಬಂದಾರು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘವನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಈ ಸಹಕಾರಿ ಸಂಘವು ದಿನಕ್ಕೆ ಸರಾಸರಿ 2400 ಲೀಟರ್‌ಗಳಷ್ಟು ಹಾಲನ್ನು ಸದಸ್ಯರಿಂದ ಸಂಗ್ರಹಿಸುವುದು ಹಾಲಿನ ಉತ್ಪಾದನೆಯಲ್ಲಿ ಗಣನೀಯ ಪ್ರಗತಿಯನ್ನು ತೋರಿಸುತ್ತದೆ.

ಅಲ್ಲದೆ ಈ ಮಾದರಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳಲ್ಲಿನ ಹೆಚ್ಚಿನ ಸಹಕಾರಿ ಸಂಘಗಳು ತಮ್ಮದೇ ಆದ ಸ್ವಂತ ಕಟ್ಟಡದಲ್ಲಿ ವ್ಯವಹಾರ ನಡೆಸುವಷ್ಟು ಅಭಿವೃದ್ಧಿಯನ್ನು ಕಂಡುಕೊಂಡಿವೆ.

ಭಾರತ ಸರ್ಕಾರವು ಕೂಡಾ ಸ್ಟೆಪ್, ಕ್ಷೀರ ಸಂಜೀವಿನಿ ಮುಂತಾದ ಕಾರ್ಯಕ್ರಮಗಳ ಮೂಲಕ ಈ ಸಹಕಾರಿ ಸಂಘಗಳ ಅಸ್ತಿತ್ವವನ್ನು ಉತ್ತೇಜಿಸಿ ಅವುಗಳ ಅಭಿವೃದ್ಧಿಗೆ ಕಾರಣರಾಗಿದೆ.


4.8: ಪ್ರತಿಸ್ಪಂದಕರು ಎದುರಿಸುತ್ತಿರುವ ಸಮಸ್ಯೆಗಳು

ಕೋಷ್ಟಕ 4.8.1: ಪತಿಯ ಮತ್ತು ಕುಟುಂಬ ಸದಸ್ಯರ ಸಹಕಾರ

ಪತಿಯ ಹಾಗೂ ಕುಟುಂಬಸ್ಥರ ಸಹಕಾರ	ಒಟ್ಟು ಸದಸ್ಯೆಯರು	ಶೇಕಡಾವಾರು
ಇದೆ	64	64%
ಇಲ್ಲ	36	36%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.8.1



ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.8.1ರಂತೆ ಹೆಚ್ಚಿನ ಸದಸ್ಯರು ಹೇಳುವ ಪ್ರಕಾರ (64%) ಪತಿಯ ಹಾಗೂ ಕುಟುಂಬ ಸದಸ್ಯರ ಬೆಂಬಲ ಅವರಿಗೆ ಸಿಗುತ್ತಿದೆ. ಹೆಚ್ಚಾಗಿ ಕರೆದ ಹಾಲನ್ನು ಹಾಲಿನ ಸಂಘಗಳಿಗೆ ಸದಸ್ಯರ ಪರವಾಗಿ ಅವರ ಪತಿ ಅಥವಾ ಕುಟುಂಬದ ಸದಸ್ಯರು ಹಾಲು ಸರಬರಾಜು ಮಾಡಿ ಅವರಿಗೆ ಸಹಕರಿಸುತ್ತಾರೆ.

ಕೋಷ್ಟಕ 4.8.2: ಪಶುವೈದ್ಯ ಸೇವೆಗಳ ಲಭ್ಯತೆ

ಸಕಾಲಿಕ ವೆಟರಿನರಿ ಸೇವೆಗಳ ಲಭ್ಯ	ಒಟ್ಟು ಸದಸ್ಯೆಯರು	ಶೇಕಡಾವಾರು
ದೊರಕುತ್ತಿವೆ	58	58%
ಇಲ್ಲ	42	42%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.8.2ರಂತೆ ಶೇಕಡ 58 ಸದಸ್ಯೆಯರು ಪಶು ವೈದ್ಯ ಸೇವೆಗಳು ಸರಿಯಾಗಿ ದೊರಕುತ್ತಿವೆ ಎಂದು ಹೇಳುತ್ತಾರೆ. ಆದರೆ ಕೆಲವು ತೀರಾ ಹಳ್ಳಿಗಳಲ್ಲಿರುವ ಸದಸ್ಯೆಯರ ಹೇಳಿಕೆಯ ಪ್ರಕಾರ ಪಶುಗಳಿಗೆ ಸಕಾಲಿಕ ವೆಟರಿನರಿ ಸೇವೆಗಳ ಸೌಲಭ್ಯ ಸಿಗುತ್ತಿಲ್ಲ. ತೀರಾ ಹಳ್ಳಿಗಳಾದ ಕಾರಣ ಪಶುವೈದ್ಯರು ಕರೆದ ತಕ್ಷಣ ಬರುವುದಿಲ್ಲ. ಖಾಸಗಿ ವೈದ್ಯರುಗಳನ್ನು ಕರೆಸಿದರೆ ಅವರು ಹೆಚ್ಚಿನ ಶುಲ್ಕ ಪಡೆಯುತ್ತಾರೆ.

ಕೋಷ್ಟಕ 4.8.3: ಸಾಲ ಸೌಲಭ್ಯಗಳ ಲಭ್ಯತೆ

ಸಾಲದ ಸುಲಭ ಲಭ್ಯತೆ	ಒಟ್ಟು ಸದಸ್ಯೆಯರು	ಶೇಕಡಾವಾರು
ಇದೆ	72	72%
ಇಲ್ಲ	28	28%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ಕೋಷ್ಟಕ 4.8.3ರಂತೆ ಹೆಚ್ಚಿನ ಸದಸ್ಯೆಯರು (72%) ಸಾಲ ಸೌಲಭ್ಯ ಸುಲಭವಾಗಿ ಸಿಗುತ್ತದೆ ಎನ್ನುತ್ತಾರೆ. ಆದರೆ ಕೆಲವು ಗ್ರಾಮೀಣ ಪ್ರದೇಶಗಳ ಜನರು ಸಾಲ ಪಡೆಯುವ ಸಮಯದಲ್ಲಿ ಪಹಣಿ ಪತ್ರ (ಆರ್.ಟಿ.ಸಿ)ದ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಏಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಮನೆಗಳು ಕೂಡು ಕುಟುಂಬವಾದ್ದರಿಂದ, ಮನೆಯ ಪಹಣಿ


ಪತ್ರ (ಆರ್.ಟಿ.ಸಿ)ಯು ಮನೆಯ ಯಜಮಾನನ ಹೆಸರಿನಲ್ಲಿರುತ್ತದೆ. ಆರ್.ಟಿ.ಸಿಯು ಸದಸ್ಯರ ಹೆಸರಿನಲ್ಲಿರದ ಕಾರಣ ಸಾಲ ಸುಲಭವಾಗಿ ಸಿಗುವುದಿಲ್ಲ.

ಕೋಷ್ಟಕ 4.8.4: ಸಾಲ ಮರುಪಾವತಿಯಲ್ಲಿ ಅನುಭವಿಸುವ ತೊಂದರೆ

ವಿವರ	ಒಟ್ಟು ಸದಸ್ಯೆಯರು	ಶೇಕಡಾವಾರು
ಹಾಲು ಉತ್ಪಾದನೆ ಕಡಿಮೆಯಾಗಿರುವುದು	20	20%
ಸೂಕ್ತ ಪ್ರೋತ್ಸಾಹ ಧನ ಸಿಗದಿರುವುದು	32	32%
ಪಶುವಿನ ಆರೋಗ್ಯ ಸಮಸ್ಯೆ	38	38%
ಪಶುವಿಗೆ ಸೂಕ್ತ ಆಹಾರ ಸಿಗದಿರುವುದು	10	10%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ:4.8.4



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದ ಪ್ರಕಾರ ಸಮೀಕ್ಷೆಯಲ್ಲಿ ತಿಳಿದು ಬಂದ ಅಂಶವೇನೆಂದರೆ ಹೆಚ್ಚಾಗಿ ಪಶುವಿನ ಆರೋಗ್ಯ ಸಮಸ್ಯೆಯಿಂದಾಗಿ (38%) ಸಾಲ ಮರುಪಾವತಿಯಲ್ಲಿ ಜನರಿಗೆ ತೊಂದರೆಯುಂಟಾಗುತ್ತಿದೆ. ಸದಸ್ಯೆಯರು ಹೇಳುವ ಪ್ರಕಾರ ಹಸುಗಳು 'ಕಾಲು ಬಾಯಿ ಜ್ವರ' ಹಾಗೂ ಇತರ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿದ್ದು ಇದರಿಂದಾಗಿ ಹಾಲು ಉತ್ಪಾದನೆಯ ಮಟ್ಟ ಕಡಿಮೆಯಾಗಿದೆ (20%). ಸರಕಾರದಿಂದ ಸೂಕ್ತ ಪ್ರೋತ್ಸಾಹ ಧನ ಸಿಗದಿರುವುದು (32%)

ಕೂಡಾ ಸಾಲ ಮರು ಪಾವತಿಯ ವಿಳಂಬಕ್ಕೆ ಕಾರಣ. ಸಮೀಕ್ಷೆಯಲ್ಲಿ ಸದಸ್ಯೆಯರು ಹೇಳುವ ಪ್ರಕಾರ ಪ್ರೋತ್ಸಾಹಧನ ಹಾಗೂ ಅಂಚಿನ ಹಣದ ಸೌಲಭ್ಯಗಳಿದ್ದರೂ ಕೂಡಾ ಈ ಸೌಲಭ್ಯಗಳು ಸಮಯಕ್ಕೆ ಸರಿಯಾಗಿ ಅವಶ್ಯಕತೆಗಳಿಗೆ ಅನುಗುಣವಾಗಿ ಸದಸ್ಯೆಯರಿಗೆ ಸಿಗದೇ ಇರುವುದು ದುರದೃಷ್ಟಕರ.

ಪಶುವಿಗೆ ಸೂಕ್ತ ಆಹಾರ ಸಿಗದಿರುವುದು ಕೂಡಾ ಸಾಲ ಮರುಪಾವತಿಯ ವಿಳಂಬಕ್ಕೆ ಕಾರಣ ಎಂಬುದು ಸದಸ್ಯೆಯರ ಅಭಿಪ್ರಾಯ.

ಕೋಷ್ಟಕ 4.8.5: ಸಾಲಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಗಳ ಅರಿವು

ವಿಮಾ ಪಾಲಿಸಿಗಳ ಅರಿವು	ಒಟ್ಟು ಸದಸ್ಯೆಯರು	ಶೇಕಡಾವಾರು
ಇದೆ	44	44%
ಇಲ್ಲ	56	56%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ


ಹೆಚ್ಚಿನ ಸದಸ್ಯೆಯರಿಗೆ (56%) ವಿಮಾ ಪಾಲಿಸಿಗಳ ಅರಿವಿಲ್ಲದ ಕಾರಣ ಅದರ ಲಾಭ ಪಡೆದಿಲ್ಲ. ತೀರಾ ಗ್ರಾಮೀಣ ಪ್ರದೇಶದ ಸದಸ್ಯೆಯರೊಬ್ಬರು ಹೇಳುವಂತೆ ಅವರ ನಾಟಿ ಹಸುಗಳು ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಸುನೀಗಿದ್ದು ಅವರು ವಿಮೆಯನ್ನು ಮಾಡಿಸದೆ ನಷ್ಟ ಅನುಭವಿಸಿದ್ದಾರೆ. ಸಮೀಕ್ಷೆಯಲ್ಲಿ ಬರುವ ಅನೇಕ ಮಹಿಳೆಯರ ಸಾಕ್ಷರತಾ ಪ್ರಮಾಣವು ಅತ್ಯಲ್ಪವಾಗಿರುವುದರಿಂದ ಮತ್ತು ಮಾಹಿತಿಯ ಕೊರತೆ ಇರುವುದರಿಂದ ಗ್ರಹಣಾ ಸಾಮರ್ಥ್ಯದ ಅಭಾವವಿರುವುದರಿಂದ ವಿಮಾಪಾಲಿಸಿಯ ಅರಿವಿನ ಕೊರತೆ ಕಂಡು ಬರುತ್ತದೆ.

ಕೋಷ್ಟಕ 4.8.6: ಔದ್ಯೋಗಿಕ ಚಲನೆ ಶೀಲತೆ ಇಲ್ಲದಿರಲು ಕಾರಣಗಳು

ವಿವರ	ಒಟ್ಟು ಸದಸ್ಯೆಯರು	ಶೇಕಡಾವಾರು
ಮನೆ ಮತ್ತು ವ್ಯವಹಾರದ ಒತ್ತಡ	43	43%
ಆತ್ಮಸ್ಥೈರ್ಯದ ಕೊರತೆ	12	12%
ಹಣಕಾಸು ಸಂಪನ್ಮೂಲಗಳ ಕೊರತೆ	20	20%
ಮಹಿಳೆಯರಿಗೆ ದೊರಕುವ ಅವಕಾಶಗಳ ಜ್ಞಾನದ ಕೊರತೆ	25	25%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ:4.8.6



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕದ ಪ್ರಕಾರ ಸಮೀಕ್ಷೆಯಲ್ಲಿ ಕಂಡು ಬಂದ ಅಂಶವೇನೆಂದರೆ ಹೆಚ್ಚಿನ ಮಹಿಳೆಯರಿಗೆ (43%) ಏಕಕಾಲದಲ್ಲಿ ಮೆನ ಕೆಲಸ ಮತ್ತು ವ್ಯವಹಾರಗಳನ್ನು ನಿರ್ವಹಿಸುವುದು ಕಷ್ಟಕರವಾಗಿದೆ. ಹಾಗಾಗಿ ಔದ್ಯೋಗಿಕ ಚಲನೆ ಶೀಲತೆ ಅವರಲ್ಲಿ ಕಡಿಮೆಯಾಗಿದೆ. ಇನ್ನು ಕೆಲವು ಮಹಿಳೆಯರ ಅಭಿಪ್ರಾಯದ ಪ್ರಕಾರ ಮಹಿಳೆಯರಿಗೆ ದೊರಕುವ ಅವಕಾಶಗಳ ಜ್ಞಾನದ ಕೊರತೆ (25%)ಯಿಂದಾಗಿ ಅವರಲ್ಲಿ ಜೌದ್ಯೋಗಿಕ ಚಲನೆ ಶೀಲತೆ ಕಡಿಮೆಯಾಗಿದೆ. ಉದಾಹರಣೆಗೆ 'ಕ್ಷೀರ ಸಂಜೀವಿನಿ' ಯೋಜನೆಯಲ್ಲಿರುವ ಕೆಲವು ಅವಕಾಶಗಳ ಅರಿವು ಕೆಲವು ಸದಸ್ಯೆಯರಿಗಿಲ್ಲ.

ಕೆಲವು ಸದಸ್ಯೆಯರ ಹೇಳಿಕೆಯ ಪ್ರಕಾರ, ಕೆಲವರಿಗೆ ಒಕ್ಕೂಟದಿಂದ ದೊರಕುವ ಸೌಲಭ್ಯಗಳ ಮಾಹಿತಿಯಿದೆ. ಆದರೆ ಸರಕಾರದಿಂದ ಸಿಗುವ ಕೆಲವು ಸೌಲಭ್ಯಗಳ ಬಗ್ಗೆ ಅವರಿಗೆ ಸರಿಯಾಗಿ ಮಾಹಿತಿಗಳ ಲಭ್ಯವಿಲ್ಲ.


ಇನ್ನು ಕೆಲವರ ಪ್ರಕಾರ, ಔದ್ಯೋಗಿಕ ಚಲನಶೀಲತೆ ಇಲ್ಲದಿರಲು ಹಣಕಾಸು ಸಂಪನ್ಮೂಲಗಳ ಕೊರತೆ (20%) ಹಾಗೂ ಆತ್ಮ ಸ್ಥೈರ್ಯದ ಕೊರತೆಯೂ (12%) ಕಾರಣ.

ಕೋಷ್ಟಕ 4.8.7: ಸರಕಾರದ ಬೆಂಬಲದಲ್ಲಿ ಅನಾನುಕೂಲತೆ

ವಿವರ	ಒಟ್ಟು ಸದಸ್ಯೆಯರು	ಶೇಕಡಾವಾರು
ಸಾಲ ಹಾಗೂ ಸಬ್ಸಿಡಿಗಳ ಅನುಮೋದನೆಯಲ್ಲಿ ಕುಂದು ಕೊರತೆ	33	33%
ಸರಕಾರದ ಯೋಜನೆಗಳ ಕಳಪೆ ಜ್ಞಾನ	47	47%
ಮಹಿಳಾ ಉದ್ಯಮಿಗಳೊಂದಿಗೆ ತಾರತಮ್ಯ	7	7%
ವಿವಿಧ ಇಲಾಖೆಗಳ ನಡುವೆ ಸಮನ್ವಯದ ಕೊರತೆ	13	13%
ಒಟ್ಟು	100	100%

ಮೂಲ: ಕ್ಷೇತ್ರ ಸಮೀಕ್ಷೆ

ನಕ್ಷೆ: 4.8.7



ಮೂಲ: ಕ್ಷೇತ್ರ ಸಮೀಕ್ಷೆ

ಮೇಲಿನ ಕೋಷ್ಟಕ 4.8.7ರ ಪ್ರಕಾರ ಹೆಚ್ಚಿನ ಸದಸ್ಯರು (47%) ಹೇಳುವಂತೆ, ಕೆಲವು ಸದಸ್ಯೆಯರಿಗೆ ಸರಿಯಾಗಿ ಸರಕಾರದ ಯೋಜನೆಗಳ ಅರಿವಿಲ್ಲದ ಕಾರಣ ಆ ಯೋಜನೆಗಳಿಂದ ಬರುವ ಅನುಕೂಲತೆಗಳಿಂದ ಅವರು ವಂಚಿತರಾಗುತ್ತಿದ್ದಾರೆ. ಉದಾ: ಕೆಲವರಿಗೆ ಪಶುಭಾಗ್ಯ ಯೋಜನೆಯ ಬಗ್ಗೆ ಮಾಹಿತಿ ಇಲ್ಲ. ಇದ್ದರೂ ಕೂಡ ಪಶುಭಾಗ್ಯ ಯೋಜನೆಯ ಉಪಯೋಗ ಅಗತ್ಯವಿರುವವರಿಗೆ ಸಿಗುತ್ತಿಲ್ಲ. ಇನ್ನು ಕೆಲವು ಸದಸ್ಯೆಯರ ಪ್ರಕಾರ ಸಾಲ ಸಬ್ಸಿಡಿಗಳ ಅನುಮೋದನೆಯಲ್ಲಿ ಕುಂದುಕೊರತೆ (33%)ಗಳು ಎದ್ದು ಕಾಣುತ್ತಿವೆ. ಬಂಟ್ವಾಳ ತಾಲೂಕಿನ ಒಬ್ಬ ಸದಸ್ಯರು ಹೇಳುವಂತೆ, ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲೂಕು ಬರ ಪೀಡಿತ ಪ್ರದೇಶವೆಂದು ಘೋಷಣೆಯಾದರೂ, ಬೇರೆ ಬರ ಪೀಡಿತ ಪ್ರದೇಶಗಳಿಗೆ ಸಿಗುವಂತೆ ದಕ್ಷಿಣಕನ್ನಡ ಜಿಲ್ಲೆಯವರಿಗೆ ಸಬ್ಸಿಡಿಯಲ್ಲಿ ಮೇವು ಹಂಚಿಕೆಯಾಗುತ್ತಿಲ್ಲ. ಕುರಿಯ ಗೊಬ್ಬರದಲ್ಲಿ ಹೊಯಿಗೆ ಬೆರಕೆಯಾಗಿರುತ್ತದೆ.

ಸದಸ್ಯೆಯರು ಎದುರಿಸುತ್ತಿರುವ ಇನ್ನೊಂದು ದೊಡ್ಡ ಸಮಸ್ಯೆಯೆಂದರೆ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯ ಸಮಸ್ಯೆ. ಕಡಿಮೆ ಶಿಕ್ಷಣ ಹೊಂದಿರುವ ಹಾಗೂ ಅನಕ್ಷರಸ್ಥ ಸದಸ್ಯೆಯರು ತಮ್ಮ ಆಧಾರ್ ಕಾರ್ಡ್‌ನಲ್ಲಿ ಇರುವ ಹೆಸರಿಗೂ ಮತ್ತು ತಮ್ಮ ಬ್ಯಾಂಕ್ ಖಾತೆಯಲ್ಲಿರುವ ಹೆಸರಿಗೂ ಇರುವ ಅಕ್ಷರ ವ್ಯತ್ಯಾಸಗಳಿಂದಾಗಿ ಸಮಸ್ಯೆಯಾಗಿ ತಮ್ಮ ಪ್ರೋತ್ಸಾಹಧನವನ್ನು ಪಡೆಯುವಲ್ಲಿ ತುಂಬಾ ಕಷ್ಟ ಅನುಭವಿಸುತ್ತಿದ್ದಾರೆ. ಈ ವಿಷಯದಲ್ಲಿ ಬ್ಯಾಂಕ್ ಮತ್ತು ಕೆ.ಎಮ್.ಎಫ್ ನಡುವಿನ ಸಮನ್ವಯದ ಕೊರತೆ ಕೂಡಾ ಕಂಡು ಬರುತ್ತದೆ.

ಕೆಲವು ಸದಸ್ಯರ ಅಭಿಪ್ರಾಯದಂತೆ ಹಾಲು ಮಾರಿ ಬಂದ ಹಣ ಉಳಿತಾಯವಾಗದೆ, ಪಶುಗಳ ನಿರ್ವಹಣೆಗೆ ಖರ್ಚಾಗುವ ಕಾರಣ ಬಡತನ ನಿರ್ಮೂಲನೆಯಾಗಿಲ್ಲ. ಕೆಲವರಲ್ಲಿ ಸಾಕ್ಷರತಾ ಪ್ರಮಾಣ ಕಡಿಮೆಯಿರುವುದರಿಂದ ತಮ್ಮದೇ ಆದ ಅದಾಯ ವಿದ್ದರೂ ಆರ್ಥಿಕ ಸ್ವಾವಲಂಬನೆಯನ್ನು ಹೊಂದಿಲ್ಲ.

ಸ್ಟೆಪ್ ಪ್ರಾಯೋಜಿತ ಸಾಮಾಜಿಕ ಅರಿವಿನ ಕಾರ್ಯಕ್ರಮಗಳ ಪ್ರಯೋಜನವನ್ನು ಕೆಲವು ಸದಸ್ಯರು ಪಡೆಯದಿರಲು ಎರಡು ಕಾರಣಗಳಿವೆ.

ಕೆಲವು ಸದಸ್ಯರಿಗೆ ಈ ಕಾರ್ಯಕ್ರಮಗಳಿಗೆ ಹಾಜರಾಗಲು ಸಮಯ ಹಾಗೂ ಆಸಕ್ತಿ ಇಲ್ಲದೆ ಇರಬಹುದು.

ಇನ್ನು ಕೆಲವರು ಸ್ಟೆಪ್ ಯೋಜನೆಯಡಿ ಸೇರ್ಪಡೆಗೊಳ್ಳದ ಸಹಕಾರಿ ಸಂಘಗಳ ಸದಸ್ಯರಾಗಿರುವುದರಿಂದ ಈ ಅರಿವಿನ ಕಾರ್ಯಕ್ರಮಗಳ ಪ್ರಯೋಜನ ಪಡೆಯಲು ಅವಕಾಶವಿಲ್ಲದಿರಬಹುದು.

ಅಧ್ಯಾಯ–೦೫

ಸಲಹೆ ಮತ್ತು ಉಪಸಂಹಾರ

ಅಧ್ಯಾಯ –೫

ಸಲಹೆಗಳು ಮತ್ತು ತೀರ್ಮಾನಗಳು

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಮಹಿಳಾ ಸದಸ್ಯರ ಪರಿಣಾಮಕಾರಿ ಸಬಲೀಕರಣಕ್ಕಾಗಿ ನಿರ್ದಿಷ್ಟ ಶಿಫಾರಸ್ಸುಗಳನ್ನು ಮಾಡಲು ಇಚ್ಛಿಸುವುದು ಈ ಕೊನೆಯ ಅಧ್ಯಾಯದ ಉದ್ದೇಶ. ಇದಲ್ಲದೆ ಈ ಅಧ್ಯಾಯವು ಡೈರಿ ಸಹಕಾರ ಸಂಘಗಳ ಮಹಿಳಾ ಸಬಲೀಕರಣದ ವಿಷಯಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಸಂಶೋಧನೆಗಳ ಪ್ರಮುಖ ಅಂಶಗಳನ್ನು ಒಳಗೊಂಡಿದೆ.

೫.೧ <u>ಸಲಹೆಗಳು</u> :–

- ಹೈನುಗಾರಿಕಾ ವಲಯದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಮತ್ತು ಆರ್ಥಿಕ ಸಬಲೀಕರಣವನ್ನು ಹೆಚ್ಚಿಸಲು ಕೆಲವು ಸಲಹೆಗಳು ಹೀಗಿವೆ.
- ಮಹಿಳೆಯರಿಗೆ ಜಾನುವಾರು ಸಾಕಣೆ ಮತ್ತು ಹಾಲು ಉತ್ಪಾದನೆಗೆ ನಿರಂತರ ಬೆಂಬಲ ಮತ್ತು ವಿಶೇಷ ಪ್ರೋತ್ಸಾಹವನ್ನು ಕೊಡುವುದು.
- ಉತ್ತಮ ಜಾತಿಯ ಜಾನುವಾರುಗಳನ್ನು ಖರೀದಿಸಲು ಅಂಚು ಹಣವನ್ನು ಹೆಚ್ಚಿಸುವುದು ಅಥವಾ ಉತ್ತಮ ಜಾತಿಯ ಹಸುಗಳನ್ನು ಸರ್ಕಾರವೇ ಒದಗಿಸುವುದು.
- ಈಗಾಗಲೇ ಮಹಿಳೆಯರು ಪುರುಷರಿಂದ ಪಡೆಯುತ್ತಿರುವ ಸಹಕಾರವನ್ನು ಇನ್ನೂ ವಿಸ್ತರಿಸುವಲ್ಲಿ ಪುರುಷ ಸಂವೇದನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಗ್ರಾಮೀಣ ಮಟ್ಟದಲ್ಲಿ ಮಹಿಳೆಯರಿಗೆ ಅನುಕೂಲವಾಗುವಂತಹ ಗ್ರಾಮೀಣ ಪರಿಸರವನ್ನು ನಿರ್ಮಿಸಿ, ಅವರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಚಟುವಟಿಕೆಗಳನ್ನು ಕೈಗೊಳ್ಳುವುದು.
- ಸಹಕಾರ ಸಂಘದ ಗುರಿಗಳನ್ನು ಸಾಧಿಸಲು ಸದಸ್ಯರಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಅರಿವನ್ನು ಮೂಡಿಸುವುದು ಮತ್ತು ಮಹಿಳಾ ಡೈರಿ ಸಹಕಾರ ಸಂಘಗಳ ಪ್ರಜಾಪ್ರಭುತ್ವ ತತ್ವಗಳನ್ನು ಬಲ ಪಡಿಸುವುದು.
- ಪಶುವೈದ್ಯ ಸೇವೆಗಳ ಸೌಲಭ್ಯ ಸಮಯಕ್ಕೆ ಸರಿಯಾಗಿ, ಉಚಿತವಾಗಿ ಒದಗಿಸಲು ಕ್ರಮ ಕೈಗೊಳ್ಳುವುದು.

- ಸರ್ಕಾರ ತರಬೇತಿ ಕಾರ್ಯಕ್ರಮಗಳಿಗೆ ಮತ್ತು ತರಬೇತು ಪಡೆಯುವವರ "ತಲಾ ತರಬೇತು ವೆಚ್ಚ"ವನ್ನು ಭರಿಸಲು ಹೆಚ್ಚಿನ ಹಣದ ನೆರವನ್ನು ನೀಡುವುದು.
- ಸರಕಾರ ಜಿಲ್ಲಾ ಕೇಂದ್ರ ಮತ್ತು ರಾಜ್ಯ ರಾಜಧಾನಿಯಲ್ಲಿ ನಡೆಸುವ ತರಬೇತು ಕಾರ್ಯಕ್ರಮಗಳನ್ನು ತಾಲುಕು ಕೇಂದ್ರ ಮತ್ತು ಪ್ರತೀ ಗ್ರಾಮಕ್ಕೆ ವಿಸ್ತರಿಸಿ ಹೆಚ್ಚು ಹೆಚ್ಚು ಮಹಿಳೆಯರು ತರಬೇತು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.
- ಮೇವಿಗೆ ಸಂಬಂಧಿಸಿದಂತೆ, ಸರ್ಕಾರ ಒದಗಿಸುವ ಸೌಲಭ್ಯಗಳು ಪ್ರತಿಯೊಬ್ಬರಿಗೂ ದೊರಕುವಂತೆ ನೋಡಿಕೊಳ್ಳುವುದು.
- ಸರಕಾರದ ಕೆಲವು ಹೊಸ ನೀತಿಗಳಿಂದ, ತಂತ್ರಜ್ಞಾನದ ಕೊರತೆಯಿಂದ ಕೆಲವು ಅನಕ್ಷರಸ್ಥ ಸದಸ್ಯೆಯರು ತೊಂದರೆಗೀಡಾಗಿದ್ದಾರೆ. ಉದಾ : ಉಳಿತಾಯ ಖಾತೆಗೆ ಆಧಾರ್ ಜೋಡಣೆ. ಈ ಆಧಾರ್ ಜೋಡಣೆಯಿಂದ ಸದಸ್ಯೆಯರಿಗೆ ಉಂಟಾಗಿರುವ ತೊಂದರೆಯನ್ನು ತಪ್ಪಿಸುವುದು.
- ಪಶುಗಳ ವಿಮೆಯ ಮಹತ್ವವನ್ನು ಜನರಿಗೆ ತಿಳಿಯಪಡಿಸಲು ಇದರ ಮೇಲೆ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ಸರಕಾರವು ಕೆಲವು ಯೋಜನೆಗಳ ಬಗ್ಗೆ (ಉದಾ : "ಕ್ಷೀರ ಸಂಜೀವನಿ") ಜನರಿಗೆ ಸರಿಯಾದ ಮಾಹಿತಿಯನ್ನು ಒದಗಿಸುವುದು.
- ಮಹಿಳಾ ಡೈರಿ ಸಹಕಾರಿ ಸಂಘಗಳನ್ನು ಹೆಚ್ಚೆಚ್ಚು ರಚಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು.

೫.೨ ಉಪಸಂಹಾರ :

ಮಹಿಳೆಯರೇ ನಡೆಸುತ್ತಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಹೈನುಗಾರಿಕಾ ವಲಯದಲ್ಲಿ ಒಂದು ಉತ್ತಮ ಸ್ಥಾನವನ್ನು ಗಳಿಸಿಕೊಂಡಿರುತ್ತಾ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ, ಸಾಲ ಸೌಲಭ್ಯಗಳನ್ನು ಸುಲಭವಾಗಿ ಒದಗಿಸುವ ಮೂಲಕ ಹಾಗೂ ಅವರ ಆದಾಯವನ್ನು ಹೆಚ್ಚಿಸುವ ಮೂಲಕ ಈ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಗಳು ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದು ನಿಜವಾಗಿಯೂ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಒಂದು ಖಚಿತ ಮುನ್ನಡೆಯಾಗಿದೆ. ಮಹಿಳೆಯರು ಸಮಾಜದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಪರಿಣಾಮಕಾರಿಯಾಗಿ ಗಮನಿಸಿದಾಗ, ಈ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಮಹಿಳೆಯರನ್ನು ಎಲ್ಲಾ ರೀತಿಗಳಲ್ಲಿ ಸಬಲೀಕರಣಗೊಳಿಸುವಲ್ಲಿ ಯಶಸ್ವಿಯನ್ನು ಪಡೆದಿವೆ.

ಈ ಅಧ್ಯಯನದಲ್ಲಿ ಮಹಿಳಾ ಸಬಲೀಕರಣದ ಮೇಲೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳ ಪರಿಣಾಮದ ವಿಶ್ಲೇಷಣೆಯು ಸದಸ್ಯರ ಸಕರಾತ್ಮಕ ಗ್ರಹಿಕೆಗಳನ್ನು ತೋರಿಸುತ್ತದೆ. ಹಾಲು ಒಕ್ಕೂಟವು ಉತ್ಪಾದಕ ಉದ್ಯೋಗವನ್ನು ಸೃಷ್ಟಿಸಲು ಮತ್ತು ಉತ್ಪಾದಕ ಆಸ್ತಿಗಳ ಮೂಲಕ ಅವಲಂಬಿತ ಆದಾಯವನ್ನು ಸೃಷ್ಟಿಸಲು ಸಮರ್ಥವಾಗಿದೆ ಎಂದು ಮಹಿಳೆಯರು ಬಲವಾಗಿ ಭಾವಿಸಿದ್ದಾರೆ. ಹಾಲು ಕರೆಯುವ ಪಶುಗಳನ್ನು ಸಾಕುವಲ್ಲಿ ಮತ್ತು ಅವುಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಅನೇಕ ಸದಸ್ಯರು ತಮ್ಮ ಆಸಕ್ತಿಯನ್ನು ತೋರಿಸಿದ್ದಾರೆ ಹಾಗೂ ಅವರೆಲ್ಲಾ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಕೊಡುವ ಅನುಕೂಲತೆಗಳ ಬಗ್ಗೆ ಬಹಳ ಸಕಾರಾತ್ಮಕ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಠೇವಣಿ ಮೇಲಿನ ಬಡ್ಡಿ, ಬೋನಸ್, ವಿಮೆ, ಪಶುವೈದ್ಯ ಸೇವೆಗಳು ಮತ್ತು ಜಾನುವಾರು ಸಾಕಣೆಗಾಗಿ ಕೊಡುವ ಇತರ ಸೇವೆಗಳು ಸದಸ್ಯರಿಗೆ ತುಂಬಾ ಪ್ರಯೋಜನಕಾರಿಯಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಸದಸ್ಯೆಯರಿಗೆ ಹೆಚ್ಚಿನ ಸಂತೋಷ ತಂದ ವಿಷಯವೆಂದರೆ ಹಾಲಿನ ಹಣ ಹಾಗೂ ಪ್ರೋತ್ಸಾಹ ಧನ ನೇರವಾಗಿ ಅವರ ಖಾತೆಗೆ ಜಮೆಯಾಗುವುದು. ಅವರ ಅಭಿಪ್ರಾಯದ ಪ್ರಕಾರ, ಇದರಿಂದಾಗಿ ಅವರಿಗೆ ಆರ್ಥಿಕ ಸ್ವಾತಂತ್ರ್ಯ ದೊರಕಿದೆ ಹಾಗೂ ಹಣ ಬೇಕಾದಾಗ ಮಾತ್ರ ಖಾತೆಯಿಂದ ತೆಗೆಯುವುದರಿಂದ ಹಣ ದುರುಪಯೋಗವಾಗದೆ ಉಳಿತಾಯವಾಗುತ್ತದೆ.

ಈ ನೇರ ಪ್ರಯೋಜನಗಳಿಗಿಂತಲೂ ಹಾಲಿನ ಒಕ್ಕೂಟವು ಸದಸ್ಯೆಯರಿಗೆ ಸಾಮಾಜಿಕವಾಗಿ ಗಣನೀಯ ಕೊಡುಗೆ ನೀಡಿದೆ. ಅವರ ಸುಧಾರಿತ ಸಾಮಾನ್ಯ ಅರಿವು, ಹೆಚ್ಚಿದ ಗೌರವ ಮತ್ತು ಸ್ಥಾನಮಾನದ ಅರಿವು ಇವೆಲ್ಲವೂ ಮಹಿಳೆಯರ ಸಾಮಾಜಿಕ ಸಬಲೀಕರಣವನ್ನು ಪ್ರತಿಬಿಂಬಿಸುತ್ತದೆ.

ಈ ಅಧ್ಯಯನವು ಮಹಿಳಾ ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕಿರುವ ಬಹು ಆಯಾಮದ ಕೆಲವು ಅಡೆತಡೆಗಳನ್ನು ಕಂಡುಹಿಡಿದಿದೆ. ಈ ವ್ಯವಹಾರದಲ್ಲಿ ತೊಡಗಿಸಿಕೊಳ್ಳಲು ಮಹಿಳೆಯರು ಮುಖ್ಯವಾಗಿ ಎದುರಿಸುತ್ತಿರುವ ಅಡೆತಡೆಗಳೆಂದರೆ ಆರ್ಥಿಕ ಕೊರತೆ, ಅನಕ್ಷರತೆ, ಪಶುವೈದ್ಯ ಸೇವೆಗಳ ಕೊರತೆ ಇತ್ಯಾದಿ, ಇವೆಲ್ಲಾ ತೊಂದರೆಗಳಿದ್ದಾಗ್ಯೂ ಗ್ರಾಮೀಣ ಮತ್ತು ಸಣ್ಣ ಪಟ್ಟಣಗಳಲ್ಲಿರುವ ಮಹಿಳೆಯರು ತಮ್ಮದೇ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು, ತಮ್ಮನ್ನು ಸಮಾಜದಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಶಕ್ತರಾಗಿಸಿಕೊಂಡಿರುತ್ತಾರೆ. ಜೊತೆಗೆ ಕೆ.ಎಮ್. ಎಫ್. ಜಾರಿಗೊಳಿಸಿದ ಭಾರತ ಸರ್ಕಾರ ಪ್ರಾಯೋಜಿತ "ಸ್ಟೆಪ್" ಹಾಗೂ "ಕ್ಷೀರ ಸಂಜೀವನಿ" ಕಾರ್ಯಕ್ರಮಗಳು ಮಹಿಳೆಯರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲೀಕರಣಗೊಳ್ಳಲು ಸಹಾಯ ಮಾಡಿವೆ.

ಅನುಬಂಧ–೦೧

ಗ್ರಂಥಪರಾಮರ್ಶನೆ

ಅನುಬಂಧ-೧

ಪರಾಮರ್ಶನ ಗ್ರಂಥಗಳು

೧. ಅಮೂಲ್ ಡೈರಿ, (೨೦೧೭). ಆನಂದ್ ಪ್ಯಾಟರ್ನ್- ಹೌ ವಿ ವರ್ಕ್. http://.www.amuldairy.com/ ನಿಂದ ಪಡೆಯಲಾಗಿದೆ.

೨. ಆಡಮ್ಸ್, ರೋಬರ್ಟ್, (೨೦೦೮). ಎಂಪವರ್‌ಮೆಂಟ್, ಪಾರ್ಟಿಸಿಪೇಶನ್ ಆಂಡ್ ಸೋಷಿಯಲ್ ವರ್ಕ್. ನ್ಯೂಯಾರ್ಕ್: ಪಾಲ್‌ಗ್ರೇವ್ ಮ್ಯಾಕ್‌ಮಿಲ್ಲನ್, P. XVI. https://en.wikipedia.org/wiki/Empowerment ನಿಂದ ಪಡೆಯಲಾಗಿದೆ.

೩. ಎನ್.ಡಿ.ಡಿ.ಬಿ, (೨೦೧೫). ವಿಮೆನ್ ಡೈರಿ ಕೋ-ಆಪರೇಟಿವ್ಸ್ - ಎನ್‌ಹ್ಯಾನ್ಸಿಂಗ್ ವಿಮೆನ್ಸ್ ಇನ್ವಾಲ್ವ್‌ಮೆಂಟ್ ಇನ್ ಕೋ-ಆಪರೇಟಿವ್ಸ್. nddb.coop ನಿಂದ ಪಡೆಯಲಾಗಿದೆ.

೪. ಐ.ಎಲ್.ಒ., (೨೦೧೨). ಎಂಪವರ್ ರೂರಲ್ ವಿಮೆನ್-ಎಂಡ್ ಪವರ್ಟಿ ಆಂಡ್ ಹಂಗರ್ : ದ ಪೊಟೆನ್ಷಿಯಲ್ ಆಫ್ ಆಫ್ರಿಕನ್ ಕೋ-ಆಪರೇಟಿವ್ಸ್. www.ilo.org/public/english/----ent ನಿಂದ ಪಡೆಯಲಾಗಿದೆ.

೫. ಕುಮಾರಿ, ಕೆ. ಕುಮಾರ್, ಎಸ್. ಲಾಲ್, ಎಸ್.ವಿ. ದಯಾಳ್, ಎಸ್. ಡೇ, ಎ. (೨೦೧೪) ಸಸ್ಟೇನೇಬಲ್ ಡೈರಿ ಫಾರ್ಮಿಂಗ್-ಎ ಟೂಲ್ ಫಾರ್ ರೂರಲ್ ವಿಮೆನ್ ಎಂಪವರ್‌ಮೆಂಟ್. www.krishisewa.com ನಿಂದ ಪಡೆಯಲಾಗಿದೆ.

೬. ಕೃಷ್ಣನ್, ಸಿ. (೧೯೯೭). ಡೇರಿಂಗ್ ಫೋರ್ ರೂರಲ್ ಡೆವೆಲಪ್‌ಮೆಂಟ್ : ಎ ಸ್ಟಡಿ ಜರ್ನಲ್ ಆಫ್ ರೂರಲ್ ಡೆವೆಲಪ್‌ಮೆಂಟ್, ೧೬(೩), ೩೮೭-೪೦೦, ಸೆಪ್ಟೆಂಬರ್, ೧೯೯೭.

೭. ಕೌಶಿಕ್, ಸುನೀತಾ ಮತ್ತು ಸಿಂಘಲ್, ಸವಿತಾ (೧೯೯೩). ಇನ್‌ವಾಲ್ವಮೆಂಟ್ ಆಫ್ ರೂರಲ್ ವಿಮೆನ್ ಇನ್ ಡೈರಿ ಕೊ-ಆಪರೇಟಿವ್ ಸೊಸೈಟಿ ಇನ್ ಹರಿಯಾಣ, ಇಂಡಿಯನ್ ಕೊ- ಆಪರೇಟಿವ್ ರಿವ್ಯೂ, ೩೦(೪), ೩೬೭-೩೭೫, ಎಪ್ರಿಲ್, ೧೯೯೩.

೮. ತರೀಕೆರೆ, ರಹಮತ್. (೨೦೧೪). ಸಂಶೋಧನ ಮೀಮಾಂಸೆ, ಮಯೂರ್ ಪ್ರಿಂಟ್ ಆ್ಯಡ್ಸ್, ಬೆಂಗಳೂರು.

೯. ಡಾ. ನಕ್ಕಿರನ್, ಎಸ್. (೧೯೮೦). ಕೋ-ಆಪರೇಟಿವ್ ಬ್ಯಾಂಕಿಂಗ್ ಇನ್ ಇಂಡಿಯಾ. ಕೊಯಂಬತ್ತೂರು : ರೇನ್‌ಬೋ ಪಬ್ಲಿಕೇಷನ್ಸ್.

೧೦. ನಂದನ್, ಪಿ. (೨೦೧೫). ಸ್ಟ್ರೆಂಥನಿಂಗ್ ಡೈರಿ ಸೆಕ್ಟರ್ ಇನ್ ಕರ್ನಾಟಕ ತ್ರೂ ಸ್ಟೆಪ್ ಇನಿಶಿಯೇಟಿವ್. ಇಂಟರ್‌ನ್ಯಾಶನಲ್ ಜರ್ನಲ್ ಆಫ್ ಅಕಾಡೆಮಿಕ್ ರಿಸರ್ಚ್, ೨,೧(೪), ೧೦೮–೧೧೧, ಮಾರ್ಚ್, ೨೦೧೫.

೧೧. ಪರಂಜ್ಯೋತಿ, ಟಿ. ಮತ್ತು ರವಿಚಂದ್ರನ್, ಕೆ. (೨೦೦೫). ವಿಮೆನ್ ಡೈರಿ ಕೊ–ಆಪರೇಟಿವ್ ಸೊಸೈಟೀಸ್: ಎ ಸ್ಟಡಿ ವಿದ್ ರೆಫರೆನ್ಸ್ ಟು ಸ್ಟೇಟ್ ಸ್ಪೋನ್ಸರ್ಡ್ ಪ್ರೋಗ್ರಾಮ್. http://wwwica.ap.co-operative ನಿಂದ ಪಡೆಯಲಾಗಿದೆ.

೧೨. ಪಾಂಡೆ, ವಿವೇಕ್, ಉನ್ನಿ, ಜಿಮೋಲ್, ಮೋದಿ, ಪ್ರತೀಕ್ ಮತ್ತು ಶರ್ಮ, ಶೃತಿ.(೨೦೧೫). ರೋಲ್ ಆಫ್ ಇಂಡಿಯನ್ ಡೈರಿ ಕೊ–ಆಪರೇಟಿವ್ಸ್ ಇನ್ ಎಂಪವರಿಂಗ್ ವಿಮೆನ್ ಎಂಡ್ ಇಂಪ್ರೂವಿಂಗ್ ಜೆಂಡರ್ ಪ್ಯಾರಿಟಿ. http://www.ica-ap.coop ನಿಂದ ಪಡೆಯಲಾಗಿದೆ.

೧೩. ಪೂಜಾರಿ, ಚಂದ್ರ. ಎಂ. (೨೦೧೧). ಸಂಶೋಧನ ಪ್ರಸ್ತಾವ ತ್ವರಿತ ಮುದ್ರಣ ಆಫ್ ಸೆಟ್ ಪ್ರಿಂಟರ್ಸ್, ಗದಗ.

೧೪. ಪ್ರಸಾದ್, ಎಂ. ಮತ್ತು ಡಾ. ಚಂದ್ರಶೇಖರ, ಬಿ.ಎಸ್. (೨೦೧೭). ಆ್ಯನ್ ಓವರ್ ವ್ಯೂ ಆಫ್ ವಿಮೆನ್ ಮಿಲ್ಕ್ ಪ್ರೊಡ್ಯೂಸಿಂಗ್ ಕೊ–ಆಪರೇಟಿವ್ಸ್ ಇನ್ ಕರ್ನಾಟಕ. ಇಂಟರ್ ನ್ಯಾಶನಲ್ ಜರ್ನಲ್ ಫೋರ್ ರಿಸರ್ಚ್ ಇನ್ ಎಪ್ಲೈಡ್ ಸೈನ್ಸ್ಸ್ ಎಂಡ್ ಇಂಜಿನಿಯರಿಂಗ್ ಟೆಕ್ನೋಲೊಜಿ, ೫(೩), ೧೯೪–೧೯೮, ಮಾರ್ಚ್ ೨೦೧೭, http://www.ijraset.com ನಿಂದ ಪಡೆಯಲಾಗಿದೆ.

೧೫. ಡಾ. ಬೇಬಿ, ಫಾತಿಮಾ. (೨೦೧೪). ಎ ಸ್ಟಡಿ ಆನ್ ವಿಮೆನ್ ಡೈರಿ ಫಾರ್ಮರ್ಸ್ ಇನ್ ಮಧುರೈ ಡಿಸ್ಟ್ರಿಕ್ಟ್, ಇಪಿಆರ್ಎ (EPRA) ಇಂಟರ್‌ನ್ಯಾಶನಲ್ ಜರ್ನಲ್ ಆಫ್ ಎಕನಾಮಿಕ್ ಎಂಡ್ ಬಿಸ್‌ನೆಸ್ ರಿವ್ಯೂ, ೨(೮), ೯೮–೧೦೪, ಅಗಸ್ಟ್ ೨೦೧೪. http://EPRAtrust.com ನಿಂದ ಪಡೆಯಲಾಗಿದೆ.

೧೬. ಬೇಡಿ, ಆರ್.ಡಿ. (೧೯೫೮). ಥಿಯರಿ, ಹಿಸ್ಟರಿ ಆಂಡ್ ಪ್ರ್ಯಾಕ್ಟೀಸ್ ಆಫ್ ಕೋ–ಆಪರೇಷನ್. ಮೀರತ್: ಲೋಯಲ್ ಬುಕ್ ಡಿಪೋ.

೧೭. ಭವ್ಯ, (೨೦೧೨). ಸಹಕಾರಿ ಸಂಘಟನೆಗಳು ಮತ್ತು ಮಹಿಳಾ ಸಶಸ್ತ್ರೀಕರಣ– ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕಿನ ಒಂದು ಅಧ್ಯಯನ. ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ.

೧೮. ಡಾ. ಮಮೋರಿಯಾ, ಸಿ.ಬಿ. (೧೯೮೩). ಅಗ್ರಿಕಲ್ಚರಲ್ ಕೊ–ಆಪರೇಟಿವ್ ಸ್ರಕ್ಚರ್ ಇನ್ ಇಂಡಿಯಾ. ಕಿತಾಬ್ ಮಹಲ್, ಅಲಾಹಬಾದ್.

೧೯. ಮೀನಾ, ಎಮ್. ಐ. ದುಡಿ, ಐಶ್ವರ್ಯ ಮತ್ತು ಶರ್ಮ ಎನ್. ಕೆ. (೧೯೯೩). ಕಂಸ್ಟ್ರೆಂಟ್ಸ್ ಆಫ್ ಮೆನ್ ಡೈರಿ ಕೊ–ಆಪರೇಟಿವ್ ಸೊಸೈಟೀಸ್ ಇನ್ ಎಡೋಪ್ಶನ್ ಆಫ್ ಎನಿಮಲ್ ಹಸ್‌ಬೆಂಡರಿ ಪ್ರಾಕ್ಟಿಸಸ್, ಏಶ್ಯನ್ ಜೆ. ಡೈರಿ ಎಂಡ್ ಫುಡ್ ರೆಸ್, ೩೨(೨), ೯೬–೧೦೦, ಮಾರ್ಚ್ ೨೦೧೩. www.arccjournals.com ನಿಂದ ಪಡೆಯಲಾಗಿದೆ.

೨೦. ಮೀರಾ, ಎಂ. ಮತ್ತು ಗೌಡ, ಕೃಷ್ಣ. (೨೦೧೩). ಟುವರ್ಡ್ಸ್ ಇಕೊನಾಮಿಕ್ ಎಂಪವರ್‌ಮೆಂಟ್ ಸ್ಟಡಿ ಆಫ್ ರೂರಲ್ ವಿಮೆನ್ ಇನ್ ಡೈರಿ ಕೋ–ಆಪರೇಟಿವ್ಸ್ ಆಫ್ ಹೆಗ್ಗಡ ದೇವನ ಕೋಟೆ ತಾಲೂಕು ಇನ್ ಮೈಸೂರು ಡಿಸ್ಟ್ರಿಕ್ಟ್. ಜರ್ನಲ್ ಆಫ್ ಮೀಡಿಯಾ ಆಂಡ್ ಸೋಶಿಯಲ್ ಡೆವಲಪ್‌ಮೆಂಟ್, ೧(೧), ೧೭–೩೬.

೨೧. ಮುಕ್ತಿ, ಹೆಚ್.ಆರ್. (೧೯೮೮). ಕೊ–ಆಪರೇಶನ್ ಇನ್ ಇಂಡಿಯಾ ಆಂಡ್ ಎಬ್ರೋಡ್. ಆರ್.ಬಿ. ಪಬ್ಲಿಕೇಶನ್ಸ್, ದೆಹಲಿ.

೨೨. ಡಾ. ಮೂರ್ತಿ, ಮಹದೇವ, ಸಿ. ಮತ್ತು ಡಾ. ವೀಣಾ, ಕೆ.ಪಿ. (೨೦೧೨) ಎನಿಗ್ಮಾಸ್ ಆಂಡ್ ಸ್ಪೆಕ್ಟೇಕಲ್ : ಎ ಸ್ಟಡಿ ಆಫ್ ವಿಮನ್ ಎಂಟರ್‌ಪ್ರೆನೂರ್ಸ್ ಇನ್ ಮೈಸೂರ್ ಸಿಟಿ.

೨೩. ರಮಾನಂದ, ಎಂ.ಎಸ್. ಮತ್ತು ಕುಮಾರ್, ಮಹೇಂದ್ರನ್, ಎಸ್. (೨೦೧೦). ಡೈರಿ ಕೊ–ಒಪರೇಟಿವ್ಸ್ : ಎ ಸ್ಟಿಮುಲೆಂಟ್ ಫೋರ್ ರೂರಲ್ ವಿಮೆನ್, ಇಂಡಿಯನ್ ಕೊ–ಆಪರೇಟಿವ್ ರಿವ್ಯೂ, ೪೭(೪), ೨೯೨–೨೯೮, ಎಪ್ರಿಲ್ ೨೦೧೦.

೨೪. ರಾವ್, ವಿ.ಎಂ. (೨೦೦೩). ಡೆವಲಪ್‌ಮೆಂಟ್ ಆಫ್ ವಿಮೆನ್ ತ್ರೂ ಡೈರಿ ಕೊ–ಆಪರೇಟಿವ್ಸ್. ಎ ಸ್ಟಡಿ ಇನ್ ಆಂಧ್ರ ಪ್ರದೇಶ ಆಂಡ್ ಕರ್ನಾಟಕ, ಅರ್ಥ ವಿಜ್ಞಾನ, ೪೫(೧–೨), ೫೪–೬೧, ೨೦೧೩.

೨೫. ರಾವ್, ಶಂಕರ್. ಚ.ನ. (೨೦೧೬). ಸಮಾಜ ಶಾಸ್ತ್ರೀಯ ಸಂಶೋಧನಾ ವಿಧಾನಗಳು. ಜೈಭಾರತ್ ಪ್ರಕಾಶನ, ಮಂಗಳೂರು.

೨೬. ರುದ್ರಸ್ವಾಮಿ, ಕೆ.ಸಿ. (೨೦೧೨) : ಎಂಪವರ್‌ಮೆಂಟ್ ಆಫ್ ವಿಮೆನ್, ಇಶ್ಯೂಸ್ ಆಂಡ್ ಚಾಲೆಂಜಸ್. ರಾಜಗೋಪಾಲ್ ಪಬ್ಲಿಶರ್ಸ್, ಮೈಸೂರು.

೨೭. ರೈ, ವಿವೇಕ್, ಬಿ.ಎ. (೨೦೧೬). ಮಂಗಳೂರು ದರ್ಶನ. ಮಂಗಳೂರು : ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ.

೨೮. ಡಾ. ರೆಡ್ಡಿ, ರಾಜಿ, ಪಿ. (೨೦೧೪). ವಿಮೆನ್ ಎಂಟರ್‌ಪ್ರೆನ್ಯೂರ್‌ಶಿಪ್ ಇನ್ ರೂರಲ್ ಏರಿಯಾಸ್ – ಎ ಸ್ಟಡಿ ಓಫ್ ಮುಲ್ಕನೂರ್ ವಿಮೆನ್ ಕೊ–ಆಪರೇಟಿವ್ ಡೈರಿ. ಐಒಎಸ್‌ಆರ್ (IOSR) ಜರ್ನಲ್ ಆಫ್ ಎಕೊನೋಮಿಕ್ಸ್ ಎಂಡ್ ಫೈನಾನ್ಸ್, ೫(೨), ೫೨–೫೬, ಒಕ್ಟೋಬರ್ ೨೦೧೪, www.iosrjournals.org ನಿಂದ ಪಡೆಯಲಾಗಿದೆ.

೨೯. ವಿಮೆನ್ ಎಂಪವರ್‌ಮೆಂಟ್ : ಇಟ್ಸ್ ಮೀನಿಂಗ್ ಆಂಡ್ ವೈ ಈಸ್ ಇಟ್ ಇಂಪಾರ್ಟೆಂಟ್, (೨೦೧೫). www.learn.culturalindia.net ನಿಂದ ಪಡೆಯಲಾಗಿದೆ.

೩೦. ಶಾಹ್, ಡಿ. ಆರ್. (೧೯೮೫). ಕೋ ಆಪರೇಟಿವ್ ಡೈರಿ ಫಾರ್ಮಿಂಗ್ ಇನ್ ಗುಜರಾತ್. ಸೋಮೈಯ ಪಬ್ಲಿಕೇಷನ್ಸ್ ಪ್ರೈ ಲಿಮಿಟೆಡ್, ಮುಂಬೈ.

೩೧. ಶೀಲಾ, ಕೆ.ಎಸ್ ಮತ್ತು ಡಾ. ರಾಮೇಗೌಡ, ಎ. (೨೦೧೩). ಡೈರಿ ಕೋ–ಆಪರೇಟಿವ್ಸ್ ಆಂಡ್ ಎಂಪವರ್‌ಮೆಂಟ್ ಆಫ್ ವಿಮೆನ್. ಇಂಟರ್‌ನ್ಯಾಶನಲ್ ಜರ್ನಲ್ ಆಫ್ ಎಡ್ವಾನ್ಸ್‌ಡ್ ಸೋಶಿಯಲ್ ಸೈನ್ಸ್ ಆಂಡ್ ಹ್ಯುಮ್ಯಾನಿಟೀಸ್, ೨(೯), ೩೪–೪೨, ಸೆಪ್ಟೆಂಬರ್, ೨೦೧೩. http://wwwrpjournals.com/ V/IJRSSH ನಿಂದ ಪಡೆಯಲಾಗಿದೆ.

೩೨. ಡಾ. ಸುಧಾ, ಕೆ. (೨೦೧೫). ವಿಮೆನ್ ಎಂಪವರ್‌ಮೆಂಟ್ ತ್ರೂ ಪಾರ್ಟಿಸಿಪೇಟರಿ ಸ್ಟ್ರಾಟಜೀಸ್ – ಎ ಸ್ಟಡಿ. http://cer.ica.coop/file ನಿಂದ ಪಡೆಯಲಾಗಿದೆ.

೩೩. ದಕ್ಷಿಣ ಕನ್ನಡ ಕೋ–ಆಪರೇಟಿವ್ ಮಿಲ್ಕ್ ಪ್ರೊಡ್ಯೂಸರ್ಸ್ ಯೂನಿಯನ್ ಲಿಮಿಟೆಡ್, (೨೦೧೨). www.dkmul.com ನಿಂದ ಪಡೆಯಲಾಗಿದೆ.

೩೪. ಕರ್ನಾಟಕ ಕೋ–ಆಪರೇಟಿವ್ ಮಿಲ್ಕ್ ಪ್ರೊಡ್ಯೂಸರ್ಸ್ ಫೆಡರೇಶನ್ ಲಿಮಿಟೆಡ್ (ಕೆ.ಎಂ.ಎಫ್.), (2016). www.kmfnandini.coop ನಿಂದ ಪಡೆಯಲಾಗಿದೆ.

ಅನುಬಂಧ-೦೨

ಪ್ರಶ್ನಾವಳಿ

ಅನುಬಂಧ-೨

ಪ್ರಶ್ನಾವಳಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡೈರಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ, ಸಾಮಾಜಿಕ ಸಬಲೀಕರಣ
ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇದರ ಎಂ.ಫಿಲ್ ಪದವಿಗಾಗಿ ರಚಿಸಲ್ಪಟ್ಟ ಪ್ರಶ್ನಾವಳಿ

ಸಂಶೋಧಕರು: ವಾಣಿಶ್ರೀ ವೈ
ಅಭಿವೃದ್ಧಿ ಅಧ್ಯಯನ ವಿಭಾಗ
ಕರ್ನಾಟಕ ಥಿಯೋಲಾಜಿಕಲ್
ಸಂಶೋಧನ ಕೇಂದ್ರ
ಬಲ್ಮಠ ಮಂಗಳೂರು.

ವೈಯುಕ್ತಿಕ ಮಾಹಿತಿ

೧. ಹೆಸರು :

೨. ವಯಸ್ಸು :

ಎ) 20–30 ಬಿ) 30–50 ಸಿ) 50 ಮೇಲ್ಪಟ್ಟು

೩. ಗಂಡ/ತಂದೆಯ ಹೆಸರು :

೪. ಶಿಕ್ಷಣ

ಎ) ಅನಕ್ಷರಸ್ಥ ಬಿ) ಪ್ರಾಥಮಿಕ ಸಿ) ಪ್ರೌಢ ಡಿ)ಪಿಯುಸಿ ಇ) ಪದವಿ

೫. ಭೌಗೋಳಿಕ ಹಿನ್ನೆಲೆ

ಎ) ಗ್ರಾಮೀಣ ಬಿ) ನಗರ

೬. ಧರ್ಮ

ಎ) ಹಿಂದೂ ಬಿ) ಮುಸ್ಲಿಂ ಸಿ) ಕ್ರಿಶ್ಚಿಯನ್ ಡಿ) ಇತರೆ

೭. ವೈವಾಹಿಕ ಸ್ಥಿತಿ

ಎ) ವಿವಾಹಿತೆ ಬಿ) ಅವಿವಾಹಿತೆ

೮. ವೃತ್ತಿ

ಎ) ಕೃಷಿ ಮತ್ತು ಪಶುಸಂಗೋಪನೆ ಬಿ) ಕೃಷಿಯೇತರ ಮತ್ತು ಪಶುಸಂಗೋಪನೆ

ಸಿ) ಕೇವಲ ಪಶುಸಂಗೋಪನೆ

ವೃತ್ತಿ ಪರ ಮಾಹಿತಿ

೯. ಡೈರಿ ಸಂಘಕ್ಕೆ ಸದಸ್ಯರಾಗಿ ಸೇರಿದ ಉದ್ದೇಶ

ಎ) ಹೈನುಗಾರಿಕೆಯನ್ನು ಉಪ ಉದ್ಯೋಗವನ್ನಾಗಿ ಕೈಗೊಳ್ಳಲು

ಬಿ) ಮಾರುವ ಹಾಲಿಗೆ ಉತ್ತಮ ಬೆಲೆ ಪಡೆಯಲು

ಸಿ) ಸಾಲ ಸವಲತ್ತುಗಳನ್ನು ಪಡೆಯಲು

ಡಿ) ಪಶುವೈದ್ಯ ಸೇವೆಯನ್ನು ಪಡೆಯಲು

ಇ) ಸಮುದಾಯದ ಉತ್ತಮತೆಗಾಗಿ

೧೦.ಸದಸ್ಯತ್ವದ ಅವಧಿ

ಎ) 3 ವರ್ಷಗಳಿಗಿಂತ ಕಡಿಮೆ ಬಿ) 3–6 ವರ್ಷ ಸಿ) 6 ವರ್ಷಕ್ಕೆ ಮೇಲ್ಪಟ್ಟು

೧೧. ಡೈರಿ ಸಂಘದ ಸದಸ್ಯರಾಗಲು ಪ್ರೇರೇಪಿಸಿದ ಅಂಶ

ಎ) ಕೆ.ಎಂ.ಎಫ್. ನಿಂದ ಪ್ರೇರೇಪಿತರಾಗಿ

ಬಿ) ಕುಟುಂಬ ಸದಸ್ಯರ ಪ್ರೇರಣೆ

ಸಿ) ಮಾಧ್ಯಮಗಳ ಪ್ರೇರಣೆ

ಡಿ) ಸ್ವಯಂ ಪ್ರೇರಿತ

ಇ) ಇತರೆ ಕಾರಣಗಳು

೧೨. ನಿಮ್ಮ ಬಳಿ ಹಾಲು ಉತ್ಪಾದಿಸುವ ಪಶುಗಳ ಸಂಖ್ಯೆ

ಎ) ಒಂದೇ ಒಂದು ಬಿ) 2 ರಿಂದ 3 ಸಿ) 4 ರಿಂದ ಮೇಲ್ಪಟ್ಟು

೧೩. ಡೈರಿ ಸಂಘವು ಹಾಲು ಉತ್ಪಾದಿಸುವ ಪಶುಗಳನ್ನು ಕೊಳ್ಳಲು ಸಹಾಯ ಮಾಡುತ್ತದೆಯೇ ?

ಎ) ಹೌದು ಬಿ) ಇಲ್ಲ

೧೪. ಪಶು ಆಹಾರವು ಡೈರಿ ಸಂಘದಿಂದ ಕಡಿಮೆ ಬೆಲೆಯಲ್ಲಿ ದೊರಕುತ್ತದೆಯೇ ?

ಎ) ಹೌದು ಬಿ) ಇಲ್ಲ

೧೫. ಹಾಲು ಮಾರಾಟದಲ್ಲಿ ಡೈರಿ ಸಂಘವು ಒದಗಿಸುವ ಸವಲತ್ತುಗಳನ್ನು ಇಷ್ಟ ಪಡುತ್ತೀರಾ ?

ಎ) ಹೌದು ಬಿ) ಇಲ್ಲ

೧೬. ಪಶು ಆಹಾರವನ್ನು ಎಲ್ಲಿಂದ ಖರೀದಿಸುತ್ತೀರಿ ?

ಎ) ಹಾಲು ಉತ್ಪಾದಕರ ಸಹಕಾರ ಸಂಘದಿಂದ

ಬಿ) ಖಾಸಗಿಯಾಗಿ ಹೊರಗಿನಿಂದ

೧೭. ಯಾವ ರೀತಿಯಲ್ಲಿ ಹಾಲು ಮಾರಾಟ ಮಾಡುತ್ತೀರಿ ?

ಎ) ಡೈರಿ ಸಂಘಗಳ ಮೂಲಕ ಹಾಲು ಮಾರಾಟ

ಬಿ) ಖಾಸಗಿಯಾಗಿ ಮಾರಾಟ

ಸಿ) ಡೈರಿ ಸಂಘಗಳ ಮೂಲಕ ಹಾಗೂ ಖಾಸಗಿಯಾಗಿ ಹಾಲು ಮಾರಾಟ

೧೮. ಡೈರಿ ಸಹಕಾರಿ ಸಂಘವು ಸದಸ್ಯರಿಗೆ ಹೇಗೆ ಹಣ ಪಾವತಿ ಮಾಡುತ್ತದೆ ?

a) ದಿನಾಲೂ b) ವಾರಕ್ಕೊಮ್ಮೆ c) 15 ದಿನಗಳಿಗೊಮ್ಮೆ

೧೯. ಸಹಕಾರಿ ಸಂಘವು ಹಣ ಪಾವತಿಯಲ್ಲಿ ವಿಳಂಬ ಮಾಡುತ್ತದೆಯೇ ?

a) ಹೌದು b) ಇಲ್ಲ

೨೦.ನೀವು ಡೈರಿ ಸಹಕಾರ ಸಂಘ ಪ್ರಾಯೋಜಿಸಿದ ಸ್ವಸಹಾಯ ಗುಂಪುಗಳಲ್ಲಿ ಸದಸ್ಯರಾಗಿದ್ದೀರಾ ?

ಎ) ಹೌದು ಬಿ) ಇಲ್ಲ

೨೧. ಹೌದಾದರೆ ಯಾವ ಕಾರಣಕ್ಕಾಗಿ ಸ್ವ-ಸಹಾಯ ಸಂಘದ ಸದಸ್ಯರಾಗಿರುತ್ತೀರಿ ?

ಎ) ಸಾಲ ಪಡೆಯಲು ಬಿ) ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಲು

ಸಿ) ಆರ್ಥಿಕವಾಗಿ ಸ್ವಾತಂತ್ರ್ಯ ಪಡೆಯಲು ಡಿ) ಉಳಿತಾಯವನ್ನು ಉತ್ತೇಜಿಸಲು

೨೨. ಸ್ವ-ಸಹಾಯ ಸಂಘಗಳಿಂದ ಸಾಲ ಪಡೆದಿರುತ್ತೀರಾ ?

ಎ) ಹೌದು ಬಿ) ಇಲ್ಲ

೨೩. ಹೌದಾದರೆ ಯಾವ ಉದ್ದೇಶಕ್ಕೆ ?

ಎ) ಹಾಲು ಉತ್ಪಾದನೆಯ ಪಶುಗಳನ್ನು ಖರೀದಿಸಲು

ಬಿ) ಕೃಷಿ ಕೆಲಸಗಳಿಗಾಗಿ

ಸಿ) ಹಳೆಯ ಸಾಲವನ್ನು ಪಾವತಿಸಲು

ಡಿ) ಮಕ್ಕಳ ವಿದ್ಯಾಭ್ಯಾಸ, ಮದುವೆ ಮತ್ತು ಇತರ ಉದ್ದೇಶಗಳಿಗಾಗಿ

೨೪. ನಿಮ್ಮ ಸ್ವ-ಸಹಾಯ ಸಂಘವು ಯಾವುದಾದರೂ ಬ್ಯಾಂಕ್‌ಗಳೊಂದಿಗೆ ಸಂಪರ್ಕ ಹೊಂದಿದೆಯೇ?

ಎ) ಗ್ರಾಮೀಣ ಬ್ಯಾಂಕುಗಳು ಬಿ) ವಾಣಿಜ್ಯ ಬ್ಯಾಂಕ್‌ಗಳು

ಸಿ) ಇತರೆ ಬ್ಯಾಂಕ್‌ಗಳು ಡಿ) STEP

೨೫. ಯಾವ ಮೂಲಗಳಿಂದ ಸಾಲ ಪಡೆಯುತ್ತೀರಿ.

ಎ) ವಾಣಿಜ್ಯ ಬ್ಯಾಂಕ್‌ಗಳಿಂದ ಬಿ) ಗ್ರಾಮೀಣ ಬ್ಯಾಂಕ್‌ಗಳಿಂದ ಸಿ) STEP ಗಳಿಂದ

ಡಿ) ಖಾಸಗಿ ಬ್ಯಾಂಕ್‌ಗಳಿಂದ ಇ) ಸಹಕಾರಿ ಬ್ಯಾಂಕ್‌ಗಳಿಂದ ಎಫ್) ಹೊರಗಿನವರಿಂದ

೨೬. ನಿಮ್ಮ ಸ್ವ–ಸಹಾಯ ಸಂಘವು ಯಾವುದಾದರೂ NGOನೊಂದಿಗೆ ಸಂಪರ್ಕ ಹೊಂದಿದೆಯೇ ?

ಎ) SKDRDP ಬಿ) ಮಹಿಳಾ ವಿವಿದೋದ್ದೇಶ ಸ್ವಸಹಾಯ ಸಂಘ

ಇ) ಪ್ರೇರಣಾ NGO

೨೭. ಸ್ವ–ಸಹಾಯ ಸಂಘಗಳು ತರಬೇತಿ ಕಾರ್ಯಕ್ರಮಗಳನ್ನು ಒದಗಿಸುತ್ತಿದೆಯೇ ? ಹೌದಾದಲ್ಲಿ ಯಾರು ತರಬೇತಿ ಕಾರ್ಯಕ್ರಮ ನೀಡುತ್ತಾರೆ ?

ಎ) NGO ಸದಸ್ಯರು ಬಿ) ಸರಕಾರಿ ಅಧಿಕಾರಿಗಳು

ಸಿ) ಸಂಪನ್ಮೂಲ ವ್ಯಕ್ತಿಗಳು ಡಿ) ಬ್ಯಾಂಕ್ ಸಿಬ್ಬಂದಿಗಳು

೨೮. ಯಾವ ಉದ್ದೇಶಕ್ಕಾಗಿ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುತ್ತೀರಿ ?

ಎ) ಕೌಶಲ್ಯ ಅಭಿವೃದ್ಧಿ ಬಿ) ದೃಷ್ಟಿಕೋನ ಬದಲಾಯಿಸಲು

ಸಿ) ಆತ್ಮಸ್ಥೈರ್ಯ ವೃದ್ಧಿಗಾಗಿ ಡಿ) ಸ್ವಾವಲಂಬನೆಗೆ ಇ) ಇತರೆ

೨೯. ಹಾಲಿನ ಉತ್ಪಾದನೆಯ ಪ್ರಮಾಣ

ಎ) 3–6 ಲೀಟರ್‌ಗಳು ಬಿ) 6–9 ಲೀಟರ್‌ಗಳು

ಸಿ) 15 ಲೀಟರ್ ಮೇಲ್ಪಟ್ಟು

೩೦. ಡೈರಿ ಸಹಕಾರ ಸಂಘಗಳು ಆಯೋಜಿಸಿದ ತರಬೇತು ಕಾರ್ಯಕ್ರಮಗಳಿಗೆ ಹಾಜರಾಗುತ್ತೀರಾ ? ಹೌದಾದರೆ ಯಾವ ತರಬೇತು ಕಾರ್ಯಕ್ರಮ?

೩೧. STEP ನ ತರಬೇತು ಕಾರ್ಯಕ್ರಮಗಳಿಂದ ನಿಮಗೆ ಲಾಭವಿದೆಯೇ ?

ಎ) ಹೌದು ಬಿ) ಇಲ್ಲ

೩೨. STEP ಮೂಲಕ ಆಯೋಜಿಸಿದ ತರಬೇತು ಕಾರ್ಯಕ್ರಮಗಳಿಂದ ಪಡೆದ ಪ್ರಯೋಜನಗಳು

ಎ) ಲಿಂಗ ಸಂವೇದನೆ ಬಿ) ಆರೋಗ್ಯ ಮತ್ತು ಪೋಷಣೆ

ಸಿ) ಕಾನೂನಿನ ಅರಿವು ಡಿ) ಡೈರಿ ಪಶುಗಳ ನಿರ್ವಹಣೆ

ಇ) ಮೇಲಿನ ಎಲ್ಲವೂ

೩೩. ಉದ್ಯೋಗಾವಕಾಶಗಳು ಹೆಚ್ಚಿವೆಯೇ ?

ಎ) ತುಂಬಾ ಅವಕಾಶಗಳು ಬಿ) ಕಡಿಮೆ ಅವಕಾಶಗಳು ಸಿ) ಅವಕಾಶಗಳಿಲ್ಲ.

೩೪.ಜಾನುವಾರುಗಳನ್ನು ಖರೀದಿಸಲು STEP ನ ಮೂಲಕ ಬಡ್ಡಿ ರಹಿತ ಸಾಲ ಪಡೆದಿರುತ್ತೀರಾ ?

ಎ) ಹೌದು ಬಿ) ಇಲ್ಲ

೩೫. "ಕ್ಷೀರ ಸಂಜೀವನಿ" ಯೋಜನೆಯಡಿಯಲ್ಲಿ ಉದ್ಯೋಗಾವಕಾಶಗಳು ಹೆಚ್ಚಿವೆಯೇ ?

ಎ) ಹೌದು ಬಿ) ಇಲ್ಲ

೩೬. "ಕ್ಷೀರ ಸಂಜೀವನಿ" ಯೋಜನೆಯಡಿಯಲ್ಲಿ ಪಡೆದ ಲಾಭಗಳು

ಎ) ಅಂಚಿನ ಹಣದ ಸೌಲಭ್ಯ

ಬಿ) ವ್ಯವಸ್ಥಾಪನಾ ತರಬೇತಿ

ಸಿ) ಕಂಪ್ಯೂಟರ್ ತರಬೇತಿ

ಡಿ) ಸಾಮಾನ್ಯ ಜಾಗೃತಿ ಕಾರ್ಯಕ್ರಮಗಳು

ಇ) ಮೇವು ಸಂಸ್ಕರಣ ಘಟಕ, ಸಾವಯವ ಗೊಬ್ಬರ ಘಟಕ

ಎಫ್) ಮೇವು ಉತ್ಪಾದನಾ ಯಂತ್ರದ ಅಳವಡಿಕೆ

ಜಿ) ಮೇಲಿನ ಎಲ್ಲವೂ

೩೭. ನೀವು WTG ಮತ್ತು WDCLP ಹಾಗೂ NDP-1 ಯೋಜನೆಗಳ ಪ್ರಯೋಜನ ಪಡೆದಿರುತ್ತೀರಾ?

ಎ) ಹೌದು ಬಿ) ಇಲ್ಲ

ಮಹಿಳೆಯರ ಆರ್ಥಿಕ ಸಬಲೀಕರಣ

೩೮. ಡೈರಿ ಸಹಕಾರ ಸಂಘದಿಂದ ಆರ್ಥಿಕ ಸ್ವಾವಲಂಬನೆ ಆಗಿದೆಯೇ ?
ಎ) ಹೌದು ಬಿ) ಇಲ್ಲ

೩೯. ಒಂದು ವರ್ಷದಲ್ಲಿ ಸದಸ್ಯರ ಸರಾಸರಿ ಆದಾಯ
a) 3000–5000 b) 5000–7000 c) 8000 ರಿಂದ ಮೇಲ್ಪಟ್ಟು

೪೦. ಸಹಕಾರಿ ಸಂಘಗಳ ಸದಸ್ಯರಾದ ಮೇಲೆ ನಿಮ್ಮ ಆದಾಯ
ಎ) ತುಂಬಾ ಹೆಚ್ಚಿದೆ ಬಿ) ಹೆಚ್ಚಿದೆ ಸಿ) ಕಡಿಮೆಯಾಗಿದೆ
ಡಿ) ತುಂಬಾ ಕಡಿಮೆಯಾಗಿದೆ ಇ) ಹೆಚ್ಚೂ ಇಲ್ಲ ಕಡಿಮೆ ಇಲ್ಲ.

೪೧. ನಿಮ್ಮ ಆದಾಯದ ಮೂಲ
ಎ) ನೀವೇ ಸಂಪಾದಿಸಿದ ಹಣ ಬಿ) ಗಂಡನ ಸಂಪಾದನೆ
ಸಿ) ನಿಮ್ಮ ಹಾಗೂ ಗಂಡನ ಸಂಪಾದನೆ

೪೨. ಆದಾಯವನ್ನು ಉಳಿತಾಯ ಮಾಡುತ್ತೀರಾ ? ಹೌದಾದರೆ ಎಲ್ಲಿ ?
ಎ) ಬ್ಯಾಂಕ್‌ಗಳಲ್ಲಿ ಬಿ) ಅಂಚೆ ಕಛೇರಿಗಳಲ್ಲಿ ಸಿ) ಸ್ವಸಹಾಯ ಸಂಘಗಳಲ್ಲಿ
ಡಿ) ಸಹಕಾರಿ ಬ್ಯಾಂಕ್‌ಗಳಲ್ಲಿ

೪೩.ಆದಾಯ ಉಳಿತಾಯದ ಉದ್ದೇಶ
ಎ) ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಬಿ) ಮಕ್ಕಳ ಮದುವೆ ಮತ್ತು ವಿದ್ಯಾಭ್ಯಾಸ
ಸಿ)ತುರ್ತು ಪರಿಸ್ಥಿತಿಗಳಿಗೆ

೪೪.ಬಡತನ ನಿರ್ಮೂಲನೆಯಾಗಿದೆಯೇ ?
ಎ) ಹೌದು ಬಿ) ಇಲ್ಲ

೪೫. ವಾಸಿಸುವ ಮನೆ
ಎ) ಸ್ವಂತ ಮನೆ ಬಿ) ಬಾಡಿಗೆ ಮನೆ

೪೬.ಯಾವ ತರದ ಮನೆ
ಎ) ಹಂಚಿನ ಮನೆ ಬಿ) ತಾರಸಿ ಮನೆ

೪೭. ಮಕ್ಕಳ ವಿದ್ಯಾಭ್ಯಾಸ
ಎ) ಸರಕಾರಿ ಶಾಲೆಗಳಲ್ಲಿ ಬಿ) ಖಾಸಗಿ ಶಾಲೆಗಳಲ್ಲಿ

೪೮.ಯಾವುದಾದರೂ ಆಸ್ತಿ ಖರೀದಿಸಿದ್ದೀರಾ. ಹೌದಾದರೆ ಯಾವುದು?
ಎ) ಒಡವೆ ಬಿ) ವಾಹನ ಸಿ) ಮನೆ
ಡಿ) ಇತರ ಮನೆ ಸಾಮಾಗ್ರಿಗಳು

೪೯.ಕಡ್ಡಾಯ ಠೇವಣಿ ಸೌಲಭ್ಯವಿದೆಯೇ ?

a) ಹೌದು b) ಇಲ್ಲ

ಮಹಿಳೆಯರ ಸಾಮಾಜಿಕ ಸಬಲೀಕರಣ

		ಹೆಚ್ಚಿದೆ	ತಟಸ್ಥ
1.	ಮಕ್ಕಳ ವಿದ್ಯಾಭ್ಯಾಸದ ಅರಿವು		
2.	ಆರೋಗ್ಯ ಮಾಹಿತಿಯ ಅರಿವು		
3.	ಹೆಂಗಸರ ವಿದ್ಯಾಭ್ಯಾಸದ ಅರಿವು		
4.	ಸಮಾಜದಲ್ಲಿ ಮಾನ್ಯತೆ		
5.	ನೈರ್ಮಲ್ಯದ ಸೌಲಭ್ಯಗಳ ಅರಿವು		
6.	ಆಹಾರ ಮತ್ತು ಪೋಷಣೆ ಅರಿವು		
7.	ಕುಟುಂಬ ಯೋಜನೆ ಅರಿವು		
8.	ಕಾನೂನಿನ ಅರಿವು		
9.	ಸಾಮಾಜಿಕ ಒಡನಾಟ		

ಮಹಿಳೆಯರ ರಾಜಕೀಯ ಕ್ಷೇತ್ರದಲ್ಲಿ ಸಬಲೀಕರಣ

		ಹೆಚ್ಚಿದೆ	ತಟಸ್ಥ
1.	ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವಿಕೆ		
2.	ಚುನಾವಣೆಗೆ ನಾಮ ನಿರ್ದೇಶನ		
3.	ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವಿಕೆ		
4.	ಸಂಘ ಸಂಸ್ಥೆಗಳ ಅಧ್ಯಕ್ಷೆ		
5.	ಸಂಘ ಸಂಸ್ಥೆಗಳಲ್ಲಿ ಸಕ್ರೀಯ ಪಾಲ್ಗೊಳ್ಳುವಿಕೆ		

ಮಹಿಳೆಯರ ಕೌಶಲ್ಯ ಅಭಿವೃದ್ಧಿ

		ಹೆಚ್ಚಿದೆ	ತಟಸ್ಥ
1.	ಯೋಜನಾ ಕೌಶಲ್ಯ		
2.	ಸಂಘಟನಾ ಕೌಶಲ್ಯ		
3.	ಸಂವಹನಾ ಕೌಶಲ್ಯ		
4.	ಹಣ ನಿರ್ವಹಣೆ ಕೌಶಲ್ಯ		
5.	ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯ		

ಮಹಿಳಾ ಸದಸ್ಯರು ಎದುರಿಸುತ್ತಿರುವ ತೊಂದರೆಗಳು

೫೦. ನೀವು ಏನಾದರೂ ವೈಯುಕ್ತಿಕ ತೊಂದರೆಗಳನ್ನು ಎದುರಿಸುತ್ತಿದ್ದೀರಾ ?

a) ಹೌದು b) ಇಲ್ಲ

೫೧. ಡೈರಿ ಸಹಕಾರ ಸಂಘದಲ್ಲಿ ಸದಸ್ಯರಾದ ಮೇಲೆ ಕುಟುಂಬ ಸದಸ್ಯರ ಅನಿಸಿಕೆ ಏನು ?

a) ಸಂತೋಷ b) ಅಸಂತೋಷ c) ಸಮಾಧಾನಕರ

೫೨. ಪತಿಯ ಹಾಗೂ ಕುಟುಂಬ ಸದಸ್ಯರ ಸಹಕಾರ ದೊರಕುತ್ತಿದೆಯೇ ?

a) ಹೌದು b) ಇಲ್ಲ

೫೩. ಸಹಕಾರಿ ಸಂಘದ ಸದಸ್ಯರಾದ ಮೇಲೆ ಕುಟುಂಬದ ಜವಾಬ್ದಾರಿ ನಿರ್ವಹಿಸುವಲ್ಲಿ ಬದಲಾವಣೆಯಾಗಿದೆಯೇ ?

a) ಹೌದು b) ಇಲ್ಲ

೫೪. ಇತರ ತೊಂದರೆಗಳೇನಾದರೂ ಇವೆಯೇ ?

a) ಸಾಕ್ಷರತೆ b) ಆತ್ಮಸ್ಥೈರ್ಯ c) ಶಿಕ್ಷಣ d) ಕೌಶಲ್ಯ e) ಇತರೆ

೫೫. ಸಹಕಾರ ಸಂಘಕ್ಕೆ ವಿತರಿಸಿದ ಹಾಲಿಗೆ ನೀವು ಉತ್ತಮ ಬೆಲೆ ಪಡೆಯುತ್ತೀರಾ ?

a) ಹೌದು b) ಇಲ್ಲ

೫೬. ನಿಮ್ಮ ಪಶುಗಳಿಗೆ ಸಕಾಲಿಕ ವೆಟರಿನರಿ ಸೇವೆಗಳು ದೊರಕುತ್ತದೆಯೇ ?

a) ಹೌದು b) ಇಲ್ಲ

೫೭. ಪಶುವೈದ್ಯರು ಹೆಚ್ಚಿನ ಶುಲ್ಕ ಪಡೆಯುತ್ತಾರೆಯೇ ?

a) ಹೌದು b) ಇಲ್ಲ

೫೮. ಹಾಲನ್ನು ಹಾಲಿನ ಉತ್ಪನ್ನಗಳಿಗೆ ಪರಿವರ್ತಿಸಲು ಸರಿಯಾದ ತರಬೇತಿ ಕಾರ್ಯಕ್ರಮಗಳು ಲಭ್ಯವಿದೆಯೇ ?

a) ಹೌದು b) ಇಲ್ಲ

೫೯. ಸಾಲ ಸೌಲಭ್ಯಗಳು ಸುಲಭವಾಗಿ ದೊರಕುತ್ತಿದೆಯೇ ?

a) ಹೌದು b) ಇಲ್ಲ

೬೦. ಸಾಲ ಮರುಪಾವತಿಯಲ್ಲಿ ಏನಾದರೂ ತೊಂದರೆ ಅನುಭವಿಸುತ್ತಿದ್ದೀರಾ. ಹೌದಾದಲ್ಲಿ ಕಾರಣಗಳೇನು?

ಎ) ಹಾಲು ಉತ್ಪಾದನೆ ಕಡಿಮೆಯಾಗಿರುವುದು.

ಬಿ) ಸೂಕ್ತ ಪ್ರೋತ್ಸಾಹ ಧನ ಸಿಗದಿರುವುದು.

ಸಿ) ಪಶುವಿನ ಆರೋಗ್ಯ ಸಮಸ್ಯೆ

ಡಿ) ಪಶುವಿಗೆ ಸೂಕ್ತ ಆಹಾರ ಸಿಗದಿರುವುದು.

೬೧. ಸಾಲಕ್ಕೆ ಸಂಬಂಧಿಸಿದ ವಿಮಾಪಾಲಿಸಿಗಳ ಅರಿವು ನಿಮಗಿದೆಯೇ ?

a) ಹೌದು b) ಇಲ್ಲ

೬೨. ಔದ್ಯೋಗಿಕ ಚಲನಶೀಲತೆ ಇಲ್ಲದಿರಲು ಕಾರಣಗಳು

a) ಮನೆ ಮತ್ತು ವ್ಯವಹಾರದ ಒತ್ತಡ

b) ಆತ್ಮಸ್ಥೈರ್ಯದ ಕೊರತೆ

c) ಹಣಕಾಸು ಸಂಪನ್ಮೂಲಗಳ ಕೊರತೆ

d) ಮಹಿಳೆಯರಿಗೆ ದೊರಕುವ ಅವಕಾಶಗಳ ಜ್ಞಾನದ ಕೊರತೆ

೬೩. ವಿಮಾ ಪಾಲಿಸಿಗಳಿಂದ ಏನಾದರೂ ಲಾಭ ಪಡೆದಿದ್ದೀರಾ ?

a) ಹೌದು b) ಇಲ್ಲ

೬೪. ಸರಕಾರವು ತರಬೇತಿ ಕಾರ್ಯಕ್ರಮಗಳಿಗೆ ಸಾಕಷ್ಟು ಧನ ಸಹಾಯವನ್ನು ಒದಗಿಸುತ್ತದೆಯೇ ?

a) ಹೌದು b) ಇಲ್ಲ

೬೫. ಸರಕಾರದ ಬೆಂಬಲದಲ್ಲಿ ಯಾವ ರೀತಿಯ ಅನಾನುಕೂಲತೆ ಅನುಭವಿಸುತ್ತೀರಿ ?

a) ಸಾಲ ಹಾಗೂ ಸಬ್ಸಿಡಿಗಳ ಅನುಮೋದನೆಯಲ್ಲಿ ಕುಂದುಕೊರತೆ

b) ಸರಕಾರದ ಬೆಂಬಲ ಯೋಜನೆಗಳ ಜ್ಞಾನ ಇಲ್ಲದಿರುವುದು ಅಥವಾ ಕಳಪೆ ಜ್ಞಾನ

c) ಮಹಿಳಾ ಉದ್ಯಮಿಗಳೊಂದಿಗೆ ತಾರತಮ್ಯ

d) ವಿವಿಧ ಇಲಾಖೆಗಳ ನಡುವೆ ಸಮನ್ವಯದ ಕೊರತೆ